ಸಂಪುಟ: ೪

ಸಂಚಿಕೆ: ೨

ಕಲ್ಯಾಣ ಕಿರಣ



ಕಲ್ಯಾಣ ಕಿರಣ

ಮಾ ಸ ಪ ತ್ರಿ ಕೆ

ಪುಟ : | ನವೆಂಬರ್ ೧೯೭೮
ಚಿಕೆ : | ಬಸವಶಕೆ ೮ ೭ ೨
ತಿ ಸಂಚಿಕೆ | ವಾರ್ಷಿಕ ಚಂದಾ
ದು ರೂಪಾಯಿ | ಹನ್ನೆರಡು ರೂಪಾಯಿ

ಈ ಬೆಳಕಿನಲ್ಲಿ ಸುಳಿದಾಡಿದಾಗ?

ಮುಖಪುಟ: ಹಿಂದಿ ಚಲನಚಿತ್ರ ನಟಸಾರ್ವಭೌಮ ಶ್ರೀ ಅಶೋಕ್ ಕುಮಾರ್


ಹಿಂಬದಿಯ ಯೊದಿಕೆ : ಹಸ್ತಾಂತರದ ನಂತರ ಬಸವ ಮಂಟಪದಲ್ಲಿ

ಕಲ್ಯಾಣ ಕಿರಣ

ದೀಪಾವಳಿಯಂದು **ನುಡಿ–ನೈವೇದ್ಯ**

ಹಚ್ಚಿಕೊಳ್ಳಿ ನಿಚ್ಚದೀಪ ಅಂತರಂಗದಿ
ಸ್ವಚ್ಛಗೊಳಿಸಿ ಮನದ ಗುಡಿಯ ಅದರ ಬೆಳಕಲಿ !
ನಯನವಿರದ ಹುಟ್ಟುಗುರುಡ ಲೋಕವರಿಯನು
ನಯನವಿರ್ದು ಅರಿವಿರದವ ಶಿವನನರಿಯನು !
ಬುದ್ಧಿಯನ್ನು ಪ್ರಣತಿ ಮಾಡಿ ಅಧ್ಯಯನದ ಬತ್ತಿ ನೀಡಿ
ಚಿಂತನೆಯ ತೈಲವೆರೆದು ವೈಚಾರಿಕತೆಯ ಕಿಡಿಯ ತೀಡಿ !
ಅರಿವರಳದ ಭಕ್ತರಿಂದ ಆರತಿಯ ಒಲ್ಲನವನು
ಅರಿವಿನಿಂದ ಮಥನಿಸದಿರಲು ಒಲಿಯನೆಂದು ದೇವನು.
ಅರಿವು ಅರಳ್ವದೆಂದರೇನು ಬುದ್ಧಿ ಬಲಿವ ವಿದ್ಯೆಯೆ ?
ಅಂತರಂಗ ನೇತ್ರವರಳಿ ಸಹೃದಯತೆ ಮೂಡ್ವುದಲ್ತೆ !
ನೊಂದು ಬೆಂದು ಬಂದವರ ಮರುಕದಿಂದ ಕಾಣ್ಬಕಣ್ಣಗಳಿಪ ಭಾವಸಂಪದವು !
ಬಸವಳಿದು ಕುಸಿದವರ ಕಂಡು ಎರಡು ಹನಿ ನೀರ ಒಸರಿಸುವ ಕಾತುರವು
ಕಾಣಲಿಕ್ಕೆ ಕಣ್ಣಿಲ್ಲದವರ ಕಣ್ಣಾಗಿ ಬಾಳ್ವ ಬಗೆ
ನಡೆಯಲಿಕ್ಕೆ ಕಾಲಿಲ್ಲದವರ ಕೋಲಾಗಿ ನಿಲುವ ಬಗೆ
ಯಾರೊ ಹೊಸೆವ ಬತ್ತಿ ಸುಟ್ಟು, ಭಕ್ತರೀವ ತುಪ್ಪ ಉರಿಸಿ
ಲಕ್ಷ-ಕೋಟಿ ದೀಪಗಳ ಹಚ್ಚಿಮೆರೆವ ಹುಚ್ಚು ಅಚ್ಚ ಪೂಜೆಯೆ ?
ಜೀವನವನೇ ಪ್ರಣತಿ ಮಾಡಿ ಸನ್ನಡತೆಯ ತೈಲವೆರೆದು
ತ್ಯಾಗವೆಂಬ ಬತ್ತಿ ಚಾಚಿ ದೇವ ಕರುಣೆ ದೀಪ್ತಿ ಹಚ್ಚಿ
ಸೊಂಪಾದ ಬೆಳಕ ನೀಡಿ ತಂಪಾದ ಕಿರಣ ಚೆಲ್ಲಿ
ಕಂಪಾದ ನುಡಿ ಕಿಡಿಗಳ ಹೊಮ್ಮಿಸುವ ಸಚ್ಚಿದಾನಂದ ದೀಪ ಹಚ್ಚಿ !

—ಜಗದ್ಗುರು ಮಾತೆ ಮಹಾದೇವಿ



ಪೂಜ್ಯರಾದ ಮಾತೆಯವರಲ್ಲಿ ಪ್ರಣಾಮಗಳು

ಕಲ್ಯಾಣ ಕಿರಣ, ಅಕ್ಟೋಬರ್ ಸಂಚಿಕೆ ಅತಿ ಆನಂದ ಹೊತ್ತು ತಂದಿತು. "ಆನು ಒಲಿದಂತೆ ಹಾಡುವೆ" ವಿಭಾಗ ತೆರೆದು ವಚನಗಳಿಗೆ ವ್ಯಾಖ್ಯೆ ಬರೆಯಲಾರಂಭಿಸಿದ್ದು ಓದುಗರಿಗೆ ವರವಾಗಿದೆ. ವಿದ್ಯಾರ್ಥಿಗಳ ನೆಪದಲ್ಲಿ ಪ್ರೌಢಮತಿಗಳಿಗೆ ಅಮೃತ ಕುಂಭವಾಗಿದೆ. "ಬಯಲು ಬಯಲನೆ ಬಿತ್ತಿ" ವಚನ ನವನೀತ ವ್ಯಾಖ್ಯಾನ ಅದ್ಭುತವಾಗಿದೆ. ನಿಮ್ಮ ಲೆಕ್ಕಣಿಕೆಯಲ್ಲಿ ಬಸವಣ್ಣನವರ ಸಮಗ್ರ ವಚನಗಳಿಗೆ ವ್ಯಾಖ್ಯಾನ ಮೂಡಿಬಂದರೆ ಸಾಹಿತ್ಯಲೋಕ ಸಮಾಜಗಳಿಗೆ ಮಹದುಪಕಾರವಾಗುವುದು.

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ **ಎಸ್. ಎಂ. ಅಂಗಡಿ**

ಸತ್ವಪೂರ್ಣ ವಿಷಯಗಳಿಂದ ಅಕ್ಟೋಬರ್ ಪತ್ರಿಕೆ ಶೋಭಿಸುತ್ತಿದ್ದರೂ, ಮಂಗಲ ಸೂತ್ರವಿಲ್ಲದೆ ಆಭರಣ ಹೇರಿಕೊಂಡ ಗೃಹಿಣಿಯಂತಾಗಿದೆ ಆ ಕಲ್ಯಾಣ ಕಿರಣ, "ಬಸವ ಬೀಡಿನಿಂದ ಆಂಗ್ಲನಾಡಿಗೆ" ಲೇಖನದ ಕೊರತೆಯಿಂದಾಗಿ. ಈ ತಡೆ ರಹಿತ ಬಸ್ಸು (non-stop express) ಇದ್ದಕ್ಕಿದ್ದಂತೆ ನಿಂತ ಕಾರಣವೇನು ? ತಾತ್ಕಾಲಿಕ ತೊಂದರೆಯಿಂದ ನಿಂತಿದೆ, ಮುಂದೆ ಖಂಡಿತಾ ಓಡುತ್ತೆ ಎಂಬ ಭರವಸೆ ತಾಳಿದ್ದೇವೆ.

ಸಂಪತ್ತು ಮಲ್ಲಿಕಾರ್ಜುನಸ್ವಾಮಿ

ತಾವು ಬರೆಯಲಾರಂಭಿಸಿರುವ "ಆನು ಒಲಿದಂತೆ ಹಾಡುವೆ" ಅತ್ಯಂತ ಉಪಯುಕ್ತ ಮತ್ತು ಜಿಜ್ಞಾಸುಗಳಿಗೆ ಮಾರ್ಗದರ್ಶಕ ಕೈಪಿಡಿ. "ವಚನ ನವನೀತ" ವಚನ ಸಾಹಿತ್ಯ ಭಾಂಡಾರದ ಕೀಲಿಕೈಯಂತಿದೆ. ಬಹಳ ದಿವಸಗಳ ನಮ್ಮ ಹಾರೈಕೆ ಇಂದು ಫಲಿಸುತ್ತಿದೆ, ಲಭಿಸುತ್ತಿದೆ. ಉತ್ತಮ ವ್ಯಾಸಂಗವನ್ನು ಒದಗಿಸುತ್ತದೆ.

ಮಹಾಗಾಂವ **ರುದ್ರಶೆಟ್ಟಿ ಪಾಟೀಲ್**

ಅಕ್ಟೋಬರ್ ತಿಂಗಳ ಕಲ್ಯಾಣ ಕಿರಣದಲ್ಲಿ ಬಂದಿರುವ ಪತ್ರಿಕೋದ್ಯಮ ಮತ್ತು ಪಾವಿತ್ರ್ಯತೆಯನ್ನು ಕುರಿತ ಸಂಪಾದಕೀಯ ಲೇಖನ "ಮಾತೃಹರಕೆ" ತೇಜಃಪೂರ್ಣವಾಗಿದೆ, ಗಂಭೀರವಾಗಿದೆ, ವ್ಯಂಗ್ಯಾತ್ಮಕವಾಗಿದೆ.

ಮೈಸೂರು **ಡಾ|| ದೇ. ಜವರೇಗೌಡ**



ಬಸವ ಗಂಗೋತ್ರಿ-ನನಸಾದ ಕನಸು

"ಬಸವ ಗಂಗೋತ್ರಿ" ಅಧ್ಯಾತ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಪ್ರಾರಂಭೋತ್ಸವ, ಅಕ್ಟೋಬರ್ ೮ರಂದು ಬೆಳಗಿನ ಹತ್ತು ಗಂಟೆಗೆ. ಏರುತ್ತಿರುವ ಸೂರ್ಯನ ಮಂದವಾದ, ಹಿತವಾದ ಕದಿರಿನ ಮಂಗಲೋದಕದಲ್ಲಿ ಮಿಂದಿತ್ತು ಆ ತಾಣ. ಬೆಂಗಳೂರು ದಕ್ಷಿಣ ತಾಲ್ಲೋಕಿನ ವ್ಯಾಪ್ತಿಗೆ ಸೇರಿದ ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲೆ ಇಪ್ಪತ್ತೊಂದನೆ ಕಿಲೋಮೀಟರ್ ದೂರದಲ್ಲಿರುವ ಆ ಭೂಮಿಗೆ ಚೈತನ್ಯ ಮೂಡಿತ್ತಂದು, ಅಸಂಖ್ಯಾತ ಶರಣರ ಬರವಿನಿಂದ.

ಅರಸಿ ತೊಳಲಿದರಿಲ್ಲ ಬಯಸಿ ಹೊಕ್ಕರಿಲ್ಲ
ತಪಸ್ಸು ಮಾಡಿದರಿಲ್ಲ ;
ಅದು ತಾನು ಬಹಕಾಲಕ್ಕಲ್ಲದೆ ಸಾಧ್ಯವಾಗದು
ಶಿವನೊಲಿದಲ್ಲದೆ ಕೈಗೂಡದು.
ಇಂತೆನ್ನ ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ
ಸಂಗನ ಬಸವಣ್ಣನ ಶ್ರೀಪಾದವ ಕಂಡು
ನಮೋನಮೋ ಎನುತಿರ್ದೆನು.

ಎಂಬ ಈ ಅಕ್ಕನ ವಚನವನ್ನು ಬಳಸಿಕೊಂಡು, ಕಡೆಯ ಮೂರು ಸಾಲುಗಳನ್ನು ಸ್ವಲ್ಪ ಬದಲಿಸಿ ಓದಿ ಬಿಟ್ಟರೆ ಅವೇ ನಮ್ಮ ಹೃದಯದಿಂಗಿತವನ್ನು ಮನಗಾಣಿಸಬಲ್ಲವು.

ಇಂತೆನ್ನ ವಿಶ್ವಗುರು ಬಸವಣ್ಣನೆಮಗೊಲಿದನಾಗಿ
ಬಸವ ಗಂಗೋತ್ರಿಯ ಸ್ಥಾಪನೆ ಸಾಧ್ಯವಾಯಿತ್ತು.

ಪುರುಷ ಪ್ರಯತ್ನದಿಂದ ಅರಸಬಹುದು ನಾವು, ಬಯಸಿ ಹಂಬಲಿಸಬಹುದು, ತಪಸ್ಸನ್ನೂ ಮಾಡಬಹುದು. ಆದರೆ ಯಾವುದೇ ಆಗಲೀ ತಾನು ಬಹಕಾಲಕ್ಕೆ ಮಾತ್ರ ಬರುವುದು. ಕೈಗೂಡಲಿಕ್ಕೆ ಪರಮಾತ್ಮನ ಒಲಿಮೆ ಅತ್ಯಾವಶ್ಯಕ. ಎಷ್ಟೋ ವರುಷಗಳ ಕನಸು ಅಂದು ನನಸಾಯಿತು. "ಎಡದ ಕೈಯಲ್ಲಿ ಲಿಂಗಪೂಜೆ, ಬಲದ ಕೈಯಲ್ಲಿ ಜಂಗಮ ಸೇವೆ" ಇದು ಬಸವೋಕ್ತಿ. ಪರಮಾತ್ಮನನ್ನು ಆರಾಧಿಸಬಹುದು. ಸ್ತುತಿಸ ಬಹುದು. ಧ್ಯಾನಿಸಬಹುದು. ಆದರೆ ಸೇವೆ ಗೈಯುವುದು ಹೇಗೆ ?

ಅದು 'ಊಡಿದೊಡುಣ್ಣದು, ನೀಡಿದೊಡರಿಯದು, ಕಾಡದು ಬೇಡದು' ; ಊಡಿದಡೆ ಉಂಬ ನೀಡಿದೊಡರಿಯುವ ಕಾಡುವ ಬೇಡುವ ತತ್ತ್ವಕ್ಕೆ ಮಾತ್ರ ಸೇವೆ ಮಾಡಲು ಸಾಧ್ಯ. ಆ ತತ್ತ್ವವೇ ಸಮಾಜ. ಮರಕ್ಕೆ ಬಾಯಿ ಬೇರಾದಂತೆ, ದೇವನ ಮುಖ ಸಮಾಜ. ಇಂಥ ಸಮಾಜ ಸೇವೆಗೆ ಒಂದು ಕಾರ್ಯಕ್ಷೇತ್ರ ಬೇಕಷ್ಟೆ. ವೈಜ್ಞಾನಿಕ ಸೂತ್ರಗಳನ್ನು ಪ್ರಯೋಗಿಸಲು ಪ್ರಯೋಗ ಶಾಲೆ ಅವಶ್ಯ ತಾನೆ ?. ಅದನ್ನು ನಿರ್ಮಿಸುವ ಆಕಾಂಕ್ಷೆ ಬಹುದಿನಗಳಿಂದ ಅದಮ್ಯವಾಗಿತ್ತು. ಕಾಯಕ ಜೀವಿಗಳ ಕೂಟವಾಗುವ, ಸಜೀವ ಸಾಧಕರ ಪ್ರಯೋಗ ಕ್ಷೇತ್ರವಾಗುವ, ಅನುಭಾವಿ ಗಳ ಸಂಗಮವಾಗುವ, ಸಾಹಿತಿಗಳ ಸರಸಿಯಾಗುವ, ತತ್ತ್ವಜ್ಞಾನಿಗಳ ನೆಲೆಯಾಗುವ, ಮಾನವೀಯ ಸೇವೆ-ತ್ಯಾಗಗಳ ಎಡೆಯಾಗುವ, ಮುಮುಕ್ಷುಗಳ ಸಾಧನಾಮಂದಿರ ವಾಗುವ ಸಂಸ್ಥೆಯೊಂದರ ಸ್ಥಾಪನೆ ಹಲವು ದಿನಗಳ ಕನಸು. ಅದಕ್ಕೆ ಸೂಕ್ತ ಸ್ಥಳದ ಅನ್ವೇಷಣೆ ಆರಂಭವಾಗಿ ಎಷ್ಟೋ ವರುಷಗಳಾಗಿದ್ದವು. ಮನಸ್ಸಿಗೆ ತೃಪ್ತಿಯಾಗು ವಂತಹುದು ಕಣ್ಣಳವಿಗೆ ಸಿಕ್ಕಿರಲಿಲ್ಲ. ಹೀಗಿರುವಾಗಲೇ ಆಕಸ್ಮಿಕವಾಗಿ ಕಂಡಿತು ಈಗ "ಬಸವ ಗಂಗೋತ್ರಿ" ಎಂಬ ಅಭಿದಾನ ತಾಳಿರುವ, ಹಿಂದಿ ಚಿತ್ರರಂಗದ ಸುಪ್ರಸಿದ್ಧ ನಟ ಅಶೋಕ ಕುಮಾರರ ಎಸ್ಟೇಟ್. ಈ ಮೊದಲೊಮ್ಮೆ ಆ ಸುದ್ದಿ ಯಾರೋ ಹೇಳಿದ್ದರೂ ಅದರ ಮೊತ್ತವನ್ನು ಊಹಿಸಿಯೇ ನೀಗಲಾರದ ತುತ್ತೆಂದು ನೋಡಲು ಸಹ ಪ್ರಯತ್ನಿಸಿರಲಿಲ್ಲ. ಈ ಪ್ರಸಂಗದ ಎರಡು ವರ್ಷಗಳ ನಂತರ ಅದರದೇ ಪ್ರಸ್ತಾಪ. "ಪ್ರಯತ್ನಿಸೋಣ; ಹಣವನ್ನು ಮುಟ್ಟಿಸುವ ವಿಧಾನದಲ್ಲಿ ಸ್ವಲ್ಪ ಔದಾರ್ಯವನ್ನು ಆ ಧನವಂತರು ತೋರಿಸಿದರೆ ಸಾಧ್ಯವೇಕಾಗಬಾರದು....?" (ಸಾರ್ವಜನಿಕ ಸೇವೆಗಾಗಿ ತ್ಯಾಗಮಾಡಿ ನಿಂತವರಿಗೆ, ಮಹಾನ್ ಕಾರ್ಯಕ್ಕೆ ಲಕ್ಷಗಟ್ಟಳೆ ಹಣಕೊಡುವುದು ಸಮಾಜಕ್ಕೆ ಭಾರವೇನಲ್ಲ. ಆದರೆ ಇಂದಿನ ಸಮಾಜದಲ್ಲಿ ಪವಿತ್ರ ವಾದ ಹಣ ವ್ಯಯವಾಗುತ್ತಿರುವದು ಎರಡು ರೀತಿಯಲ್ಲಿ; ಒಂದು ವಿಲಾಸ-ವೈಭೋಗಕ್ಕೆ; ಇನ್ನೊಂದು ಮೂಢಭಕ್ತಿಯ ತೃಪ್ತಿಗೆ. ತಮ್ಮಿಷ್ಟಕ್ಕೆ ತಾವೇ ಸುಖ ಲೋಲುಪತೆಯಲ್ಲಿ ತೇಲಬೇಕೆನ್ನುವವರು ಸಹಸ್ರಾರು ರೂಪಾಯಿಗಳನ್ನು ಶೃಂಗಾರ, ಕುಡಿತ, ವಿಲಾಸಗಳಿಗೆ ಕಳೆದರೆ, ಹಣವಿರುವ ಅನೇಕ ಮೂಢ ಧಾರ್ಮಿಕರು ಕಳೆಯು

ವುದು ಯಜ್ಞಯಾಗಗಳಿಗೆ, ವಜ್ರದ ಕಿರೀಟಗಳಿಗೆ, ಬಂಗಾರದ ಕಳಸಗಳಿಗೆ. ನೊಂದ ಬೆಂದ ಹೃದಯಗಳನ್ನು ಸಾಂತ್ವನಿಸುವ, ಆಶ್ರಯ ನೀಡುವ, ಸಮಾಜ-ರಾಷ್ಟ್ರ ನಿರ್ಮಾಣಗಳ ಕಡೆಗೆ ಒಲವು ತೋರುವ ಕಾರ್ಯಕ್ಕೆ ಗಮನ ಕೊಡುವುದೇ ಕಡಿಮೆ.)

ಧೈರ್ಯಮಾಡಿ ವ್ಯವಹಾರ ಆರಂಭಿಸಿದೆವು ; ಮುಂಬಯಿಗೆ ಪವನ ವಾಹನದಲ್ಲಿ ಹೋಗಿ ಬಂದುದೂ ಆಯಿತು. ಅವರ ಪ್ರತಿನಿಧಿಯಾಗಿ ಶ್ರೀ ರಾಮನಾಥನ್ ಬಂದು, ಬಸವ ಮಂಟಪದ ಮಹಾನ್ ಯೋಜನೆ, ಪ್ರಶಾಂತ ಪರಿಸರದಿಂದ ಪ್ರಭಾವಿತರಾಗಿ ಹೋದರು. ನಮ್ಮ ನಿರೀಕ್ಷೆಗೆ ಮೀರಿದ ಔದಾರ್ಯ ತೋರಿ ಭೂಮಿ ಕೊಡಲು ಒಪ್ಪಿದರು. ಅಶೋಕ್ ಕುಮಾರ್ ಮತ್ತು ವಿಶ್ವಕಲ್ಯಾಣ ಮಿಷನ್ ಮಧ್ಯೆ ಒಪ್ಪಂದ ವಾಯಿತು. ಸಾರ್ವಜನಿಕ ವಿಶ್ವಸ್ಥ ಸಂಸ್ಥೆಗಳು ಭೂಮಿಕೊಳ್ಳಬೇಕಾದರೆ ಭೂಸುಧಾರಣಾ ಕಾಯಿದೆ ಪ್ರಕಾರ ಸರ್ಕಾರದಿಂದ ಒಪ್ಪಿಗೆ ಪಡೆಯಬೇಕು. ಅವಲೋಕನೆಗ ಆಕಸ್ಮಿಕವಾಗಿ ಅಧಿಕಾರಿಗಳು ಬಂದಾಗ ನೂರಾರು ಜನ ಸದ್ಭಕ್ತರು ಕುಳಿತು ಪ್ರಾರ್ಥನೆ ಮಾಡುತ್ತಿರಬೇಕೆ? ಅಂದಿನ ಪ್ರವಚನದ ವಿಷಯ 'ಶ್ರೀ ಸಾಮಾನ್ಯನ ಧರ್ಮ'. ಒಟ್ಟಾರೆ ಎಲ್ಲವೂ ಪ್ರಭಾವ ಬೀರಿ, 'ಈ ಸಂಸ್ಥೆಗೆ ಬರುವ ಒಂದೊಂದು ಕಾಸೂ ಸಾರ್ಥಕಕ್ಕೆ. ಪರಹಿತಕ್ಕೆ' ಎಂದು ಮನದಟ್ಟಾಗಿ ಅಧಿಕಾರಿಗಳು ಒಪ್ಪಿಗೆ ಕೊಟ್ಟರು. (ಮಾತ್ರವಲ್ಲ ಬಸವ ಗಂಗೋತ್ರಿ ಪ್ರಾರಂಭೋತ್ಸವಕ್ಕೆ ಹಾಜರಾಗಿ. 'ಇಂಥದೊಂದು ಮಹಾನುಕಾರ್ಯದಲ್ಲಿ ಸೇವೆ ಮಾಡುವ ಭಾಗ್ಯ ನನ್ನದಾಯಿತು' ಎಂದು ಹರ್ಷಿಸಿದರು) ದಿ. 6-10-1978 ರಂದು ಅಶೋಕ್ ಕುಮಾರ್‌ರವರ ಭೂಕನ್ಯೆ ವಿಶ್ವಕಲ್ಯಾಣ ಮಿಷನ್ ವರನನ್ನು ಕೈವಿಡಿದಳು. ಸಂಸ್ಥೆಯ ಚೇರ್ಮನ್ ಸದ್ಗುರು ಲಿಂಗಾನಂದ ಸ್ವಾಮಿಗಳು ಭೂಲಕ್ಷ್ಮಿಯನ್ನು ಸ್ವಾಗತಿಸಿದರು. ಬಸವ ಮಂಟಪದಲ್ಲಿ ನಡೆದ ಈ ಹಸ್ತಾಂತರ ಹೃದಯ ಸ್ಪರ್ಶಿಯಾಗಿತ್ತು; ಬಸವ ಗುರು ಪೂಜೆಯ ನಂತರ ವಿಭೂತಿಯ ಬೊಟ್ಟನ್ನು ಭಾವುಕರಾಗಿ ಇರಿಸಿಕೊಂಡ ಅಶೋಕ್ ಕುಮಾರ್, "25 ವರ್ಷಗಳ ನಂತರ ಧರ್ಮಲಾಂಛನ ಧರಿಸುತ್ತಿರುವುದು ಇದೇ ಮೊದಲು. ಇದು ನನ್ನ ಮುಂಬಾಳನ್ನು ದೈವೀಮಯಗೊಳಿಸುವ ಸಂಕೇತವೆಂದು ಭಾವಿಸುತ್ತೇನೆ" ಎಂದರು. ಮುಂಗಡ ಹಣವನ್ನು ಪಡೆಯುವಾಗ "ನಾನು ಖರ್ಚು ಮಾಡಿದ್ದಕ್ಕಿಂತಲೂ ಕಡಿಮೆ ಹಣಕ್ಕೆ ಮಾರುತ್ತಿದ್ದರೂ ನನಗೆ ತೃಪ್ತಿ ಸಮನಿಸಿದೆ. ಧನ್ಯತೆಯ ಭಾವ ಪಡಿಮೂಡಿದೆ. ಸಮಾಜ-ರಾಷ್ಟ್ರಗಳಿಗೆ ಮುಡುಪಾಗಿರುವ ಮಹಾನ್ ಶಕ್ತಿಗಳಿಗೆ ನನ್ನ ಗಳಿಕೆ ಸೇರುತ್ತಿದೆ. ನಾನು ಗಳಿಸಿದ ಹಣದಲ್ಲಿ ಪುಣ್ಯದ ಅಂಶವಿತ್ತೆಂದೇ ನಿಮ್ಮಂಥವರಿಗೆ ಸಲ್ಲುತ್ತಿದೆ" ಎಂದರು. ಆ ಹಣವನ್ನು ಶ್ರದ್ಧೆಯಿಂದ ಸ್ವೀಕರಿಸಿ, "ನಾನು ಗಳಿಸಿದ್ದರಲ್ಲಿಯೇ ಅತ್ಯಂತ ಪವಿತ್ರವಾದ ಹಣವಿದು; ಇದನ್ನು

ಆಶೀರ್ವಾದಪೂರ್ವಕವಾಗಿ ತಮ್ಮಿಂದ ಬಂಧ ಕೊಡುಗೆ ಎಂದು ಭಾವಿಸುತ್ತೇನೆ” ಎಂದು ಉದ್ಗರಿಸಿದರು.


ದಿ. 8-10-1978ರಂದು “ಬಸವ ಗಂಗೋತ್ರಿ” ಫಲಕ ಮೇಲೆತ್ತಿ ನಿಂತು; ತಾ ಹೊತ್ತ ಕಾವಿ ಧ್ವಜವನ್ನು ಹಾರಾಡಿಸಿತು. ಸುಂದರವಾದ ಗೇಟಿನ ಕೀಲಿಯನ್ನು ಪೂಜ್ಯ ಸ್ವಾಮೀಜಿ ತೆರೆಯುತ್ತಿದ್ದಂತೆಯೇ, ಶರಣ ಸಮುದಾಯ ಟೇಪನ್ನು ಬಿಚ್ಚಿತು. ಅವುಗಳಿಗೆ ತೂಗು ಹಾಕಿದ್ದ ಪುಷ್ಪಜೋಳಿಗೆ ಜಾರಿ ಬಿದ್ದು ಹೂವನ್ನು ಚೆಲ್ಲಿದವು. ಈ ಸಂಭ್ರಮದಲ್ಲಿ ಮೀಯುವಾಗಲೇ ನನ್ನ ಕಣ್ಣು ಹರುಷ ಜಲಭರಿತವಾದವು. ಏಕೆ ? ಇದೇ ಅಕ್ಟೋಬರ್ 8, 1975 ರಂದು ಹತ್ತು ಗಂಟೆಗೆ ನಾನು ಪುನರ್ಜಾತಳಾಗಿ ಕಣ್ಣು ತೆರೆದಿದ್ದು. 1975ರ ಅಕ್ಟೋಬರ್ 7 ರಂದು ಬೆಳಿಗ್ಗೆ 8 ಗಂಟೆಗೆ ಕಾರಿನ ಭೀಕರ ಅಪಘಾತ ಎದುರಿಸಿದ್ದೆವು. ಆಗ ತಪ್ಪಿದ್ದ ಪ್ರಜ್ಞೆ ಅನೇಕ ವೈದ್ಯರ ಪ್ರಯತ್ನದಿಂದ 8ನೇ ತಾರೀಖು ಹತ್ತು ಗಂಟೆಗೆ ಮರುಕಳಿಸಿತ್ತು. ಸರಿಯಾಗಿ ಮೂರು ವರ್ಷಗಳ ನಂತರ ಅದೇ ದಿನಾಂಕ ಆ ವೇಳೆಗೆ ಬಸವ ಗಂಗೋತ್ರಿಯ ಉದ್ಘಾಟನೆ ! ಎಂಥ ವಿಚಿತ್ರ ದೈವೀಲೀಲೆ ! ಈ ಕಾರ್ಯಕ್ಕಾಗಿಯೇ ಪುನರ್ಜನ್ಮವನ್ನು ತಂದೆ ಬಸವಣ್ಣ ನೀಡಿರಬಹುದೆ ? ! ಇಲ್ಲವಾದಲ್ಲಿ ಅಗಸ್ಟ 15ಕ್ಕೆ ಆಗಬೇಕಿದ್ದ ಪ್ರಾರಂಭೋತ್ಸವ ಅಕ್ಟೋಬರ್ 8ಕ್ಕೆ ಆಯಿತೇಕೆ ? ಮಾತು ಮೂಕವಾಗಿತ್ತು, ಮನ ಸಂಭ್ರಾಂತವಾಗಿತ್ತು.

“ಬಸವ ಗಂಗೋತ್ರಿ” ಸಾಂಕೇತಿಕ ಹೆಸರು. ಜಾತಿರಹಿತ, ವರ್ಗವರ್ಣ ರಹಿತ ಸಮಾಜದ ಸಂಕೇತ ‘ಬಸವ’ನೆಂಬ ಹೆಸರು. ಭೌತಿಕ ಪ್ರಗತಿ, ನೈತಿಕ ಉದ್ಧಾರ, ಆಧ್ಯಾತ್ಮಿಕ ಉತ್ಥಾನಗಳ ತ್ರಿವೇಣಿ ಸಂಗಮವಾದ “ಕಲ್ಯಾಣ ರಾಜ್ಯ”ದ ಧೀಮಂತ ಪ್ರತಿನಿಧಿ ಬಸವಣ್ಣ. ಈ ಮಹಾಪುರುಷ ಕ್ರಾಂತಿ ಗಂಗೆಯ ಉಗಮಸ್ಥಾನ. ಜಗತ್ತು ಸಮತಾವಾದದ ಕಲ್ಪನೆಯನ್ನೂ ಕಂಡಿರದ ಕಾಲದಲ್ಲಿ, ಮಾನವ ಸ್ವಾತಂತ್ರ್ಯದ ಕ್ರಾಂತಿ ಕಹಳೆಯೂದಿದ ಧೀಮನ್ಮತಿ. ಭಸವ ಗಂಗೆ ಭರತ ಭೂಮಿಯಲ್ಲಿ ಹರಿದಾಗ ಹತ್ತಿಕ್ಕಲ್ಪಟ್ಟ, ಶೋಷಿತ ಭಸ್ಮೀಭೂತ ‘ಅಸ್ಪೃಶ್ಯರು’, ‘ಶೂದ್ರರು’ ಶೂದ್ರತ್ವದ ತಲೆಪಟ್ಟಿ ಹೊತ್ತ ಸ್ತ್ರೀಯರು ಪುನರುತ್ಥಾನ (Resurrection) ಹೊಂದಿದರು. ಕಳಂಕ ಸಹಿತ ತಲೆಪಟ್ಟಿ ಕಿತ್ತೆಸೆದು ‘ಶರಣ’ ಪೀಠದಲ್ಲಿ ಉಪಸ್ಥಿತರಾದರು. ಬಸವ ಗಂಗೆ ಧಾರಾಕಾರವಾಗಿ ಹರಿದಾಗ “ನಾವು ಕೀಳರು, ಪಾಪಯೋನಿಜರು” ಎಂಬ ಗಟ್ಟಿಗೊಂಡ ಕೀಳರಿಮೆಯ ನಂಬುಗೆ ಬೇರು ಸಮೇತ ಕಿತ್ತುರುಳಿ ಕೊಚ್ಚಿಹೋಯಿತು. ನಾವು ‘ಮೇಲೆಂಬ’ ಮೇಲರಿಮೆಯ ನಂಬುಗೆಯ ಮಾಲಿನ್ಯತೆ ತೊಡೆದು ಹೋಯಿತು. ಬಸವ ಗಂಗೆ ಜನಮನದಲ್ಲಿ ಹರಿದು ಕೊರಡಾಗಿ ನಿಂತವರನ್ನು ಕೊನರಿಸಿ, ಬರಡಾದ

ಹೃದಯಗಳನ್ನು ಹಯನಿಸಿ, ಜಾತೀಯತೆಯ ವಿಷವನ್ನು ದೈವೀ ಒಕ್ಕೂಟದ ಅಮೃತವಾಗಿ ಪರಿವರ್ತಿಸಿತು. ಇಂಥ “ಬಸವ ಗಂಗೆ”ಯ ಸಂಕೇತವೆಂಬಂತೆ ಗಂಗೋತ್ರಿಯಲ್ಲಿ ಹರಿಯುತ್ತಿದೆ ‘ಬಸವ ಗಂಗಾ ವಾಹಿನಿ’, ಮಂಗಳ ತರಂಗ ಜುಳು ಜುಳು ನಿನಾದದೊಡನೆ. ಹನ್ನೆರಡನೆಯ ಶತಮಾನದ ಕ್ರಾಂತಿ ತರಂಗಗಳನ್ನು ಲೋಕದಲ್ಲಿ ಬಿತ್ತರಿಸುವ ಆಧ್ಯಾತ್ಮಿಕ ಆಕಾಶವಾಣಿ ಇದಾಗಬೇಕೆಂಬ ಮನೀಷೆಯೊಡನೆ ರೂಹುಗೊಳ್ಳುತ್ತಿದೆ “ಬಸವ ಗಂಗೋತ್ರಿ”. ಮಾತ್ರವಲ್ಲ ವಚನ ಸಾಹಿತ್ಯ ಸಂಶೋಧನಾಲಯವೂ ಇದಾಗಬೇಕೆಂದು ನಮ್ಮಾಸೆ. ಇನ್ನೋರ್ವರು ಸಂಶೋಧಿಸಿದ ಔಷಧಿಗಳನ್ನು ಜನರಿಗೆ ನೀಡಿ ರೋಗಗಳನ್ನು ವಾಸಿ ಮಾಡುವವ ವೈದ್ಯ; ತಾನೂ ಸ್ವತಂತ್ರವಾಗಿ ಸಂಶೋಧನೆ ಕೈಗೊಂಡು, ರೋಗಗಳಿಗೆ ನೂತನ ಮತ್ತು ಪ್ರಗತಿಪರ ಔಷಧಿಗಳನ್ನು ಕಂಡುಹಿಡಿಯುವವ ವೈದ್ಯ ವಿಜ್ಞಾನಿ. ಹಾಗೆ, ಉತ್ತಮ ಬೋಧಕರನ್ನು ತರಬೇತಿಗೊಳಿಸುವ ಅಧ್ಯಾತ್ಮ ವಿದ್ಯೆಯ ಕಾಲೇಜು ಇಲ್ಲಾಗಬೇಕು, ಮತ್ತು ಪ್ರಸ್ತುತ ಸಮಾಜ ಪರಿಸ್ಥಿತಿಗೆ ಬೇಕಾಗಿಹ ತಾತ್ತ್ವಿಕ ವಿಚಾರಗಳ ಮದ್ದನ್ನು ವಚನ ಸಾಹಿತ್ಯ ವನದಿಂದ ಆರಿಸಿ ತೆಗೆವ ಸಂಶೋಧನಾಲಯವೂ ಇಲ್ಲಾಗಬೇಕೆಂದು ನಮ್ಮ ಅದಮ್ಯ ಆಕಾಂಕ್ಷೆ. ಜ್ಞಾನ ಪ್ರಧಾನ ಇಂತಹ ಕೇಂದ್ರಗಳೊಡನೆ ಸೇವಾ ಪ್ರಧಾನವಾದ ವೈದ್ಯಕೇಂದ್ರ, ಅನಾಥಾಲಯ, ವೃದ್ಧಾಲಯ, ಮುಂತಾದವೂ ಆಗಬೇಕೆಂಬ ಅಭೀಪ್ಸೆ; ಒಟ್ಟಾರೆ ಹಾಕಿರುವ ಯೋಜನೆ ಬೃಹತ್. ಇದನ್ನು ಕಂಡು ನಗುವವರೂ ಇರಬಹುದು. ಅವಾಸ್ತವ ಆದರ್ಶವೆಂದು ಮೂಗೆಳೆಯಲೂ ಬಹುದು ಅಂಥವರು. ಆದರೇನಂತೆ, ಹುಲ್ಲು ಮೊರಡಿಯನ್ನು ಹತ್ತಿ ಹತ್ತಿದೆವೆಂದು ಬೀಗುವದಕ್ಕಿಂತ ಗೌರಿಶಂಕರವನ್ನು ಏರಲೆಳಸಿ ಮಧ್ಯೆ ಸೋತರೂ ಚಿಂತೆಯಿಲ್ಲ. ಜೋಗ್‌ಗೆ ಹೋಗಿಯೇ ಸೃಷ್ಟಿ ಸೌಂದರ್ಯ ನೋಡಬೇಕೆಂದು, ಅಲ್ಲಿತನಕ ಕಣ್ಣುಮುಚ್ಚಿ ಕೂಡಬೇಕೆ ? ಮಾರ್ಗವನ್ನು ಕ್ರಮಿಸುತ್ತ, ನಿಸರ್ಗವನ್ನು ಆಸ್ವಾದಿಸುತ್ತಾ ಸಾಗುವುದೇ ಆನಂದದಾಯಕ. ಸಾಧನೆಯಲ್ಲೇ ಒಂದು ಬಗೆಯ ಸಿದ್ಧಿ; ಪರಾರ್ಥ ಭಾವನೆಯಿಂದ ದುಡಿಯುವುದರಲ್ಲೇ ಅಪಾರ ಸಂತೃಪ್ತಿ.

ಭೂಮ ಮಟ್ಟದ ಯೋಜನೆ ಕಣ್ಣೆದುರಿಗಿಟ್ಟುಕೊಂಡು. ದಿಟ್ಟ ಹೆಜ್ಜೆಯನ್ನು ಮುಂದಿಟ್ಟು ಸಾಗುತ್ತಿರುವ ವಿಶ್ವಕಲ್ಯಾಣ ಮಿಷನ್ ಸಂಸ್ಥೆಗೆ ಜನತೆಯ ಸಹಾಯ, ಸಹಕಾರ, ಕಡೆಗೆ ಸಹಾನುಭೂತಿಯಾದರೂ ದೊರೆಯುವದೆಂದು ಹಾರೈಸುವೆವು. ☆

ಮಾತೆ ಮಹಾದೇವಿ



—ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು

ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ
ಸಕಲ ವೇದಶಾಸ್ತ್ರವೆಂಬ ನೇಣಕಟ್ಟಿ
ಜೋಗುಳೆವ ಹಾಡುತ್ತಿದ್ದಾಳೆ ನೋಡಾ ಭ್ರಾಂತಿಯೆಂಬ ತಾಯಿ
ತೊಟ್ಟಿಲು ಮುರಿದು. ನೇಣು ಹರಿದು.
ಜೋಗುಳ ನಿಂದಲ್ಲದೆ ಗೊಹೇಶ್ವರನೆಂಬ ಲಿಂಗವ ಕಾಣಬಾರದು.

—ಅಲ್ಲಮ ಪ್ರಭುದೇವರು

ಜ್ಞಾನವೆಂಬುದು ಬಲು ಮುದ್ದಾದ ಮಗು. ಅದರ ಚೆಲುವು ಅಸಾಮಾನ್ಯ. ಪ್ರತಿಯೋರ್ವ ಮಾನವನು, ಬಡವನಿರಲಿ ಶ್ರೀಮಂತನಿರಲಿ. ಮೇಲು ಕುಲದವನಿರಲಿ, ಕೀಳು ಕುಲದವನಿರಲಿ ಅವನಲ್ಲಿ ಸ್ವತಂತ್ರ ವಿಚಾರ ಶಕ್ತಿಯ ಈ ಕೂಸು ಇದ್ದೇ ಇದೆ. ಹೇಗೆ ಹಾಲಿನ ಯಂತ್ರವನ್ನು ಹಾಲಿನ ಪಾತ್ರೆಯಲ್ಲಿಡುತ್ತಿದ್ದಂತೆಯೇ ಅದು ಕ್ಷೀರದ ಸತ್ವವನ್ನಳೆದು ನೀರೆಷ್ಟು, ಹಾಲೆಷ್ಟು ಎಂಭುದನ್ನು ನಿರ್ಣಯಿಸುವುದೋ ಹಾಗೆ ಯಾವದೇ ತರಬೇತಿ ಇರಲಿ ಬಿಡಲಿ ಈ ಸ್ವಯಂಪ್ರಜ್ಞೆಯಿಂದ ಕೂಡಿದ ಅರಿವಿನ ಶಿಶುವಾದರೂ ನಿತ್ಯಾನಿತ್ಯ ವಿವೇಕ ಪ್ರಜ್ಞಾಸಹಿತವಾಗಿರುವುದು : ಮತ್ತು ಯಾವುದು ಸತ್ಯ–ಯಾವುದು ಮಿಥ್ಯ ಯಾವುದು ಅನ್ಯಾಯ, ಇನ್ನಾವುದು ಕರ್ತವ್ಯ ಮುಂತಾದು ವನ್ನು ನಿರ್ಣಯಿಸ್ಸುವ ಸಾಮರ್ಥ್ಯ ಉಳ್ಳುದ್ದು. ಸ್ವಯಂ ಪ್ರಕಾಶದ ಮಿಂಚಿನ ಹುಳದಂತೆ ಪ್ರಕಾಶಿಸುವ ಜ್ಞಾನಶಕ್ತಿಯನ್ನು ಗಾಢ ನಿದ್ರೆಯಲ್ಲಿ ಮಲಗಿಸುವ ಪ್ರಯತ್ನ ಅವ್ಯಾಹತವಾಗಿ ನಡೆಯುತ್ತದೆ, ಅನೇಕರಿಂದ.

ಜನರು ಅಜ್ಞಾನದಲ್ಲಿದ್ದಷ್ಟೂ ತಮ್ಮ ಸ್ವಾರ್ಥದ ಪೂರೈಕೆ; ಪಟ್ಟಭದ್ರ ಹಿತಾಸಕ್ತಿಯ ಸ್ಥಾಪನೆ ಎಂದರಿತು ಅನೇಕ ಪೂಜಾರಿಗಳು, ಪಂಡಿತರು ಒಂದು ಸಾಧನೆ ಯಲ್ಲಿ ತೊಡಗಿರುತ್ತಾರೆ. ಅದೆಂದರೆ, ಅಜ್ಞಾನವೆಂಬ ತೊಟ್ಟಿಲಿನಲ್ಲಿ (ಜನತೆಯ) ಸ್ವತಂತ್ರ ವಿಚಾರ ಶಕ್ತಿಯೆಂಬ ಮಗುವನ್ನು ಮಲಗಿಸಿ, ತಾವು ಸಾಧಿಸಬೇಕಾದುದಕ್ಕೆ ವೇದಶಾಸ್ತ್ರಗಳ ಉಕ್ತಿಗಳನ್ನು ಹೇಳಿಕೆಕೊಟ್ಟು ಸಮರ್ಥಿಸಿಕೊಳ್ಳುತ್ತ ; ಮಿಥ್ಯವನ್ನೇ ಹೇಳಿ ಹೇಳಿ ತಲೆಯಲ್ಲಿ ತುಂಬಿ ಸತ್ಯವೆಂದು ನಂಬಲು ಅಜ್ಞಾನಿಗಳನ್ನು ಪ್ರೇರೇಪಿಸಿ ಭ್ರಾಂತಿಯ ತಾಯಿ ತನ್ನ ಪ್ರಭಾವವಲಯವನ್ನು ವಿಸ್ತರಿಸುವಂತೆ ಮಾಡುತ್ತಾರೆ.

ಮಿಥ್ಯ ಜ್ಞಾನದ ಪೊರೆ ಹರಿದು 'ತತ್ತ್ವ'ದ ಜ್ಞಾನ ಆಗಬೇಕಾದರೆ ತೊಟ್ಟಿಲು ಮುರಿಯಬೇಕು. ಅಜ್ಞಾನದ ತೊಟ್ಟಿಲು ಛಿದ್ರಗೊಳ್ಳಬೇಕು. ತಮ್ಮ ಬುದ್ಧಿಶಕ್ತಿ ಯನ್ನು ಶಾಸ್ತ್ರಗಳ ನೇಣಿಗೆ ನೇತುಹಾಕಿಕೊಂಡು, ಅವುಗಳು ಹೇಳಿದಂತೆ ನಡೆಯುವ ಪರತಂತ್ರ ಮತಿತ್ವ ಸಾಯಬೇಕು. ಸತ್ಯವು ಶಾಸ್ತ್ರಗಳ ಚೌಕಟ್ಟಿನಲ್ಲಿ ಬಂಧಿತವಾಗಿರದೆ ವಾಙ್ಮನಾತೀತವಾದ ಪರಮ ತತ್ತ್ವ ಎಂಬುದನ್ನು ಅರಿಯಬೇಕು. ಪರತತ್ತ್ವವು ವೇದಾಗಮ ಪುರಾಣಗಳಿಗೆ ಅತೀತವಾದುದು ಮತ್ತು ಅನುಭವ ವೇದ್ಯವಾದುದು ಎಂಬುದನ್ನರಿಯಬೇಕು.

ಕೆಲವು ಶಾಸ್ತ್ರಗಳು, "ಎಲ್ಲ ಮಾನವರಿಗೆ ಬ್ರಹ್ಮಜ್ಞಾನ ಸಾಧ್ಯವೇ ಇಲ್ಲ. ಅದು ಕೆಲವು ಜಾತಿಗಳವರಿಗೆ ಮಾತ್ರ" ಎನ್ನುತ್ತವೆ. ಹಾಗೆ ಸಾಧನೆಯಲ್ಲಿ ತೊಡಗಿದ ಶಂಭುಕನನ್ನು ವಧಿಸಿದವು; ವಿಶ್ವಾಮಿತ್ರನನ್ನು ಪತನಿಸಲು ಯತ್ನಿಸಿದವು, ತನ್ನ ಜಾತಿವಿದ್ಯೆಗೆ ಹೊರತಾದ ಬಿಲ್ಲು ವಿದ್ಯೆಯಲ್ಲಿ ಸ್ವಯಂ ಶಕ್ತಿಯಿಂದ ಮುಂದಾದ ಏಕಲವ್ಯನ ಹೆಬ್ಬೆರಳನ್ನೇ ಬಲಿಪಡೆದವು. ಎಷ್ಟು ಅಡ್ಡಿ ಮಾಡಿದರೇನಂತೆ ಅನೇಕ ಜ್ಞಾನಿಗಳು ಎಲ್ಲ ಜಾತಿಯಲ್ಲಿ ಹುಟ್ಟಿದರು, ಸಿದ್ಧಪುರುಷರಾದರು, ಸಾಹಿತ್ಯ ರಚನೆ ಮಾಡಿದರು. ಅಂಬಿಗ ಚೌಡಯ್ಯನವರು ಅದಕ್ಕೆ ಸವಾಲೆಸೆಯುತ್ತಾರೆ:

ಕಷ್ಟನ ಮನೆಯಲ್ಲಿ ಸೃಷ್ಟಿಗೀಶ್ವರನುಂಬಾಗ
ಎತ್ತಹೋದವೋ ನಿಮ್ಮ ಶಾಸ್ತ್ರಂಗಳು ?
ಕೆತ್ತ ಮುಚ್ಚಳು ಬೇಡಂಗೆ ತೆರೆವಾಗ
ಇಕ್ಕಿದ ಜನ್ನಿವಾರ ಬೀಯವಾದವು !
ಮುಕ್ಕುಳಿಸಿದ ನೀರ ತಂದೆರೆದಡೆ
ಎತ್ತಲಿದ್ದವು ನಿಮ್ಮ ವೇದಂಗಳು ?
ನಿಮ್ಮ ದುಃಖ ಬೇಡೆಂದಾತ ಅಂಬಿಗ ಚೌಡಯ್ಯ.

ದೇವನೊಲಿವುದು ಪಾಂಡಿತ್ಯಕ್ಕಲ್ಲ, ಜಾತಿಗಳಲ್ಲಿ; ಅಂತರಂಗದ ಅನುಭಾವ ಜ್ಯೋತಿಗೆ.

ಅದನ್ನು ಪಡೆದವರೆಲ್ಲ ಅವನ ಒಲಿಮೆ ಪಡೆದಿದ್ದಾರೆ. ಇನ್ನಾವ ಸಾಕ್ಷಿಬೇಕು ಎಲ್ಲ ಜಾತಿಯಲ್ಲೂ ಬಲ್ಲಿದರು ಬರಬಲ್ಲರೆಂಬುವುದಕ್ಕೆ ? ಮಾಲೆಗಾರನ ಕೇಳಿ ನನೆಯರಳು ವುದೇ ? ಅರಳಿದ ಹೂವನ್ನು ಪೋಣಿಸುವದಷ್ಟೇ ಅವನ ಕೆಲಸ. ಆದ ಜ್ಞಾನಿಗಳನ್ನು ಶಾಸ್ತ್ರದಲ್ಲಿ ಇಂಬಿಟ್ಟುಕೊಂಡು ಶಾಸ್ತ್ರಗಳ ಬೆಲೆಯನ್ನು ವರ್ಧಿಸಿಕೊಳ್ಳಬೇಕೇ ವಿನಾ, ಸಂಕುಚಿತ ಶಾಸ್ತ್ರದ ಅಳತೆ ಪಟ್ಟಿಯಿಂದ ನಿಸ್ಸೀಮ ಅನುಭಾವ ಪ್ರಪಂಚವನ್ನು ಅಳೆಯುವದೆ ?

ಆದ್ದರಿಂದ "ಜೋಗುಳ" ನಿಲ್ಲಿಸುವ ಕೆಲಸ ಮೊದಲಾಗಬೇಕು. ಶತಶತ ಮಾನಗಳಿಂದ ಜಾತೀಯತೆ, ಅಂಧಃಶ್ರದ್ಧೆ, ಮೂಢ ನಂಬಿಕೆಗಳನ್ನು ಸಮರ್ಥಿಸಿ ಕೊಳ್ಳುವ ವಿಚಾರಗಳನ್ನು ಹೇಳಿ, ಜನರ ತಲೆಯಲ್ಲಿ ಅಚ್ಚೊತ್ತಿ, ಅವನ್ನೇ ಚಲಿಸುವ ನಾಣ್ಯಗಳನ್ನಾಗಿ ಮಾಡಿ, ವೈಶಾಲ್ಯತೆ, ವಿಚಾರವಂತಿಕೆಗಳನ್ನೇ ಖೋಟಾ ನಾಣ್ಯ ಗಳನ್ನಾಗಿ ಮಾಡಿರುವ ಧೂರ್ತತನಕ್ಕೆ ಪೂರ್ಣ ವಿರಾಮ ಹಾಕಬೇಕು. ಆಗ ಪರಮ ಸತ್ಯವಾದ ಗುಹೇಶ್ವರನೆಂಬ ಪರಂಜ್ಯೋತಿ ಕಾಣಬರುವುದು. ಮಿಥ್ಯಾ ಜ್ಞಾನದ ನಿದ್ರೆಯುಲ್ಲಿದ್ದವನಿಗಿದು ತಿಳಿಯದು. 'ಸತ್ಯ ತತ್ತ್ವ'ದ ಅರಿವಿನಲ್ಲಿದ್ದವನಿಗಷ್ಟೇ ಗೋಚರವಾಗುವುದು. ★

ಶರಣಾಗತಿ

ಬಾಳ ಮುಗುದಾಣವನು ತವ ಹಸ್ತಕ್ಕಿತ್ತಿರುವೆ
ತಾಳ ತಪ್ಪದಂತೆ ಮುನ್ನಡೆಸುವವ ನೀನೆಂದು ॥
ನಾನೊಂದು ಹಯಮಾತ್ರ ತತ್ತ್ವವನ್ನು ಹೊರಲಿಕ್ಕೆ
ನೀನದರ ಪ್ರಭುವು ಎನ್ನ ಬೆನ್ನ ಮೇಲಿಹೆ ॥
ಕಿರುಣೆಯ ಹಸ್ತದಿಂ ಬೆನ್ನ ಚಪ್ಪರಿಸೆ ಉತ್ಸಾಹವೆನಗೆ
ಹೆಜ್ಜೆ ತಪ್ಪಿದೆನೆಂದು ಮುಗುದಾಣವೆಳೆಯೆ ಎಚ್ಚರವೆನಗೆ ॥
ಹಮ್ಮಿಲ್ಲ ಬಿಮ್ಮಿಲ್ಲ ಕೀರ್ತಿಯಾಸೆಯು ಇಲ್ಲ
ನಿನ್ನ ತತ್ತ್ವವ ಹೊತ್ತಿಹೆನೆಂಬ ಅಭಿಮಾನ ಒಂದೇ ॥
ಎನಗಾವ ಭಯವಿಲ್ಲ ನಿನಗೆ ಶರಣಾದ ಬಳಿಕ
ಭಯವೆಲ್ಲ ನಿನಗಿರಲಿ, ಹೆಜ್ಜೆ ತಪ್ಪಿಸದಿರಲು ॥
ಬಸವ ಪ್ರಭು ನೀನೆನ್ನ ಬಾಳ ವೈಣಿಕನಯ್ಯ
ಸುಸ್ವರದ ಸಚ್ಚಿದಾನಂದ ಗಾನ ನೀಡೈ ತಂದೆ ॥

—ಜಗದ್ಗುರು ಮಾತೆಮಹಾದೇವಿ

ಸಮಸ್ಯೆ! ಸಮಾಧಾನ!

—ಬಸವರಾಜ ಸಂಗಮದ, ಬೀದರ

** ನಾನು, ನನ್ನ ಮಿತ್ರ ಧಾರ್ಮಿಕ ಚರ್ಚೆಯಲ್ಲಿ ಆಗಾಗ ತೊಡಗುತ್ತೇವೆ. ಜಗತ್ಕರ್ತನಾದ ಪರಮಾತ್ಮನನ್ನು ಇಷ್ಟಲಿಂಗ ರೂಪದಲ್ಲಿ ಆರಾಧಿಸುವುದೇ ಸರಿಯೆಂದು ನಾನು ಅನ್ನುತ್ತೇನೆ. ಅಂಥ ಪರಮಾತ್ಮನ ಅರಿವು ಮಾಡಿಕೊಟ್ಟ ಬಸವಣ್ಣನವರನ್ನು ಪೂಜಿಸುವುದೇ ಸರಿ ಎನ್ನುತ್ತಾನೆ ಅವನು. ನಮ್ಮಿಬ್ಬರಲ್ಲಿ ಯಾರು ಸರಿ ?

★ ಈರ್ವರೂ ಅರ್ಧರ್ಧ ಸರಿ ; ಬಹಿರಂಗ ವ್ಯವಹಾರದಲ್ಲಿ ದುಡಿದು ಗಳಿಸಿ ಹಣ ವನ್ನು ತಂದುಕೊಡುವ ತಂದೆಯನ್ನು ಮಕ್ಕಳು ಗೌರವಿಸಬೇಕು. ಗಂಡ ತಂದಿತ್ತ ಹಣವನ್ನು ಸರಿಯಾಗಿ ಬಳಸಿ ಅಡಿಗೆ ಮಾಡಿ ಸಂರಕ್ಷಿಸುವ ತಾಯಿ ಯನ್ನೂ ಗೌರವಿಸಬೇಕು. ಹಾಗೆ ಜಗತ್ತನ್ನು ಸೃಷ್ಟಿಸಿದ ತಂದೆಯಾದ ಕರ್ತನನ್ನು, ತಾಯಿಯಂತೆ ನಮ್ಮನ್ನು ರಕ್ಷಿಸುವ, ಆ ಪರಮ ಪ್ರಭುವನ್ನು ಪರಿಚಯಿಸುವ ಧರ್ಮ ಗುರುವನ್ನೂ ಗೌರವಿಸಬೇಕು, ಪೂಜಿಸಬೇಕು.

—ಶಿವಲಿಂಗದೇವರು, ಭಾಲ್ಕಿ

** ಕ್ರೈಸ್ತ ಧರ್ಮಗುರು ಪೋಪ್‌ರನ್ನಾರಿಸಲು ಎಷ್ಟೊಂದು ಜವಾಬ್ದಾರಿ ಸಹಿತ ಎಚ್ಚರಿಕೆ ವಹಿಸುತ್ತಾರೆ. ಅವರಲ್ಲಿ ಅರಿವು, ಅರ್ಹತೆ, ಸಾಮರ್ಥ್ಯಗಳನ್ನು ಅರಸುತ್ತಾರೆ. ಲಿಂಗಾಯತ ಸಮಾಜದ ಮಠಗಳಿಗೆ ಗುರುಗಳನ್ನು ಆರಿಸಲು ಯಾವ ಅರ್ಹತೆಯನ್ನು ಅಳತೆ ಗೋಲಾಗಿರಿಸುತ್ತಾರೆ ?

★ ಕೆಲವು ಸಲ ತಮ್ಮ ವಿಶಿಷ್ಟ ಜಾತಿಯವನನ್ನು ; ಮತ್ತು ಬಹಳಷ್ಟು ಸಲ ತಮ್ಮ ಅಕ್ಕ-ಅಣ್ಣ, ತಮ್ಮ-ತಂಗಿ ಮುಂತಾದ ರಕ್ತ ಸಂಬಂಧಿಗಳ ಮಕ್ಕಳನ್ನು ಆರಿಸುವರು. ರಕ್ತ ಸಂಬಂಧ, ಜಾತಿ ನಿರೀಕ್ಷಣೆ ಬಹು ಮುಖ್ಯ ಅ (ನ) ರ್ಹತೆ ಇವರಲ್ಲಿ. "ತಲೆ ಇಲ್ಲದ ಅಟ್ಟೆಗೆ ಪಟ್ಟ ಕಟ್ಟುವ" ಸಾಹಸಿಗಳಾದ ಇವರು ಹೆಚ್ಚಿನ ಪ್ರಸಂಗಗಳಲ್ಲಿ "ಹಂದೆಯ ಕೈಯಲ್ಲಿ ಚಂದ್ರಾಯುಧ ಕೊಡುವ,

ಮರ್ಕಟನ ಕೈಲಿ ಮಾಣಿಕ್ಯ ಕೊಡುವ" ಕೆಲಸ ಮಾಡುತ್ತಾರೆ. ಆದ್ದರಿಂದಲೇ ಸಮಾಜದಲ್ಲಿ ಈ ದುರವಸ್ಥೆ ! ತಾನೇ ಉರಿಯದ ದೀಪ ಇನ್ನೊಂದು ದೀಪವನ್ನೇನು ಹಚ್ಚೀತು ? !

—ಶಿವಕುಮಾರ ಖಪಲಿ, ಬೀದರ

** 'ಸ್ಥಿತಿ' ಪ್ರಜ್ಞತ ಎಂದರೇನು ?

★ ಬಾಳಲ್ಲಿ ಹಗಲು ರಾತ್ರಿಗಳಂತೆ ಬರುವ ಮಾನಾಪಮಾನ, ಸುಖ-ದುಃಖ, ಸ್ತುತಿ-ನಿಂದೆ ಈ ಎಲ್ಲ ದ್ವಂದ್ವಗಳನ್ನು ಸಮಚಿತ್ತದಿಂದ, ಶಿವನ ಪ್ರಸಾದವೆಂದು ಸ್ವೀಕರಿಸುವ ಪ್ರಸಾದಿಯೇ ಸ್ಥಿತಪ್ರಜ್ಞ.

—ಎಸ್. ಬಾಲಪ್ಪಗೋಳ, ಮಹಾಗಾಂವ

** ಲಿಂಗಾಯತ ಎಂಬುದು ಧರ್ಮವೆ ? ಅಥವಾ ಹಿಂದೂ ಧರ್ಮದ ಒಂದು ಪ್ರಭೇದವೆ ?

★ ಲಿಂಗಾಯತವು ಒಂದು ಸ್ವತಂತ್ರ ಧರ್ಮ. ಹಿಂದೂ ತತ್ತ್ವವು ಒಂದು ವಿಶಿಷ್ಟ ಧರ್ಮವಲ್ಲ. ಇಲ್ಲಿ ಒಂದೇ ಸಿದ್ಧಾಂತ, ಸಾಧನೆ, ದರ್ಶನ, ಸಂಸ್ಕಾರ ಇತ್ಯಾದಿಗಳಿಲ್ಲ. ಹಿಂದೂತ್ವ ಒಂದು ಸಾಂಸ್ಕೃತಿಕ ಪರಂಪರೆಯನ್ನು ಸಂಕೇತಿಸುತ್ತದೆ. ಹಿಂದೂ ಸಮಾಜವು ಹಲವು ಜನಾಂಗಗಳ ಸಮುದಾಯ. ಒಂದು ತೋಟದಲ್ಲಿ ಹಲವಾರು ಹಣ್ಣುಗಳ ವೃಕ್ಷಗಳಿದ್ದಂತೆ, ಹಿಂದೂ ಸಮಾಜ ದಲ್ಲಿ ಅನೇಕ ಧರ್ಮಗಳಿವೆ. ಆದ್ದರಿಂದ ನಿನ್ನ ಧರ್ಮವಾವುದು ? ಎಂದಾಗ ಲಿಂಗಾಯತನು "ಲಿಂಗಾಯತ"ವೆಂದು, ಜಾತಿ ಯಾವುದು ? ಎಂದಾಗ "ಜಾತಿ ಇಲ್ಲ"ವೆಂದು ಬರೆದಾಗ ನಿಜವಾದ ಬಸವ ತತ್ತ್ವದ ಅನುಯಾಯಿ ಅವನು ಆಗುವನು.

—ಸಂಗ್ರಾಮಕಾಜಿ, ಹಾರುರಗೇರಿ

** ಹಿಂದು ಧ್ವಜವಾವುದು, ಬಸವ ಧರ್ಮದ ಧ್ವಜವಾವುದು ?

★ ಕಾವಿಬಣ್ಣದ ಬಟ್ಟೆಯಲ್ಲಿ ಓಂಕಾರವಿದ್ದುದು ಹಿಂದೂ ಧ್ವಜ : ಕಾವಿಬಣ್ಣದ ಬಟ್ಟೆಯಲ್ಲಿ ಷಟ್ಕೋನವಿದ್ದು, ಮಧ್ಯದಲ್ಲಿ ಓಂಕಾರವಿದ್ದು, ಆರೂ ಕೋನ ಗಳಲ್ಲಿ ಶ್ರೀಗುರು ಬಸವ ಎಂಬ ಷಡಕ್ಷರವಿದ್ದುದು ಬಸವ ಧರ್ಮದ ಧ್ವಜ.

—ಎ. ಹನುಮಂತರಾಯ, ಕುಂಟೆಸಿರಸಿ

** ಸಂಬಳ ಪಡೆದು ಜನಸೇವೆಗಾಗಿ ಇರುವ ಒಂದು ಕಾಯಕ ಮಾಡಿದರೆ ಅದರಿಂದ ಧರ್ಮಕ್ಕೆ, ಮರ್ಯಾದೆಗೆ ಕುಂದುಬರುವುದೆ ?

★ ಇಲ್ಲ : ಉಪಜೀವನಕ್ಕಾಗಿ ಮಾಡುವ ಉದ್ಯೋಗದಲ್ಲಿ ಕರ್ತವ್ಯನಿಷ್ಠೆ, ಪ್ರಾಮಾಣಿಕತೆ ಬೆರೆದಾಗ ಅದು ಕಾಯಕ. ಆದ್ದರಿಂದ ಕಾಯಕಮಾಡಿದರೆ ಧರ್ಮಕ್ಕೆ ಕುಂದಿಲ್ಲ. ಕಾಯಕದಲ್ಲಿ ಮೇಲು-ಕೀಳೆಂಬ ಭೇದವಿಲ್ಲವಾದ ಕಾರಣ ಮರ್ಯಾದೆಗೆ ಧಕ್ಕೆಯಾಗುವದೆಂಬುದು ಹಾಸ್ಯಾಸ್ಪದ. 'ಹೊಲೆ ಹೊಲೆಯರ ಮನೆಯ ಹೊಕ್ಕು ಸಲೆ ಕೈಕೂಲಿಯಾದರೆಯೂ ಮಾಡಿ, ನಿಮ್ಮ ನಿಲುವಿಂಗೆ ಕುದಿವೆನಲ್ಲದೆ ಎನ್ನೊಡಲವಸರಕ್ಕೆ ಕುದಿದೆನಾದರೆ ತಲೆದಂಡ' ಎಂದು ಬಸವಣ್ಣನವರೇ ಹೇಳಿಲ್ಲವೆ ?

** ಧರ್ಮ ಮುಖ್ಯವೋ, ಕಾಯಕ ಮುಖ್ಯವೋ ?

★ ಅನ್ನ ಮುಖ್ಯವೋ, ನೀರು ಮುಖ್ಯವೋ ಎಂಬಂತಿದೆ ಈ ಪ್ರಶ್ನೆ. ಎರಡೂ ಅವಶ್ಯಕ. ದೇಹದ ಸಂರಕ್ಷಣೆಗೆ ಕಾಯಕ, ಆತ್ಮ ಸಂರಕ್ಷಣೆಗೆ ಧರ್ಮ. ದೇಹ ನಾನೆಂಬ ಭಾವವಿದ್ದವರಿಗೆ ಕಾಯಕಬೇಕು: ಆತ್ಮವೇ ನಾನೆಂಬವರಿಗೆ ಧರ್ಮಬೇಕು. ಆದರೆ, ದೇಹವಿಲ್ಲದ ಆತ್ಮ ನಿಸ್ಸಹಾಯಕ, ಆತ್ಮವಿಲ್ಲದ ದೇಹ ನಿರ್ಜೀವ. ಈ ಎರಡೂ ಅವಶ್ಯಕ, ಹಾಗೆ ಧರ್ಮ ಮತ್ತು ಕಾಯಕ ಗಳೂ ಅವಶ್ಯಕ.

—ಕುಮಾರಿ ಭಾರತಿ ಚಂದ್ರಸೇನ ಜಾಧವ, ಶಿವಮೊಗ್ಗ

** ನಾವು ಕೆಲವು ಪುರಾಣಗಳಲ್ಲಿ ಶಿವನು ದಾಕ್ಷಾಯಿಣಿಯ ಅಗ್ನಿಗಮನದ ನಂತರ ತಪಸ್ಸಿಗೆ ಕುಳಿತನು ಎಂದು ಓದಿದ್ದೇವೆ. ಮನುಷ್ಯರು ಮತ್ತು ಋಷಿಗಳಾದರೆ ದೇವರನ್ನು ಕುರಿತು ತಪಸ್ಸು ಮಾಡಬೇಕು. ದೇವರಾದ ಶಿವನು ಯಾರನ್ನು ಕುರಿತು ತಪಸ್ಸು ಮಾಡುತ್ತಾನೆ ?

★ ನಿಮ್ಮ ಪ್ರಶ್ನೆಯಲ್ಲೇ ಉತ್ತರವಿದೆ. ವಿವಾಹ, ವಿಯೋಗ, ತಪಸ್ಸು ಮುಂತಾದ ಘಟನೆಗಳು ಶಿವನೊಬ್ಬ ಐತಿಹಾಸಿಕ ವ್ಯಕ್ತಿ ಎಂಬುದನ್ನೇ ಸ್ಪಷ್ಟೀಕರಿಸುತ್ತವೆ. ತಪಸ್ಸು ಮಾಡುವ ಉದ್ದೇಶ ಪರಿಪೂರ್ಣತೆ ಪಡೆಯುವ ದಷ್ಟೆ. ಶಿವನು ತಪಸ್ಸು ಮಾಡಿದನೆಂಬುದು ಅವನೊಬ್ಬ ಮಹಾಯೋಗಿ, ಮಹರ್ಷಿ, ಮಹಾಗುರು ಎಂಬುದನ್ನೇ ದೃಢೀಕರಿಸುತ್ತದೆ. ದೇವರು ನಿರಾಕಾರ

ಶಕ್ತಿ, ಸತ್-ಚಿತ್-ಆನಂದನು. ಅವನಿಗೆ ಭಯವಿಲ್ಲ, ದುಃಖವಿಲ್ಲ. ಪರಿಪೂರ್ಣತೆ ಹೊಂದಬೇಕಾಗಿಲ್ಲ. ಆದವನ ಸ್ವರೂಪ.

—ಆರತಿ, ಬೆಳಗಾಂವ

** ದೇವರ ಅರ್ಚನೆ ಮಾಡುವ ಹಕ್ಕು ಪೂಜಾರಿಗೇ ಏಕೆ ? ನಮಗೇಕೆ ಬೇಡ ?

★ ಈ ಪ್ರಶ್ನೆಯನ್ನು ಹನ್ನೆರಡನೇ ಶತಮಾನದಲ್ಲಿಯೇ ಬಸವಣ್ಣನವರು ಹಾಕಿ, ಎಲ್ಲರಿಗೂ ಆ ಹಕ್ಕು ನೀಡಿದ್ದಾರೆ. ನಿಮ್ಮ ಮನೆ, ತನು, ಮನ ದೇವಾಲಯಗಳಾಗಲಿ ; ಆ ಪೂಜಾರಿಯ ಹಂಗೂ ಬೇಡ, ನಾಲ್ಕು ಗೋಡೆಯ ಬಂಧನದಲ್ಲಿ ಸಿಕ್ಕಿಬಿದ್ದಿರುವ ಆ ದೇವರ ಹಂಗೂ ಬೇಡ ; ನಿಮ್ಮಲ್ಲಿಹ, ಜಗದಲ್ಲಿಹ ದೇವನ ಆರಾಧಿಸಲು ಅರ್ಚಕನ ಹಂಗೇಕೆ ?

—ಸಂಗ್ರಾಮ, ಬೀದರ್-585401

ದೀಕ್ಷೆ ತೆಗೆದುಕೊಂಡು ಪೂಜಿಸಿದರೆ ಮಾತ್ರ ದೇವರಿಗೆ ಪೂಜೆ ಸಲ್ಲುತ್ತದೆಯೋ ? ಅಥವಾ ಮನಃಪೂರ್ವಕವಾಗಿ ಪೂಜಿಸಿದರೆ ಸಾಕೋ ?

★ ಮದುವೆ ಮಾಡಿಕೊಂಡು ಸಾಮಾಜಿಕ ಒಪ್ಪಿಗೆ ಪಡೆದು ಸಂಸಾರ ಮಾಡಿದರೂ ಪುತ್ರ ಪ್ರಾಪ್ತಿಯುಂಟು. ತಾಯಿ-ತಂದೆಯರ ಒಪ್ಪಿಗೆ ಇಲ್ಲದೆ ಕೇವಲ ಪ್ರೇಮವಿವಾಹ ಮಾಡಿಕೊಂಡರೂ ಸಂತಾನ ಪ್ರಾಪ್ತಿಯುಂಟು. ಗುರು ಹಿರಿಯರ ಸಮ್ಮುಖದಲ್ಲಿ ಮದುವೆಯಾದಾಗ ಬಾಳಿನಲ್ಲಿ ಭದ್ರತೆಯಷ್ಟೆ. ಅದೇ ರೀತಿ ದೀಕ್ಷಾ ಸಂಸ್ಕಾರವಿಲ್ಲದೆ ಸ್ವಯಂ ಪ್ರೇಮದಿಂದ ಪೂಜಿಸಿದರೂ ಪ್ರಾಪ್ತಿಯುಂಟು. ಆದರೆ ದೀಕ್ಷಾ ಸಂಸ್ಕಾರ ಸಹಿತನಾಗಿ, ಗುರುವಿನ ಮಾರ್ಗದರ್ಶನದಲ್ಲಿ ಸಾಗಿದರೆ ಪರಮಾರ್ಥ ಪಥ ಸುಲಭ ಸಾಧ್ಯ. ಒಂದು ಮಾತು ನೆನಪಿರಲಿ ಮದುವೆ ಯಾವುದೇ ರೀತಿಯಾಗಿರಲಿ ಪರಸ್ಪರರಲ್ಲಿ ದಾಂಪತ್ಯಪ್ರೇಮ ಎಷ್ಟು ಅವಶ್ಯವೋ ಅಷ್ಟೇ ಅವಶ್ಯ ದೇವನೆಡೆಗೆ ಭಕ್ತನಿಗಿರುವ ಒಲವು. ಅಲ್ಲದೆ ಪೂಜಾರಿಯಂತೆ ಯಾಂತ್ರಿಕ ಭಕ್ತಿ ಮಾಡಿದರೆ ದೀಕ್ಷಾ ಸಂಸ್ಕಾರ ಬದ್ಧನಾದರೂ ಪ್ರಯೋಜನವಿಲ್ಲ. ಎಳ್ಳಿಲ್ಲದ ಗಾಣವನ್ನಾಡಿಸಿದಂತಹ ಭಕ್ತಿಯದು.

ವೈದಿಕ ಮತ್ತು ಲಿಂಗಾಯತ ಧರ್ಮಗಳ ಸ್ಥಾಪಕರಾರು ?

★ ವೈದಿಕ ಇದು ಯಹೂದಿ ಧರ್ಮದಂತೆ ನೈಸರ್ಗಿಕವಾಗಿ (Natural) ಬೆಳೆದು ಬಂದ ಧರ್ಮ. ಇದಕ್ಕೆ ಓರ್ವನೇ ಗುರುವಿಲ್ಲ ; ಸಂಸ್ಥಾಪಕನಿಲ್ಲ, ಒಂದು

ಪದ್ಧತಿಯಿಲ್ಲ. ಅನೇಕ ಸಂತ ಮಹಾಂತ ಋಷಿಗಳ ಅನುಭವದ ಝರಿಗಳು ಸೇರಿವೆ. ಲಿಂಗಾಯತ ಧರ್ಮವು, ಕ್ರೈಸ್ತ, ಇಸ್ಲಾಂ. ಸಿಖ್ ಧರ್ಮಗಳಂತೆ ಸುಧಾರಣಾಧರ್ಮ (Reformative Religion): ಇದಕ್ಕೆ ಸಂಸ್ಥಾಪಕರು ಬಸವಣ್ಣನವರು. ಸ್ವತಂತ್ರವಾದ ಸಿದ್ಧಾಂತ, ಸಾಧನೆ, ದರ್ಶನ, ಸಂಸ್ಕಾರ, ಸಮಾಜಶಾಸ್ತ್ರ, ಸಾಹಿತ್ಯ, ಸಂಸ್ಕೃತಿ ಎಲ್ಲ ಉಂಟು. ವಚನ ಸಾಹಿತ್ಯವೇ ಅಧಿಕೃತ ಶಾಸ್ತ್ರ ಈ ಧರ್ಮಕ್ಕೆ.

—ಶಿವಕುಮಾರ ಪಾಟೀಲ

** ನಾನೊಬ್ಬ ಖಾನೆಷುಮಾರಿ ಲಿಂಗಾಯತ. ವಾಂಕೊಮ್ಮೆ ಹನುಮಂತನ ದರ್ಶನಾಕಾಂಕ್ಷಿ. ಮೂಢ ಉಪಾಸನಾ ವಿಧಾನಗಳನ್ನು ಬಸವಣ್ಣನವರು ಖಂಡಿಸಿರುವ ಕಾರಣ ಬಿಡಬೇಕು ಎನಿಸುತ್ತದೆ. ಬಿಡಲು ಸಾಧ್ಯವಾಗುತ್ತಿಲ್ಲ. ಬಿಡಿಸಲು ಮಂತ್ರ-ತಂತ್ರ ಇದ್ದರೆ ತಿಳಿಸಿರಿ. ಹನುಮಂತನ ಪ್ರಭಾವ ನನ್ನ ಮೇಲೆ ಇಷ್ಟಾಗಬೇಕಾದರೆ ಅವನ ವೈಶಿಷ್ಟ್ಯವೇನು ?

★ ಅವನ ವೈಶಿಷ್ಟ್ಯವೇನಿಲ್ಲ. ವೈಶಿಷ್ಟ್ಯವಿರುವುದು ಭಯ ತುಂಬಿದ ನಿಮ್ಮ ದುರ್ಬಲ ಮನದಲ್ಲಿ. ಯಾವ ಮಂತ್ರ-ತಂತ್ರ ನಿಮಗೆ ಬೇಕಾಗಿಲ್ಲ. ಅವೆಲ್ಲ ಮೂಢ ದಾರಿಗಳು. ಜ್ಞಾನ ಸಂಪಾದನೆ ಮಾಡಿಕೊಳ್ಳಿ. ಅಜ್ಞಾನದ ಕತ್ತಲೆಯಲ್ಲಿದ್ದಾಗ ಎಲ್ಲವನ್ನೂ ಕಂಡು ಮನುಷ್ಯ ಭಯ ಬೀಳುವಂತೆ ದುರ್ಬಲರ ಮನ ಆತ್ಮನ ನಿಜವಾದ ಅರಿವನ್ನು ಪಡೆದರೆ ನಿಜವಾದ ಉಪಾಸನಾ ಮಾರ್ಗ ಹಿಡಿಯಲು ಧೈರ್ಯಬರುತ್ತದೆ.

—ಜಿ. ಬಿ. ನಾಗರಾಜಯ್ಯ, ಚನ್ನಪಟ್ಟಣ

ಲಿಂಗಾಯತ ಧರ್ಮಕ್ಕೆ ಬಸವಣ್ಣನವರೇ ಆದಿ ಗುರು ಎಂದು ನೀವು ಉತ್ತರಿಸಿದ್ದೀರಿ. ಹಾಗಾದರೆ ಅವರಿಗಿಂತ ಮುಂಚೆ ಲಿಂಗಾಯತ ಧರ್ಮ ಇರಲಿಲ್ಲವೆ ?

★ ಇಲ್ಲ; ಮೊದಲಿದ್ದುದು ಶೈವ ಧರ್ಮ. ಇಷ್ಟಲಿಂಗ ನಿರ್ಮಾಪಕರೇ ಬಸವಣ್ಣನವರು. ಎರಡನೆಯದಾಗಿ ವಚನ ಸಾಹಿತ್ಯ ಮುಖೇನ ಒಂದು ಪ್ರಗತಿ ಪರ ಸಂವಿಧಾನವನ್ನು, ಜಾತಿವರ್ಣ ವರ್ಗರಹಿತ ಸಮಾಜ ಕಟ್ಟುವ ಆಚಾರ–ವಿಚಾರ ಸಂಹಿತೆಯನ್ನು ಬಸವಣ್ಣನವರು ಕೊಟ್ಟಿದ್ದಾರೆ. ಅದಕ್ಕೆ ನೀವು ಯಾವುದೇ ಹೆಸರಿನಿಂದ ಕರೆಯಿರಿ-ಲಿಂಗಾಯತ ಧರ್ಮ, ಬಸವ ಧರ್ಮ, ಶರಣ ಧರ್ಮ ಎಂದು, ಅದರ ಆದ್ಯರು ಬಸವಣ್ಣನವರು.

—ಡಿ. ಎಸ್. ಮುಸಳಿ, ಉಕ್ಕಲಿ

** ಲಿಂಗಾಯತ ಜಾತಿಯವರನ್ನು ನಮ್ಮ ರಾಜ್ಯ ಸರ್ಕಾರ ದ್ವೇಷಿಸುತ್ತದೆ. ಹೀಗಾದರೆ ಈ ಸಮಾಜದ ಭವಿಷ್ಯವೇನು ?

★ ಒಂದು ಸರ್ಕಾರ ಬೃಹತ್ತಾದ ಜನಾಂಗವೊಂದನ್ನು ದ್ವೇಷ ಮಾಡುತ್ತದೆ ಎಂದು ಸಾಮೂಹಿಕ ಆರೋಪ ಕೊಡುವುದು ಎಷ್ಟರಮಟ್ಟಿಗೆ ಸರಿಯಾದೀತೋ ನಾನರಿಯೆ. ಇಷ್ಟು ಮಾತ್ರ ನಿಜ: ಒಬ್ಬ ಮಗ ಬುದ್ಧಿವಂತ ಎಂದು ಅವನನ್ನು ಶಾಲೆಯಿಂದ ಬಿಡಿಸಿ, ದಡ್ಡನ ಬಗ್ಗೆ ಮರುಕ ತೋರಿ ಒತ್ತಾಯ ದಿಂದ ಅವನನ್ನು ಓದಿಸಲು ಹಚ್ಚುವ ತಾಯಿಯ 'ಬುದ್ಧಿವಂತಿಕೆ' ಇಂದ ವರ್ತಿಸುವುದು ಸರಿಯೆ ? ಎಂಬ ಸಮಸ್ಯೆ ನಮ್ಮನ್ನು ಕಾಡುತ್ತಿದೆ. ಅಧಿಕಾರದ ಅಲ್ಪಾಕಾಂಕ್ಷೆಯಿಂದ ಒಂದು ಬೃಹತ್ ರಾಷ್ಟ್ರದ ಬೌದ್ಧಿಕ ಸಾಮರ್ಥ್ಯವನ್ನು ನಿರ್ವೀರ್ಯಗೊಳಿಸುವುದು ಎಂಥಾ ರಾಷ್ಟ್ರೀಯ ಪಾಪ ಎಂದು ಚಿಂತಿಸುತ್ತಿದ್ದೇವೆ ನಾವು. ನಿಮಗೆ ಲಿಂಗಾಯತರ ಚಿಂತೆಯಾದರೆ, ನಮಗೆ ರಾಷ್ಟ್ರದ ಚಿಂತೆ. ಅತ್ಯಂತ ಜವಾಬ್ದಾರಿಯುತ ಸ್ಥಾನಗಳೂ ರಾಷ್ಟ್ರ, ನಿರ್ಮಾಪಕರೂ ಆದ ವೈದ್ಯರು, ಅಭಿಯಂತರು, ರೇವಿನ್ಯೂ ಅಧಿಕಾರಿಗಳು, ಶಿಕ್ಷಕರು ಇಂಥಲ್ಲಿ ಬುದ್ಧಿ, ಅರ್ಹತೆಗಳ ಬಲದಿಂದ ಆರಿಸದೆ ಜಾತಿ ಬಲದಿಂದ ಆರಿಸಿದ್ದಾದರೆ ಈ ನಾಡಿನ ಬೌದ್ಧಿಕ ಮಟ್ಟ ಯಾವ ಸ್ಥಿತಿಗಿಳಿದೀತು ಎಂಬ ಭಯ ನಮ್ಮನ್ನು ಕಾಡುತ್ತಿದೆ. ಶತಶತಮಾನಗಳಿಂದ ಒಂದು ಬಗೆಯ ಅನಿಷ್ಟ ಸಮಾಜ-ಅರ್ಥ ವ್ಯವಸ್ಥೆ ನಮ್ಮನ್ನು ಮಣ್ಣುಮುಕ್ಕಿಸಿತು. ಈಗ ರಿವರ್ಸ್‌ಗೇರ್ ಬಿದ್ದಿದ್ದು ಇನ್ನೊಂದು ಅನಿಷ್ಟ ಸಮಾಜ-ಅರ್ಥ ವ್ಯವಸ್ಥೆ ವಿಷವನ್ನುಣಿಸಲು ಬರುತ್ತಿದೆ. ಈ ರಾಷ್ಟ್ರದ ದುರಾದೃಷ್ಟವೇ ಇದ್ದಿರ ಬೇಕು !

—ಜಿ. ಎಂ. ನೀಲಲೋಚನಸ್ವಾಮಿ, ಗಿರಿಯಾಪುರ

** ಅಂಗೈಯಲ್ಲಿ ಲಿಂಗವ ಹಿಡಿದು, ಬಾಹ್ಯ ಪ್ರಪಂಚದ ಆಗು ಹೋಗುಗಳ ಬಗ್ಗೆ ಯೋಜಿಸುವವರಿಗೆ ಮೋಕ್ಷ ಸಾಧ್ಯವೆ ?

★ ಮನವು ಬಹಿರ್ಮುಖವಾಗಲು ಮಾಯಾ ಪ್ರಪಂಚ, ಮನವು ಅಂತರ್ಮುಖವಾಗಲು ಅವಿರಳ ಜ್ಞಾನಿ. ಮನವು ಮಹದಲ್ಲಿ ನಿಂದಿರಲಾತ ಮುಕ್ತನು : ಮನೋಲಯವಾದೊಡೆ ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ಅಭೇದ್ಯನು ಎಂದು ಆದಯ್ಯನವರು ಹೇಳಿಲ್ಲವೆ ? ★

ಮಾತು ಜ್ಯೋತಿರ್ಲಿಂಗ

ಸಂಗ್ರಹ : **ಗಂಗಮ್ಮ**

ಆಳವಾದ ನೀರಿನಲ್ಲಷ್ಟೇ ಮೊಸಳೆಯ ಬಲ, ಅದು ಹೊರಬಂದ ನಂತರ ಸಣ್ಣ ಪ್ರಾಣಿಯೂ ಅದನ್ನು ಘಾಸಿಗೊಳಿಸಬಲ್ಲುದು. **—ತಿರುವಳ್ಳುವರ್**

ಸಂಪತ್ತು ನಮ್ಮನ್ನು ಅರಸಬಹುದು : ಆದರೆ ಅರಿವನ್ನು ನಾವು ಅರಸಬೇಕಾಗುತ್ತದೆ. **—ಅನುಭವವಾಣಿ**

ಅತೀ ವಿಚಾರ ಮಾಡುವುದರಿಂದಲೂ ನಾವು ದಾರಿತಪ್ಪುತ್ತೇವೆ. ಏನೂ ವಿಚಾರ ಮಾಡದಿರುವುದರಿಂದಲೂ ನಾವು ದಾರಿ ತಪ್ಪುತ್ತೇವೆ. **—ನಿಕೋಲಿನಿ**

ಇರುವೆಗಳು ಒಳ್ಳೆ ಪ್ರಜೆಗಳು ; ಸಮುದಾಯ ಹಿತದ ಪಾಠವನ್ನು ಅವು ಕಲಿಸುತ್ತವೆ. **—ಥೋರೋ**

ಪ್ರಯತ್ನಿಸಿ ಸೋಲುವುದು ಜೀವನವಿಡೀ ನಿದ್ರಿಸುವುದಕ್ಕಿಂತ ಎಷ್ಟೋ ಪಾಲು ಮೇಲು. **—ಕೆ. ಜೆರೋಮ್**

ಎಲ್ಲೋ ಕೆಲವು ಬುದ್ಧಿಗಳು ಅತಿ ಶ್ರಮಿಸಿ ಸವೆಯುತ್ತವೆ, ಬಹಳಷ್ಟು ಶ್ರಮಿಸದೇ ತುಕ್ಕು ಹಿಡಿಯುತ್ತವೆ. **—ಕ್ರಿಸ್ಟಿಯನ್ ನೆಸ್ಟೆಲ್ ಬೋವಿ**

ಮನ ಮನ ಏಕಾರ್ಥವಾಗದವರಲ್ಲಿ ಕುಳ್ಳಿರಲಾಗದು. ಮಾತನಾಡಲಾಗದು. **—ಸಕಲೇಶ ಮಾದರಸ**

ಅಂತರಂಗ ಶುದ್ಧವಿಲ್ಲದವರ ಸಂಗ ಸಿಂಗಿ ಕಾಳಕೂಟ ವಿಷ. **— ಬಸವಣ್ಣ**

ಚಂದನವ ಕಡಿದು ಕೊರೆದು ತೇದಡೆ, ನೊಂದೆನೆಂದು ಕಂಪ ಬಿಟ್ಟಿತ್ತೆ ? ಸಂದು ಸಂದು ಕಡಿದ ಕಬ್ಬನು ತಂದು ಗಾಣದಲಿಕ್ಕಿ ಅರೆದಡೆ, ಬೆಂದು ಪಾಕಗೊಳೆ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ ? **—ಅಕ್ಕಮಹಾದೇವಿ**

ಎಣ್ಣೆ ಬೇರೆ, ಬತ್ತಿ ಬೇರೆ ; ಎರಡೂ ಕೂಡಿ ಸೊಡರಾಯಿತ್ತು. ಪುಣ್ಯ ಬೇರೆ, ಪಾಪ ಬೇರೆ ; ಎರಡೂ ಕೂಡಿ ಒಡಲಾಯಿತು. **—ಅಲ್ಲಮಪ್ರಭು**

ನನಸಾದ ಕನಸು

ಶರಣರಾದ. ಮಾ. ನಂ. ಸಂಜಪ್ಪ

ಭಾದ್ರಪದ ಮಾಸದ ಕೊನೆಯ ದಿನಗಳಲ್ಲಿ ಒಂದು ರಾತ್ರಿ ಮಲಗಿದ್ದಾಗ್ಗೆ ಏನೇನೋ ಯೋಚನೆಗಳು ಮುತ್ತಿಕೊಂಡು, ಕೊನೆಗೆ "ಬೌದ್ಧರಲ್ಲಿ ಕ್ರೈಸ್ತರಲ್ಲಿ ಇತರ ಅನೇಕ ಮತೀಯರಲ್ಲಿ ಎಂತೆಂತಹ ಸಮಾಜೋಪಯುಕ್ತವಾದ ಶಾಶ್ವತ ಸಂಸ್ಥೆಗಳೂ ಕಾರ್ಯಗಳೂ ನಡೆಯುತ್ತಿವೆ. ನಮ್ಮಲ್ಲಿ ಅಂತಹ ಒಂದಾದರೂ ಕಾರ್ಯ ನಡೆಯುತ್ತಿಲ್ಲವಲ್ಲ. ಎಂತೆಂತಹ ಜಗದ್ಗುರು ಪೀಠಗಳೂ ಸಭೆ-ಸಮಿತಿಗಳೂ ಜೀವಂತವಾಗಿದ್ದರೂ ಈ ವಿಚಾರದಲ್ಲಿ ನಿಷ್ಕ್ರಿಯ ನಿಷ್ಫಲ ನಿರ್ವೀಣ್ಣವಾಗಿವೆಯಲ್ಲ" ಎಂಬ ಕೊರಗಿನಲ್ಲಿಯೇ ಹಾಗೇ ನಿದ್ರೆ ಹತ್ತಿತು.

ಆ ಕೊರಗಿನ ನಿದ್ರೆಯಲ್ಲಿಯೇ ಸುಮಾರು ಬೆಳಗಿನ ಜಾವದ ಹೊತ್ತಿಗೆ ವಿವಿಧ ವಾದ್ಯರವಗಳೊಂದಿಗೆ ಸುಂದರ ನಂದೀ ಧ್ವಜವೊಂದು ಬಾನೆತ್ತರಕ್ಕೆ ಆರೋಹಣವಾದಂತೆ ಕಂಡಿತು. ಬಾನೆತ್ತರದ ಬಾವುಟವನ್ನು ಕಂಡು ಭೂಮಿಯ ಕಡೆಗೆ ದೃಷ್ಟಿ ಹಾಯಿಸಲು ಅಲ್ಲಿಯೇ ವೃಷಭಾವತೀ ನದಿ ಹರಿಯುತ್ತಿದ್ದುದನ್ನು ಕಂಡು, ಅದರ ಜುಳು ಜುಳು ಮಂಜುಳ ನಿನಾದವನ್ನು ಕೇಳಿ, ಮನಸ್ಸು ಪುಳಕಗೊಂಡಿತು.

ಆ ಪುಳಕದಿಂದ ಆನಂದತುಂದಿಲಗೊಂಡು ಮನಃ ಪಟಲದ ಮೇಲೆ ಒಂದೊಂದೇ ದೃಶ್ಯಗಳು ಕಾಣತೊಡಗಿದವು. ಮೊಟ್ಟಮೊದಲು ಒಂದು ಸುಂದರ ಸಂಸ್ಥೆಯ ನಾಮ ಫಲಕವು, ನಂತರ ಒಂದು ಪ್ರಾರ್ಥನಾಮಂದಿರ, ಒಂದು ಗುರುಕುಲ, ಒಂದು ಅತಿಥಿಗೃಹ, ಒಂದು ವೃದ್ಧಾಲಯ, ಗ್ರಂಥಾಲಯ, ದಿವ್ಯಜ್ಞಾನ ವಿದ್ಯಾಲಯ, ಪ್ರಸಾದ ನಿಲಯ, ಶರಣ ತುರುಗಾಹಿರಾಮಣ್ಣನ ಕಾಯಕಕ್ಕೆ ಗೌರವ ಸ್ಥಾನವನ್ನಿತ್ತ ಒಂದು ಗೋಶಾಲೆ, ಇವೆಲ್ಲ ಒಂದೋದಾಗಿ ಕಂಡು ಮನವೆಲ್ಲ ಮುದಗೊಂಡು ಮಲ್ಲಿಗೆಯಂತೆ ಅರಳುತ್ತಿರುವಷ್ಟರಲ್ಲಿ ಅನತಿ ದೂರದ ಜೇನು ಸಾಕಣೆ ಮತ್ತು ಪ್ರಾಣಿ ಸಾಕಣೆ ಕೇಂದ್ರದಿಂದ ಭೃಂಗ ಸಂಗೀತ ಮತ್ತು ನವಿಲಿನ ಕೇಕಾರವ ಧ್ವನಿಗಳು ಕೇಳಬಂದು ಎಚ್ಚೆತ್ತು ಮೃತ್ಯುಂಜಯ ಗುರುವೇ ಬಸವಲಿಂಗಾ ಎಂದು ಕಣ್ಣುಜ್ಜಿಕೊಂಡು ಎದ್ದರೆ, ಬೆಳ್ಳಗೆ ಬೆಳಕು ಹರಿದಿದೆ.

ಬೆಳಗಿನ ಜಾವದ ಕನಸಾದುದರಿಂದ ಮನಸ್ಸಿಗೆ ಏನೋ ಒಂದು ಭರವಸೆ ಕಂಡಂತಾಗಿ ಪ್ರಾತರ್ವಿಧಿಗಳನ್ನು ಮುಗಿಸಿ ದಿನಚರಿಯಲ್ಲಿ ತೊಡಗಿದೆ.

ಆದರೂ ಕಂಡ ಕನಸಿನ ಚಿಂತೆ ಹರಿದಿರಲಿಲ್ಲ ಶಿವನೇ, ಯಾವ ಸಂಘ-ಸಂಸ್ಥೆ, ಸಭೆ-ಸಮಿತಿ, ಮಠ-ಜಗದ್ಗುರು ಪೀಠಗಳು ಮುಂತಾದ ಈ ಯಾರಿಗೂ ಇಂತಹ ಒಂದೊಂದಾದರೂ ಸಂಸ್ಥೆಗಳನ್ನು ನಿರ್ಮಿಸುವ ಯೋಚನೆ ಬರಬಾರದೇ ? ಏಕೆ ಎಲ್ಲರಿಗೂ ಇಂಥ ಅಭಿಮಾನ ಶೂನ್ಯತೆಯನ್ನು ತುಂಬಿದೆ ? ಎಂಬ ಚಿಂತ್ರೆ ಮಾತ್ರ ಕೊರೆಯುತ್ತಲೇ ಇದ್ದಿತು.

ಆದರೆ ಅಕ್ಟೋಬರ್ ೧ನೇ ದಿನಾಂಕ ಮಹಾಲಯ ಅಮಾವಾಸ್ಯೆಯ ದಿನ, ಮನೆಯಿಂದ ಹೊರಟಾಗ ಅಂಚೆಪೇದೆಯು ತಂದು ಕೊಟ್ಟ ಕವರನ್ನು ತೆರೆದು ನೋಡಿದಕೂಡಲೇ ಸಂತೋಷಾತಿರೇಕದಿಂದ ಕುಣಿದಾಡುವಂತಾಯಿತು. ಕೆಲವೇ ದಿನಗಳ ಹಿಂದೆ ಕಂಡಿದ್ದ ಕನಸೆಲ್ಲ ಈ ಕವರಿನಲ್ಲಿ ಸಾಕ್ಷಾತ್ಕಾರವಾಗಿದ್ದಿತು.

ಈಗ ಬೆಂಗಳೂರು ಪಟ್ಟಣಕ್ಕೆ ಸುಮಾರು ಇಪ್ಪತ್ತು ಕಿ.ಮೀ. ದೂರದಲ್ಲಿ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಭವ್ಯವಾದ ಮಹಾದ್ವಾರದ ಮೇಲೆ "ಬಸವ ಗಂಗೊತ್ರಿ" ಸಂದರ್ಶಕರ ಮನವನ್ನು ಮುದಗೊಳಿಸುತ್ತದೆ. ಒಳಗೆ ಪ್ರವೇಶಮಾಡಿದರೆ, ನಾನು ಸ್ವಪ್ನದಲ್ಲಿ ಕಂಡಿದ್ದ ಎಲ್ಲ ಹತ್ತು ಸಂಸ್ಥೆಗಳೂ ಭವ್ಯವಾದ ನಾಮಫಲಕಗಳೊಂದಿಗೆ ದಿವ್ಯಭವನಗಳಲ್ಲಿ ವಿರಾಜಿಸುತ್ತಿವೆ.

ವಿಸ್ತಾರವಾಗಿ ಪ್ರಕೃತಿಯ ವರಪ್ರಸಾದದಿಂದ ರಮಣೀಯವಾಗಿ ರಾರಾಜಿಸುತ್ತಿರುವ–ಒಂದು ಗ್ರಾಮದಷ್ಟಿರುವ ಆ ಸ್ಥಳವನ್ನೂ ಸಂಸ್ಥೆಗಳನ್ನೂ ಕಂಡವರ ಮನದಲ್ಲಿ ಧನ್ಯ ಭಾವನೆಯು ಮೂಡಿ ಈ "ಬಸವ ಗಂಗೋತ್ರಿ"ಯ ನಿರ್ಮಾಪಕರ ವಿಚಾರದಲ್ಲಿ ಕೃತಜ್ಞತಾಪೂರ್ಣವಾದ ಪರಮ ಪೂಜ್ಯ ಭಾವನೆಯು ಮೂಡುತ್ತದೆ.

ಅಭಿಮಾನ ಶೂನ್ಯತೆಯು ತುಂಬಿ ತುಳುಕುತ್ತಿರುವ ಈ ಸಮಾಜದಲ್ಲಿ ಇಂತಹ ಮಹತ್ಕಾರ್ಯವನ್ನು ವೈಯಕ್ತಿಕವಾಗಿ ಸಾಧಿಸಿರುವ ಜ್ಞಾನ-ಕ್ರಿಯಾ ಸಮಾಯುಕ್ತ ವ್ಯಕ್ತಿಗಳು ನಮ್ಮ ಈ ಸಮಕಾಲೀನರಾಗಿರುವರಲ್ಲ ! ಎಂಬ ಹರ್ಷ-ಧನ್ಯ ಭಾವಗಳು ಮೂಡಿ ಆ ಸ್ಥಳದಲ್ಲಿ ಸಾಷ್ಟಾಂಗ ಪ್ರಣಾಮವನ್ನು ಅರ್ಪಿಸುವಂತಾಗುತ್ತದೆ.

ತೆರಹಿಲ್ಲದಂತೆ ತುಂಬಿ ತುಳುಕುತ್ತಿರುವ ಜಗದಾದಿ ಜಾಗದ ಗುರುಗಳಾರಿಂದಲೂ ಸಾಧ್ಯವಾಗದ ಈ ಬೃಹತ್ತಾದ ಮಹತ್ ಸಂಸ್ಥೆಯನ್ನು ಮೂರ್ತಸ್ವರೂಪಕ್ಕೆ ತಂದಿರುವವರು ಲೋಕೈಕ ಮಹಿಳಾ ಜಗದ್ಗುರು ಪದಾಧಿಷ್ಟಿತರಾಗಿರುವ ಜ್ಞಾನ ಕ್ರಿಯಾ

ಸಮನ್ವಿತೆಯರಾದ ಶ್ರೀ ಮಾತೆಮಹಾದೇವಿಯವರು ಮತ್ತು ತೇಜಸ್ವೀಲರಾದ ಸದ್ಗುರು ಲಿಂಗಾನಂದ ಶಿವಯೋಗಿಗಳು ಎಂಬುದನ್ನು ತಿಳಿದಾಗ, ಅವರುಗಳ ಈವರೆಗಿನ ಮಹತ್ಸಾಧನಾ ಕಾರ್ಯಗಳನ್ನು ತಿಳಿದಿರುವವರು ಯಾರೂ ಆಶ್ಚರ್ಯ ಪಡುವುದಿಲ್ಲ. ಆದರೆ ಈಗಲಂತೂ ಚಕ್ಕಿಸ ಬೆರಗಾಗದಿರಲು ಸಾಧ್ಯವಿಲ್ಲ.

"ಆರಾಂ ಹರಾಂ ಹೈ" ಎಂದು, ಐಷಾರಾಮದ ಜೀವನದಲ್ಲಿ ಕಾಲಯಾಪನೆ ಮಾಡದೆ, ಕ್ರಿಯಾಶೀಲರಾಗಿ ಸಮಾಜೋದ್ಧಾರಕ್ಕೆ-ಜನ ಕಲ್ಯಾಣಕ್ಕೆ ಶ್ರಮಿಸುವವರಿಗೆ ಸಮಾಜವು ಎಂದೂ ಕೊಡುಗೈದಾನಿಯಾಗಿಯೇ ನಿಲ್ಲುತ್ತದೆ ಎಂಬುದಕ್ಕೆ ಬೃಹತ್ತಾದ ಈ ಮಹತ್ಕಾರ್ಯಕ್ಕೆ ಸಮಾಜಾಭಿಮಾನಿಗಳಿಂದ ಈಗ ದೊರೆಯುತ್ತಿರುವ ಔದಾರ್ಯದ-ಅಭಿಮಾನದ-ಉತ್ಸಾಹ ಪ್ರೋತ್ಸಾಹಗಳೇ ನಿದರ್ಶನ. ಅಂತೂ ಸದ್ಭಕ್ತವೃಂದವೇ ತಮ್ಮಲ್ಲಿ ನನ್ನದೊಂದು ಬಿನ್ನಹ:

"ಬೆಂಗಳೂರ್ಗೆ ಬಂದಮೇಲೆ ! ಮಂಗಳಸ್ವರೂಪಿ "ಬಸವ ಗಂಗೋತ್ರಿ"
ನೋಡದ್ಹಾಂಗೆ ಹೋಗಬಾರ್ದು". ★

(೧೭ನೇ ಪುಟದಿಂದ ಮುಂದುವರೆದುದು)

ಮಾತು ಜ್ಯೋತಿರ್ಲಿಂಗ

ಭದ್ರ ಗಜದ ಮೇಲೆ ಬರುತ್ತಿರ್ದು, ಕೆಳಗಿರ್ದ ಗುಜ್ಜನಾಯಿ ಮುಟ್ಟೀತೆಂಬ ಸಂದೇಹವೇಕೆ.
—ಹಡಪದ ಅಪ್ಪಣ್ಣ

ವಿಜ್ಞಾನಿಯು ಕಂಡುಹಿಡಿವ ಪ್ರಕೃತಿ ನಿಯಮದ ಒಂದೊಂದು ಸೂತ್ರವೂ ಪರಮಾತ್ಮನ ಸ್ತುತಿ ಎಂಬುದನ್ನು ನಾವು ಅರಿಯಬೇಕು. **—ಮೆರಿಯುಮಿಶೆಲ್**

ವಿಜ್ಞಾನವನ್ನು ಕಂಡು ಹೆದರುವ ಧರ್ಮ-ದೇವರನ್ನು ಅಗೌರವಿಸಿದಂತಾಗುತ್ತದೆ ಮತ್ತು ತನ್ನ ಆತ್ಮಹತ್ಯೆಯನ್ನು ತಾನೇ ಮಾಡಿಕೊಳ್ಳುತ್ತದೆ. **—ಎಮರ್ಸನ್**

ಆನು ಒಲಿದಂತೆ ಹಾಡುವೆ

ಭಾಗ—೨

ಬಸವಣ್ಣ

ಪರಿಸರವೆಂಬ ಅಷ್ಟಪದಿ

೧. ಸಂಸಾರ ಸಾಗರದ ತೆರೆಕೊಬ್ಬಿ
ಮುಖದ ಮೇಲೆ ಅಲೆಯುತ್ತಿದ್ದುದೇ ನೋಡಾ
ಸಂಸಾರ ಸಾಗರ ಉರದುದ್ದವೆ ಹೇಳಾ !
ಸಂಸಾರ ಸಾಗರ ಸಿರದುದ್ದವಾದ ಬಳಿಕ ಏನ ಹೇಳುವೆನಯ್ಯಾ ?
ಅಯ್ಯಾ ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ
ಕೂಡಲ ಸಂಗಮದೇವಾ, ನಾವೇವೆನೇವೆನಯ್ಯಾ.

ಅರ್ಥ : ಸಂಸಾರ ಸಾಗರದ ತೆರೆಗಳು ಕೊಬ್ಬಿ ಅಲೆಯುತ್ತ, ಸಿಕ್ಕಿಬಿದ್ದ ಜೀವಿಯನ್ನು ಹತಾಶಗೊಳಿಸುತ್ತಿವೆ. ಮೊದಲು ಕೇವಲ ಬಂದು ಅಲೆದು ಹೋಗುತ್ತಿದ್ದವು ಅಲೆಗಳು. ಆದರೆ ಬರುಬರುತ್ತ ಎದೆ ಮಟ್ಟಕ್ಕೆ, ಕೊರಳುದ್ದಕ್ಕೆ, ಶಿರದುದ್ದಕ್ಕೆ ಸಮುದ್ರವೇರಿ ಧ್ವನಿಯನ್ನು ಮುಚ್ಚುತ್ತಿದೆ ; ಸ್ಪಷ್ಟ ಶಬ್ದಗಳು ಹೊರಡದಂತೆ ತಡೆಹಾಕಿದಾಗ ಜೀವಿಯು ಕೇವಲ ಅಸ್ಪಷ್ಟ ಹುಯ್ಯಲನ್ನು ಮಾಡಬಲ್ಲ. ಇಂಥ ಸಂದರ್ಭದಲ್ಲಿ ನಾನೇನ ಮಾಡಬಲ್ಲೆ ? ಎಂದು ವ್ಯಕ್ತಪಡಿಸುವ ವಿಷಾದಪೂರ್ಣ ನಿಸ್ಸಹಾಯಕತೆಯೊಡನೆ ವಚನವು ಮುಗಿಯುತ್ತದೆ.

ವ್ಯಾಖ್ಯೆ : ಈ ವಚನದ ಪ್ರಮುಖ ವಿಷಯ 'ಸಂಸಾರ ಸಾಗರ'ದ ಸ್ವಭಾವ ಚಿತ್ರಣ. ಇಲ್ಲಿ ವ್ಯಕ್ತಿಗತ ಜೀವನದ ಅನುಭವದ ಸ್ಪಂದನವಿದೆ ಮತ್ತು ಲೋಕದ ಸ್ವಭಾವದ ಪರಿಚಯವಿದೆ. "ಸಂಸಾರ" ಭಾರತದ ತತ್ತ್ವಜ್ಞಾನದಲ್ಲಿ ಅತಿ ಮುಖ್ಯವಾಗಿ ಪ್ರಸ್ತಾಪವಾಗುವ ವಿಷಯ. ವಚನ ಸಾಹಿತ್ಯ ವಲಯದಲ್ಲಿ ಸಂಸಾರ ಪದಕ್ಕೆ ಹಲವಾರು ಅರ್ಥಗಳನ್ನು ಕಾಣಬಹುದು.

1. ಹೆಂಡತಿ-ಮಕ್ಕಳು ಪ್ರೇಮ-ವ್ಯಾಮೋಹಗಳ ಸಿಕ್ಕು

ಅ) ಬೆಂದವೊಡಲ ಹೊರೆಯ ಹೋಯಿತ್ತೆನ್ನ ಸಂಸಾರ.
ಆ) ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ. ೧೭

2. **ಇಂದ್ರಿಯಗಳಿಗೆ ಆಹಾರವಾಗಿ ಬರುವ ವಿಷಯ ಸುಖದ ಜಾಲ.**

ಅ) ಸಂಸಾರವೆಂಬ (ಪಂಚವಿಷಯಗಳು) ಹೆಣ ಬಿದ್ದರೆ ತಿನಬಂದ ನಾಯ ಜಗಳವ (ಇಂದ್ರಿಯಗಳ ಹೋರಾಟ) ನೋಡಿರೆ.

ಆ) ಸಂಸಾರವೆಂಬ ಸರ್ಪ ಮುಟ್ಟಲು ಪಂಚೇಂದ್ರಿಯ ವಿಷಯ. ಬ.ಷ.ವ ೨೦

3. ಇಂದ್ರಿಯ ಸುಖಾಪೇಕ್ಷೆ

ಅ) ಸಂಸಾರ ಸಂಗವ ಬಿಡದು ನೋಡೆನ್ನ ಮನವು ಬ.ಷ.ವ. ೩೫

ಆ) ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ !
ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು. ಇನ್ನೆಂದಿಗೆ ಮೋಕ್ಷವಹುದೋ
ಬ.ಷ.ವ. ೯

4. **ಗೃಹಸ್ಥ ಜೀವನ**

ಅ) ಅಚ್ಚಿಗವೇಕಯ್ಯಾ ಸಂಸಾರದೊಳಗೆ ಬ.ಷ.ವ ೧೭೩

ಆ) ಸಂಸಾರದಲ್ಲಿ ಹುಟ್ಟಿ ಬ.ಷ.ವ. ೨೪೨

5. **ಮಾನಸಿಕ ದುರ್ಗುಣಗಳ ಒಕ್ಕೂಟ**

ಅ) ಸಂಸಾರವೆಂಬ (ಸ್ವಾರ್ಥ) ಶ್ವಾನನಟ್ಟಿ ಮೀಸಲ ಬೀಸರ ಮಾಡದಿರಯ್ಯ

ಆ) ಸಂಸಾರ (ವ್ಯಾಮೋಹ) ಮಾಣ್ದಲ್ಲದೆ ಶರಣ ಸಜ್ಜನಿಕೆ ...... ಅಳವಡದು.

6. **ಜೀವನ**

ಅ) ದೇವಾ, ನೀ ಮಾಡಿದುಪದೇಶ ಎನಗೀ ಪರಿಯಲ್ಲಿ
ಸಂಸಾರವ ಸವೆಯೆ ಬಳಸುವೆನು.

ಆ) ಹೊತ್ತಾರೆ ಎದ್ದು ಶಿವಲಿಂಗದೇವನ ದೃಷ್ಟಿಯಾರೆ ನೋಡದವನ
ಸಂಸಾರವೇನವನ.

7. **ಭವಬಂಧನ**

ಸಂಸಾರವೆಂಬುದೊಂದು ಹಗೆಯಯ್ಯ ತಂದೆ
ವಂಶವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯಾ

ಅಕ್ಕಮಹಾದೇವಿ

8. **ಜಗತ್ತು**

ಪಾಪ-ಪುಣ್ಯ, ಸ್ತುತಿ-ನಿಂದೆ, ಮಾನ-ಅಪಮಾನ ಮುಂತಾದ ದ್ವಂದ್ವಗಳ ತೆರೆಗಳಿಂದ ಕೂಡಿದ ಲೋಕ.

9. **ಆಸೆ-ಆಮಿಷ, ರೋಷ-ಹರುಷ, ಹೊಗಳಿಕೆ-ಬೆದರಿಕೆಗಳನ್ನೊಡ್ಡುವ ಪರಿಸರ.**

ಹೀಗೆ ಹಲವಾರು ಅರ್ಥಗಳು ಸಂಸಾರ ಪದಕ್ಕುಂಟು.

ಬಸವಣ್ಣನವರ ಮೇಲ್ಕಂಡ ವಚನದಲ್ಲಿ ಧ್ವನಿಸುವ ಅರ್ಥ ನೆಯದು. ಇಲ್ಲಿ ಹೆಂಡತಿ–ಮಕ್ಕಳು, ಬಂಧು-ಬಳಗ ಮುಂತಾದ ಸೀಮಿತ ಸಂಬಂಧದಲ್ಲಿ ಬಳಕೆಯಾಗದೆ, ಸುತ್ತಲೂ ಅಷ್ಟಪದಿಯಂತೆ ಅವಚಿಕೊಂಡು ಹಿಚುಕಲು ಬರುವ ಪರಿಸರದ ಚಿತ್ರವಿದೆ.

ಈ ವಚನದ ಬರವಣಿಗೆಗೆ ಒಂದು ಹಿನ್ನೆಲೆ ಕಲ್ಪಿಸೋಣ. ದೊಡ್ಡ ಅಧಿಕಾರ ದಲ್ಲಿ ಸಾರ್ವಜನಿಕ ವ್ಯಕ್ತಿ (public man) ಯಾಗಿದ್ದಾರೆ ಬಸವಣ್ಣನವರು. ಬೆಟ್ಟದ ಮೇಲಿನ ಗಿಡಗಳಿಗೆ ಗಾಳಿಯ ಹೊಡೆತ ಬಹಳವಿದ್ದಂತೆ ಅಧಿಕಾರ ದೊಡ್ಡದಾದಂತೆ ಪರಿಸರದ ಒತ್ತಡವೂ ಹಿರಿದಾಗುತ್ತದೆ. ಅದರಲ್ಲೂ ಆದರ್ಶವಾದಿಗಳಿಗೆ ಈ ಲೋಕ ತಂದಿಕ್ಕುವ ಪೇಚು ಗಂಭೀರವಾಗಿರುತ್ತದೆ. ಅಂಥದೊಂದು ಒತ್ತಡ ಬಂದಿದೆ. ಅಂತರಾತ್ಮ ಬೆಂಬಲಿಸುವ ಆದರ್ಶದತ್ತ ವಾಲಬೇಕೋ. ಅಥವಾ ಪರಿಸರ ಬಯಸುವ ಅನಾದರ್ಶಕ್ಕೆ ಸೋಲಬೇಕೊ ? ಈ ದ್ವಂದ್ವ ತೊಳಲಾಟದಲ್ಲಿ ಸಿಕ್ಕಿಬಿದ್ದ ಬಸವಣ್ಣನವರು ತಮ್ಮಂತರಂಗದಲ್ಲಿ ಮೊರೆಯನ್ನು ಸಲ್ಲಿಸುತ್ತಿದ್ದಾರೆ.

"ದೇವಾ, ಮಾನವ ಸಮಾಜ, ವಿವಿಧ ಆಕಾಂಕ್ಷೆಗಳಿಂದ ಕೂಡಿದ ಮನುಷ್ಯರ ಒಕ್ಕೂಟ ಎಂದ ಮೇಲೆ ಈ ಲೋಕದಲ್ಲಿ ಆಗಾಗ ಆಸೆ-ಆಮಿಷಗಳನ್ನು ಒಡ್ಡುವ, ಹೊಗಳಿಕೆ–ಬೆದರಿಕೆ ಮುಂದು ಮಾಡುವ ಪ್ರಸಂಗ ಒದಗಿಬರಬಹುದು. ಅಷ್ಟೇನು ಮರಣಾಂತಿಕ ಅಪಾಯವನ್ನೇನೂ ಇವು ಒಡ್ಡುವುದಿಲ್ಲ. ಅವು ಕೊಬ್ಬಿ ಬರುವ ತೆರೆಗಳಂತೆ. ಬಲ್ಲಿದ ಈಜುಗಾರ ಸಮರ್ಥವಾಗಿ ಪಾರಾಗಬಲ್ಲ. ಅಲೆಗಳು ಕೊಬ್ಬಿ ಬರುವ ಬದಲು ಸಮುದ್ರವೇ ಉಕ್ಕತೊಡಗಿ ಉರದುದ್ದ, ಕೊರಳುದ್ದ, ಶಿರದುದ್ದ ಏರಿ ನುಂಗಲುದ್ಯುಗಿಸಿದಾಗ ಮಾಡುವದೇನನ್ನು ? ಸಮಾಜದಲ್ಲಿ ಹಲವರು ಸ್ವಾರ್ಥಿಗಳು, ಶೋಷಕರು ಬಲಿಯ ತೊಡಗಿದಾಗ ಅದು ಅಪಾಯಕಾರಿ. ಆದರೆ ಹೇಗಾದರೂ ಸಜ್ಜನರು ಹತ್ತಿಕ್ಕಬಹುದು. ಹೀಗಾಗುವ ಬದಲು ಜನಾಂಗವೇ ಇಡಿಯಾಗಿ ಸ್ವಾರ್ಥ, ಶೋಷಣೆ, ದುರಾಚಾರಗಳಿಗಿಳಿದರೆ ಉದ್ಧರಿಸುವವರಾರು? ಇಂಥ ಬಹು ಸಂಖ್ಯಾಕರ ಪರಿಸರ ಆದರ್ಶವಾದಿಯನ್ನು ಸುತ್ತುವರಿದು ಮುಳುತೆಗಿಸೂಡಗಿದಾಗ, ಅವನು ತನ್ನ ವಿಚಾರಗಳನ್ನು ಸ್ಪಷ್ಟವಾಗಿ ಹೇಳುವುದೆಲ್ಲಿ ಬಂತು, ಗಂಟಲಲ್ಲಿ ನೀರು ತುಂಬಿ ಕೊರಕೊರ ಎನ್ನ ತೊಡಗಿದಾಗ ಕೇವಲ ಕೈಕಾಲು ಬಡಿದು, ಹುಯ್ಯಲನ್ನಷ್ಟೇ ಮಾಡಬಹುದೆಂತೋ ಹಾಗೆ ಆದರ್ಶವಾದಿಯ ವಿಚಾರಗಳು

ಗಂಟಲಲ್ಲೇ ಸಿಕ್ಕು ಹೃದಯದಲ್ಲಿ ವಿಲಿವಿಲಿ ಒದ್ದಾಡುವವು', ಹೀಗೆ ಬಸವಣ್ಣನವರು ಪ್ರಸ್ತುತ ಸಮಾಜ, ಅಲ್ಲಿ ಕೊಬ್ಬಿ ಧಾವಿಸುವ ಸ್ವಾರ್ಥ–ಶೋಷಣೆಯ ತೆರೆಗಳು, ಆ ತಸ್ಮಧ್ಯೆ ಸಿಕ್ಕಿ ಬೀಳುವ ಆದರ್ಶವಾದಿಯ ಚಿತ್ರಣವನ್ನು ಸೊಗಸಾಗಿ ಮಾಡುತ್ತಾರೆ, ಈ ವಚನದಲ್ಲಿ.

ಮನದ ನಾಯಿತನ

೨. ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ !
ಸಂಸಾರ ಸಂಗವ ಬಿಡದು ನೋಡೆನ್ನ ಮನವು
ಈ ನಾಯಿತನವ ಮಾಣಿಸು ಕೂಡಲ ಸಂಗಮದೇವಾ ನಿಮ್ಮ ಧರ್ಮ.

ಅರ್ಥ ; "ತುಕ್ಕು ಹತ್ತಬಾರದೆಂದು ತುಪ್ಪಸವರಿ ಕತ್ತಿಯನ್ನಿಟ್ಟಾಗ, ಆ ತುಪ್ಪದ ರುಚಿಗಾಗಿ ಕತ್ತಿ ನೆಕ್ಕುವ ನಾಯಿಯಂತೆ ಎನ್ನ ಬದುಕು. ಸಂಸಾರ ಸುಖದ ಅಪೇಕ್ಷೆ ಬಿಡದೆ ಮತ್ತೆ ಮತ್ತೆ ಅದಕ್ಕೆ ಎಳಸುವುದು. ಹೀಗೆ ತಾನು ಒಲಿದ ಕಡೆಗೆ ಜಗ್ಗುವ ನಾಯಿತನವ ಕಳೆ".

ಇಲ್ಲಿ "ಬಸವಣ್ಣನವರು ತಮ್ಮ ಮನ"ದ ದೌರ್ಬಲ್ಯ ಹೇಳಿಕೊಂಡಿದ್ದಾರೆಂಬುದಕ್ಕಿಂತ "ಜಗತ್ತಿನ ಮನ"ದ ಸ್ವಭಾವವನ್ನು ಚಿತ್ರಿಸಿದ್ದಾರೆನ್ನಬಹುದು. ಕೆಲವು ಬರಹಗಾರರು ಬಸವಣ್ಣನವರು ತಮ್ಮ ಮನದ ದೌರ್ಬಲ್ಯಗಳನ್ನೇ ತೆರೆದಿಟ್ಟುಕೊಂಡಿದ್ದಾರೆ ಎಂದು ಭಾವಿಸುತ್ತಾರೆ. ಬಸವಣ್ಣನವರು ಏನೇ ಉಪದೇಶಮಾಡಲಿ ಜಗತ್ತನ್ನು ಎದುರಿಗಿಟ್ಟುಕೊಂಡು ಬೋಧಿಸದೆ, ತಮ್ಮ ಮನಸ್ಸನ್ನು ಎದುರಿಗೆ ಇರಿಸಿಕೊಂಡು, ಜಗದ ಸ್ವಭಾವ ಚಿತ್ರಣಕ್ಕೆ ತೊಡಗುತ್ತಾರೆ. ಅಂತೆಯೇ ಉಳಿದ ಅನೇಕ ಶರಣರ ವಚನಗಳಲ್ಲಿ ಕಾಣಬರದ ಮೃದುತ್ವ, ತಪ್ಪುಗಾರರನ್ನು ಚುಚ್ಚಿ ನೋಯಿಸದೆ ಎಚ್ಚರಿಸುವ ಅಪೂರ್ವ "ಮಾತೃವಿಧಾನ"ವನ್ನು ಕಾಣುತ್ತೇವೆ. ಬಸವಣ್ಣನವರ ವಚನಗಳಲ್ಲಿ ಮನದ 'ಮಂಗತನ', 'ನಾಯಿತನ' 'ಪೊಳ್ಳುತನ', 'ಕಪಟತನ' ಇತ್ಯಾದಿ ಜೀವಂತವಾಗಿ ಮೂಡಿಬರುತ್ತವೆ. ಇಂಥೆಲ್ಲ ದುರ್ಗುಣ ಬಸವಣ್ಣನವರ ಮನದ ಲಕ್ಷಣಗಳೇ ಆಗಿದ್ದಿದ್ದರೆ ಅವರಿಂದ ಯಾವ ಮಹಾಕಾರ್ಯವೂ ಆಗುತ್ತಿರಲಿಲ್ಲ. ದುಷ್ಟನಾದವನು ಎಂದೂ ತನ್ನ ಮನವನ್ನು ತೆರೆದಿಡಲು ಯತ್ನಿಸುವುದಿಲ್ಲ ಅವನು ಮುಚ್ಚಿಕೊಳ್ಳಲು ಶ್ರಮಿಸುತ್ತಾನೆ.

ತುಪ್ಪವನ್ನು ಸವರಿಟ್ಟ ಕತ್ತಿಯನ್ನು ನಾಯಿ ಅತ್ಯಾತುರದಿಂದ ನೆಕ್ಕಲು ತೊಡಗುತ್ತದೆ. ಅದರ ನಾಲಿಗೆ ಸೀಳಿ ರಕ್ತ ಸ್ರವಿಸತೊಡಗುತ್ತದೆ. ಅದನ್ನೇ ಕುಡಿದು ಆನಂದ ಪರವಶವಾಗಿ ಮತ್ತೆ ವರ್ಧಿಸಿದ ಆಸೆ-ಆತುರಗಳಿಂದ ನೆಕ್ಕಲಾರಂಭಿಸುತ್ತದೆ. ತನ್ನಲ್ಲಿ

ಶಕ್ತಿಪತನಗೊಳ್ಳುತ್ತಿದೆ, ದೈಹಿಕ ಮತ್ತು ಮಾನಸಿಕವಾಗಿ, ಎಂಬುದನ್ನರಿಯದೆ ನಾಯಿ ಸ್ವಭಾವ ದಾಸ್ಯಕ್ಕೆ ಒಳಗಾಗುತ್ತದೆ. ಅದೇ ರೀತಿ ಮನಸ್ಸು ಸಹ ಸುಖಾಪೇಕ್ಷೆಯ ತೃಪ್ತಿಯಲ್ಲಿ ತೊಡಗುತ್ತದೆ. ಇಂದ್ರಿಯ ಸುಖ, ಲೈಂಗಿಕ ಸುಖಗಳನ್ನು ಅನುಭವಿಸುವ ಆತುರದಲ್ಲಿ ತನ್ನನ್ನು ತಾನು ಪತನಿಸಿಕೊಳ್ಳುವ ದುಃಸ್ಥಿತಿಯನ್ನೆ ಅರಿಯದೆ, ಮರಳಿ ಮರಳಿ ಸುಖಾನ್ವೇಷಣೆಗೈಯುತ್ತದೆ. ನಾಯಿಗೆ ಸಿಕ್ಕುವದೊಂದು ಚಮಚ ತುಪ್ಪ, ಅದಕ್ಕಾಗಿ ಅದು ಸುರಿಸುವುದು ಲೋಟದಷ್ಟು ರಕ್ತ. ಮನಸ್ಸು ತನ್ನ ಶಕ್ತಿಯನ್ನು ವಿಸರ್ಜಿಸಿದಾಗ ದೊರೆಯುವುದು ಸಾಸುವೆಯಷ್ಟು ಸುಖ: ಅದಕ್ಕಾಗಿ ಅವನು ಅನುಭವಿಸುವುದು ಸಾಗರದಷ್ಟು ದುಃಖ, ತನ್ನ ರಕ್ತವನ್ನೇ ಕುಡಿದು ಹೊರಗಿನಿಂದ ಯಾವುದೋ ಸುಖ ಅನುಭವಿಸುತ್ತಿರುವೆನೆಂಬ ಹೆಡ್ಡ ನಾಯಿಯಂತೆ 'ಮನುಜ ಮನ'ದ ಪಾಡು. ಮತ್ತೆ ಮತ್ತೆ ಅದರತ್ತಲೇ ಆಸೆಗಣ್ಣಿನಿಂದ ನೋಡಿ ಜೊಲ್ಲು ಸುರಿಸುವ ನಾಯಿಯಂತೆ, ಮರಳಿ ಇಂದ್ರಿಯ ಸುಖದಿಂದಲೇ ಆಕರ್ಷಿತವಾಗಿ ಅತ್ತ ಜಗ್ಗುವ ಮನದ ನಾಯಿತನ ಮಾಣಬೇಕಾದರೆ ದೈವೀ ಸಹಾಯದ ಬೆಂಬಲ ಬೇಕೆಂದು ಭಾವಿಸಿ ಮೊರೆ ಇಡುತ್ತಾರೆ.

ಮನೆಯಲ್ಲಿ ಮನೆಯೊಡೆಯ ಇದ್ದಿರುವನೆ ?

3. ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?
ಹೊಸ್ತಿಲಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?
ತನುವಿನೊಳಗೆ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲ-ಕೂಡಲ ಸಂಗಮದೇವ !

ಅರ್ಥ: ದಾರಿ ಬದಿಯ ಮನೆಯೊಂದರ ಹೊಸ್ತಿಲಲ್ಲಿ ಹುಲ್ಲು ಬೆಳೆದಿದೆ, ಮನೆಯೊಳಗೆ ವಿಪರೀತ ಕಸ ತುಂಬಿದೆ. ಅಂಥಲ್ಲಿ ಮನೆಯೊಡೆಯನಿಲ್ಲವೆಂದು ನಿರ್ಧರಿಸುತ್ತೇವಷ್ಟೆ. ದೇಹದಲ್ಲಿ ಸುಳ್ಳು, ಮನದಲ್ಲಿ ದುರ್ವಿಚಾರ-ದುರ್ಭಾವದ ಕಸ ತುಂಬಿರುವಾಗ ಮನೆಯೊಡೆಯ ಪರಮಾತ್ಮ ಇರಲಾರನು.

ವ್ಯಾಖ್ಯೆ : ಒಂದಾನೊಂದು ದಿನ ಬಸವಣ್ಣನವರು ದಾರಿಯನ್ನು ಕ್ರಮಿಸುವಾಗ ದಾರಿಯ ಬದಿಯ ಮನೆ ಅವರ ಗಮನ ಸೆಳೆದಿರಬೇಕು. ಆ ಮನೆಯ ಮುಂದೆ ನೆಲ ಸಾರಿಸಿಲ್ಲ, ರಂಗವಲ್ಲಿ ಬಿಟ್ಟಿಲ್ಲ, ಹೊಸ್ತಿಲ ಕಸ ಗುಡಿಸಿಲ್ಲ. ಕೈಯಾಡಿಸುವವರಿಲ್ಲದ ಕಾರಣ ಹುಲ್ಲು ಹಸನಾಗಿ ಬೆಳೆದಿದೆ. ಕುತೂಹಲ ಗರಿಗೆದರಿ ಬಸವಣ್ಣನವರು ಒಳಗೆ ಇಣುಕಿದ್ದಾರೆ. ಅಲ್ಲೋ ಸಾಕಷ್ಟು ಧೂಳು, ಕಸ, ಜೇಡರ ಬಲೆಯ ಲೀಲಾವಿನೋದ, ಜೇಡರ ಹುಳುವಿನ ದೊಂಬರಾಟ ಆ ಬಲೆಯ ಮೇಲೆ. ಹಲ್ಲಿ-ಜಿರಳೆಗಳ ಸಾಮೂಹಿಕ

ನರ್ತನ. ಅಚ್ಚರಿಯ ಅಲೆ ಉಕ್ಕಿ ಹರಿದವು ಈ ಎಲ್ಲ ಸಾಕ್ಷಿಯಾಗಿ ನಿಂತವು ಮನೆಯೊಡೆಯ ಅಲ್ಲಿಲ್ಲವೆಂದು ಹೇಳಲು.

ಅದೇ ರೀತಿ ದೇಹವೇ ಮನೆ. ಅದರ ದ್ವಾರ ಬಾಯಿ. ಆ ದ್ವಾರಕ್ಕೊಂದು ಹೊಸ್ತಿಲು-ತುಟಿ. ಅದರ ಮೇಲೆ ತಾಂಡವವಾಡುತ್ತಿದೆ ಸುಳ್ಳಿನ ಸೊಂಪಾದ ಹುಲ್ಲು. ಮನೆಯೊಡೆಯ (ದೇವನ ಭ೦ು!ನ ಭಯ, ಸಮಾಜ ಭಯ ಯಾವುದೂ ಇಲ್ಲದೆ ನಿರ್ಭಯವಾಗಿ ಸುಳ್ಳು ಹೇಳುವ ಪ್ರವೃತ್ತಿ. ಇನ್ನು ಅಂತರಂಗವನ್ನು ಕೆದಕಿನೋಡಿದರಂತೂ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಾದಿಗಳ ನಗ್ನನೃತ್ಯದ ರಜ. ಇಂಥಲ್ಲಿ ನಿತ್ಯ ಶುದ್ಧ ನಿರಂಜನನಾದ ಪರಮಾತ್ಮನ ಇರವು ಸಾಧ್ಯವೆ ? ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತಾರೆ.

(ಉಪಮೆಗಳು ಏಕದೇಶೀಯವಾಗಿರುತ್ತವೆ. ಅವನ್ನು ಬಹಳಷ್ಟು ಎಳೆಯಲು ಮತ್ತು ತಾತ್ತ್ವಿಕ ವಿಮರ್ಶೆಗೆ ಒರೆಗಲ್ಲಾಗಿ ಹಿಡಿಯಬಾರದು. ಕೊಳೆಯಿದ್ದ, ಹುಲ್ಲು ಬೆಳೆದ ಮನೆಯಲ್ಲಿ ಮನೆಯೊಡೆಯ ಇಲ್ಲವೆಂದು ನಿರ್ಧರಿಸುವುದು ವ್ಯವಹಾರಿಕ ಸತ್ಯ. ಅದನ್ನೇ ಹೋಲಿಸಿ ದುರಾಚಾರ-ದುರ್ಗುಣವಿದ್ದಲ್ಲಿ ದೇವನಿರನು ಎಂದು ನಿರ್ಣಯಿಸುವುದು ಕಷ್ಟ. ದೇವನು ಸರ್ವವ್ಯಾಪಿ, ಪಾಪಿ-ಕೋಪಿ ಪಶುಪಕ್ಷಿ ಕ್ರಿಮಿಕೀಟ ಎಲ್ಲವುಗಳಲ್ಲಿ ಇರುವನೆಂದಾಗ ದುರಾಚಾರಿಯಲ್ಲಿ ಇರನೆ ? ಹಾಗಾದರೆ ವಚನ ಹಿಂದಿನ ಭಾವ ವೇನು ? ಎಲ್ಲಿ ಭೂಮಿಕೆ ಹದವಾಗಿಲ್ಲವೋ ಅಲ್ಲಿ ದೈವೀಶಕ್ತಿ ಪ್ರಭಾವ ಬೀರದು ; ಇದ್ದರೂ ಇಲ್ಲದಂತೆ ಕಾಷ್ಠದೊಳಗಣ ಶಿಖಿಯಂತೆ ಅಭಿವ್ಯಕ್ತಗೊಳ್ಳದ ರೂಪದಲ್ಲಿದ್ದಾನೆ)

ಇಜ್ಜೋಡು ಸಂಸಾರ

4. ಗಂಡ ಶಿವಲಿಂಗದೇವರ ಭಕ್ತ
ಹೆಂಡತಿ ಮಾರಿ ಮಸಣಿಯ ಭಕ್ತೆ !
ಗಂಡಕೊಂಬುದು ಪಾದೋದಕ ಪ್ರಸಾದ
ಹೆಂಡತಿ ಕೊಂಬುದು ಸುರೆ-ಮಾಂಸ !
ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಿಕೆಯ ಹೊರಗೆ ತೊಳೆದಂತೆ. ಕೂಡಲ ಸಂಗಮದೇವ !

ಅರ್ಥ : ಪತಿ ಲಿಂಗಪಥ ಗಮನಿ, ಹೆಂಡತಿ ತಾಮಸ ದೈವಾರಾಧಕಳು. ಗಂಡ ಸ್ವೀಕರಿಸುವುದು ಸತ್ವಪ್ರಧಾನ ಕರುಣ ಪ್ರಸಾದ. ಹೆಂಡತಿ ಸ್ವೀಕರಿಸುವುದು ಮಾಂಸ-ಮದ್ಯಗಳ ನೈವೇದ್ಯ. ಹೀಗೆ ವಿಭಿನ್ನ ಆಚಾರ-ವಿಚಾರಗಳು. ಈ ಬಗೆಯ ಜೀವನ ಸುರಾಭಾಂಡವನ್ನು ಹೊರಗೆ ತೊಳೆದಂತೆ, ಒಳಗೆ ಮರೆದಂತೆ.

ವ್ಯಾಖ್ಯೆ :—ಗಂಡ-ಹೆಂಡತಿ ಅನ್ನುವ ಈ ಎರಡು ಪದಗಳು ಅನೇಕ ತತ್ತ್ವಗಳನ್ನು ಸಂಕೇತಿಸುತ್ತವೆ. ಗೃಹಸ್ಥ ಜೀವನದ ದೃಷ್ಟಿಯಿಂದ ಪತಿ-ಪತ್ನಿಯರನ್ನು ಸಮಾಜ ಜೀವನ ದೃಷ್ಟಿಯಿಂದ ಗೃಹ ಘಟಕ-ಸಮಾಜ ಘಟಕಗಳನ್ನು ಅಧ್ಯಾತ್ಮ ದೃಷ್ಟಿಯಿಂದ ಅಂತರಂಗ-ಬಹಿರಂಗಗಳನ್ನು, ರಾಷ್ಟ್ರೀಯ ದೃಷ್ಟಿಯಿಂದ ಭೌತಿಕ, ಬಹಿರಂಗಿಕ ಪ್ರಗತಿ-ಅಧ್ಯಾತ್ಮಿಕ ಅಂತರಂಗ ಪ್ರಗತಿಯನ್ನು, ರಾಷ್ಟ್ರದ ಭೌತಿಕ ಸಂಪತ್ತು, ಜನಾಂಗ ಸಂಪತ್ತನ್ನು ಸಂಕೇತಿಸುತ್ತವೆ. ಹಂತಹಂತವಾಗಿ ವಿಶಾಲಗೊಳ್ಳುವ ಅರ್ಥಸಂಪತ್ತನ್ನು ಗ್ರಹಿಸಲು ಪ್ರಯತ್ನಿಸುವಾ.

ಗೃಹಸ್ಥ ಜೀವನ ಸತಿ-ಪತಿಗಳೆಂಬ ಎರಡು ಚಕ್ರಗಳ ಮೇಲೆ ಓಡುವ ಗಾಡಿ. ಎರಡೂ ಒಂದು ಅಚ್ಚಿನಿಂದ ಬಂಧಿಸಲ್ಪಟ್ಟು ರಸ್ತೆಯ ಮೇಲೆ ಓಡುವಂತೆ ಆದರ್ಶ, ಜೀವನ ವಿಧಾನ ಇವುಗಳಲ್ಲಿ ಒಮ್ಮತವಿರಿಸಿಕೊಂಡು ಸಾಗಬೇಕಾದುದು ಸಂಸಾರದಲ್ಲಿ ಅವಶ್ಯಕ. ಇಲ್ಲವಾದರೆ ವೈವಾಹಿಕ ಜೀವನವು ರಸರಂಗವಾಗುವ ಬದಲು ರಣರಂಗವಾಗುತ್ತದೆ. ಗಂಡನು ವೈಚಾರಿಕತೆಯ ಅಗ್ನಿಕುಂಡ, ಹೆಂಡತಿ ಮೌಢ್ಯದ ಕೂಪ ; ಗಂಡನು ಸಾತ್ವಿಕ ಪಥ ಯಾತ್ರಿಕ ಹೆಂಡತಿ ಉಗ್ರಮಾರ್ಗ ಸಾಧಕಿ. ಆಗ ಸಂಸಾರ ಇಜ್ಜೋಡು. ಭಿನ್ನ ಆದರ್ಶ, ಆಚಾರ-ವಿಚಾರ ಪ್ರವೃತ್ತಿಗಳ ರಣಾಂಗಣ. ಪತಿ ಸತ್ವಗುಣ ಪ್ರಧಾನವಾಗಿ ದೇವರನ್ನು ಆರಾಧಿಸಿದರೆ ಪತ್ನಿ ತಮೋಗುಣಪ್ರಧಾನ ಆರಾಧಕಿ. ಇಂಥ ಸಂಸಾರ ಜೀವನ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ. ಶುಚಿತ್ವ ಬೇಕಾಗಿರುವುದು ನಿಜಕ್ಕೂ ಮಡಿಕೆಯ ಒಳಗೇ. ಮನುಷ್ಯನ ಹಿರಿಮೆ ತಿಳಿವುದು ಮನೆಯೊಳಗೆ ಅವನಿಗೆ (ಅವನ ವಿಚಾರಗಳಿಗೆ) ಸಿಕ್ಕುವ ಗೌರವದಿಂದ ಎಂಬ ಉಕ್ತಿ ಇದನ್ನೇ ಪ್ರತಿನಿಧಿಸುತ್ತದೆ.

ಒಂದು ಮಡಿಕೆಗೆ ಹೊರ ಮತ್ತು ಒಳಭಾಗವಿದ್ದಂತೆ ಜೀವನದಲ್ಲಿ ಒಳಮುಖ ಹೆಂಡತಿ, ಹೊರಮುಖ ಗಂಡ, ಗಂಡ ಗಳಿಕೆಯ ಪ್ರತೀಕ, ಹೆಂಡತಿ ಬಳಕೆಯ ಪ್ರತೀಕ. ಜೀವನದಲ್ಲಿ ಗಳಿಕೆ ಮತ್ತು ಬಳಕೆ ಪರಿಶುದ್ಧವಾಗಿದ್ದಾಗಷ್ಟೇ ನೆಮ್ಮದಿ, ಶಾಂತಿ. ಸ್ತ್ರೀಯನ್ನು ಮೂಢಭಕ್ತಿಗೆ ಹೋಲಿಸಿರುವುದು ಸಾಂಕೇತಿಕವಿದೆ. ಸಾಮಾನ್ಯವಾಗಿ ಅವರಲ್ಲಿ ವಿಚಾರ ಪರಿವರ್ತನೆ ನಿಧಾನ. ಪುರುಷರು ಜಾತ್ಯತೀತತೆ, ವೈಚಾರಿಕತೆ, ವೈಶಾಲ್ಯತೆ, ಏಕದೇವೋಪಾಸನೆ ಮುಂತಾದವನ್ನು ಬೇಗನೇ ಒಪ್ಪಿಕೊಂಡರೂ ಸ್ತ್ರೀ ಅಷ್ಟು ಸುಲಭವಾಗಿ ಬದಲಾವಣೆ ಸ್ವಾಗತಿಸಳು. ಈ ಉದಾಹರಣೆ ಇನ್ನೂ ಹಿಂಜಿದಾಗ ಅನ್ನಿಸುವುದು. ಹೊರಗಡೆಯ ವೇಷಭೂಷಣ ಅಲಂಕಾರ ಮುಂತಾದ್ದರಿಂದ ಬದಲಾವಣೆಗೊಂಡಂತೆ ತೋರಿಸಲು ಸಾಧ್ಯವಾಗಬಹುದು. ಆದರೆ ನಿಜಕ್ಕೂ ಅಂತರಂಗ ಪರಿವರ್ತನೆಯಾಗಿದೆಯೆ ? ಅದು ಪರಿವರ್ತನೆಗೊಳ್ಳುವುದು ಸ್ತ್ರೀಯಷ್ಟೇ ನಿಧಾನ,

ಮಹಿಳೆಯೂ ವೈಚಾರಿಕ ಪರಿವರ್ತನೆಗೆ ಈಡಾದರೆ ಆಕೆ ಪುರುಷನಿಗಿಂತಲೂ ದಿಟ್ಟ ಹೆಜ್ಜೆ ಇಡಬಲ್ಲಳು. ಅಲ್ಲಿಯ ತನಕ ಆಕೆ "ಮಾರಿ ಮಸಣಿಯ ಭಕ್ತೆ". ಹೀಗೆ ಸ್ತ್ರೀಯ ಪರಿವರ್ತನೆ ಅಂತರಂಗ ಶುದ್ಧಿಯ ಸಂಕೇತಗಳು.

ಸಮಾಜ ಜೀವನ ದೃಷ್ಟಿಯಿಂದಲೂ ಗೃಹ-ಸಮಾಜ, ವ್ಯಕ್ತಿ-ಸಮುದಾಯ ಗಳಲ್ಲಿ ಬದಲಾವಣೆ ಅವಶ್ಯಕ. ವ್ಯಕ್ತಿ ಜೀವನ ಶುದ್ಧವಾಗಿ ಸಮಾಜ ಜೀವನ ಕೆಟ್ಟರೂ ಅಸಂಬದ್ಧ. ಸಮಾಜ ಜೀವನವಂತೂ ವ್ಯಕ್ತಿಜೀವನ ಪತಿತವಾದಾಗ ಅಸಾಧ್ಯ. ಅಧ್ಯಾತ್ಮ ದೃಷ್ಟಿಯಿಂದ ಅಂತರಂಗ ಶುದ್ಧಿ ಬಹಿರಂಗದ ಆಚಾರಕ್ಕಿಂತ ಮಹತ್ವ ಪೂರ್ಣವಾದುದು. ರಾಷ್ಟ್ರೀಯ ದೃಷ್ಟಿಯಿಂದ ನಾಡೆಂಬ ಮಡಿಕೆಗೆ ಎರಡು ಮುಖ. ಆರ್ಥಿಕ ಪ್ರಗತಿ ಹೊರಮುಖ, ನೈತಿಕ-ಅಧ್ಯಾತ್ಮಿಕ ಪ್ರಗತಿ ಒಳಮುಖ. ಹೆಂಡದ ಮಡಿಕೆ ಒಳಗೆ ತೊಳೆಯದೆ ಹೊರಗೆ ತೊಳೆವುದು ಎಷ್ಟು ಹಾಸ್ಯಾಸ್ಪದವೋ ಹಾಗೇ ನೀತಿವಂತ, ಅಧ್ಯಾತ್ಮ ಸಹಿತ ದೃಷ್ಟಿಕೋನ ಬೆಳೆಸದೆ ಕೇವಲ ಭೌತಿಕ ಪ್ರಗತಿ ಸಾಧಿಸುವುದು. ಇಂಥ ಮರುಳ್ಗಾಡ ಮನೆ ಯಾವಾಗ ಬೇಕಾದರೂ ಕುಸಿಯಬಹುದು. ಅರಿಸ್ಟಾಟಲ್ ಹೇಳುವ ಮಾತು ಇಲ್ಲಿ ಚೆನ್ನಾಗಿ ಅನ್ವಯಿಸುತ್ತದೆ· "ಒಳ್ಳೆಯ ಕಾಯಿದೆ ಗಳಿರುವುದು ಮುಖ್ಯವಲ್ಲ ಒಳ್ಳೆಯ ಜನರಿರುವುದು ಮುಖ್ಯ."

ಒಂದು ದೇಶದ ಭೌತಿಕ ಸಂಪತ್ತನ್ನು ಬೆಳೆಸುವುದಕ್ಕಿಂತ ಆಂತರಂಗಿಕ ಸಂಪತ್ತಾದ ವೀರ್ಯವಂತ ಜನಾಂಗವನ್ನು ನಿರ್ಮಿಸುವುದು ಅವಶ್ಯಕ. ಆಗ ವ್ಯಕ್ತಿ, ಸಮಾಜ ರಾಷ್ಟ್ರಗಳ ಜೀವನ ಇಬ್ಜೋಡಾಗದೆ ಸಮರಸವಾಗಿ ಸಾಗುವದು.

ಶುಷ್ಕಾಚಾರ

೫. ಹುತ್ತವ ಬಡಿದೊಡೆ ಹಾವು ಸಾಯಬಲ್ಲದೆ, ಅಯ್ಯಾ ?
ಅಘೋರ ತಪವ ಮಾಡಿದೊಡೇನು ?
ಅಂತರಂಗ—ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ
ಕೂಡಲ ಸಂಗಮದೇವ !

ಹುತ್ತವನ್ನು ಬಡಿದು ಅದರ ಮೂಲೆಯಲ್ಲೆಲ್ಲೋ ಹುದುಗಿಕೊಂಡಿರುವ ಹಾವನ್ನು ಸಾಯಿಸಲು ಸಾಧ್ಯವೆ ? ಹಾಗೆ ನಿರಾಹಾರ, ಒಂಟಿಕಾಲ ಮೇಲೆ ತಪಸ್ಸು, ಕಠಿಣ ದೇಹಪರಿಶ್ರಮ ಮುಂತಾದುವನ್ನು ಮಾಡಿ, ಅಂತಃಕರಣ ಶುದ್ಧಿ, ಆತ್ಮೋದ್ದೀಪನೆ ಮಾಡಿಕೊಳ್ಳದಿದ್ದರೆ ಪರಮಾತ್ಮನು ಒಲಿಯುವುದು ಸಾಧ್ಯವೆ ?

ವ್ಯಾಖ್ಯೆ : ಮೂಢ ಭಕ್ತನೋರ್ವ ಹೆಂಡದ ಮಡಿಕೆಯ ಹೊರಗೆ ತೊಳೆವ

ವ್ಯರ್ಥ ಪರಿಶ್ರಮದಲ್ಲೇ ಕಾಲಕಳೆವಂತೆ, ಸರಿಯಾದ ದೈವೀಜ್ಞಾನವಿಲ್ಲದ ಸಾಧಕ ಇನ್ನೊಂದು ಬಗೆಯ ವ್ಯರ್ಥ ಪರಿಶ್ರಮಕ್ಕೆ ತೊಡಗುವನು. ಅದು ಪಂಚಾಗ್ನಿ ತಪ, ನಿರಾಹಾರ, ಗೆಡ್ಡೆ-ಗೆಣಸುಗಳ ಮೇಲೆ ಕಾಲಯಾಪನೆ, ನಿದ್ರಾವಿರಹಿತಸ್ಥಿತಿ ಮುಂತಾದ್ದರಲ್ಲಿ ನಿರತನಾಗುವನು. ದೇವನು ಅತಿಮುಖ್ಯ ಅಂಶವನ್ನಾಗಿ ಅಂತರಂಗ ಶುದ್ಧಿಯನ್ನು ನೋಡುವನೇ ವಿನಾ ಬಹಿರಂಗಿಕ ಶಾರೀರಿಕ ವ್ಯಾಯಾಮವನ್ನಲ್ಲ. ಶಾರೀರಿಕ ವೃತ್ತಿ ಗಳು ಸಾತ್ವಿಕ ಪಥದಲ್ಲಿ ಕೆಲವೊಮ್ಮೆ ಕರೆದೊಯ್ದರೂ, ಮನಸ್ಸಿನ ಭಾವನೆಗಳು, ಕಲ್ಪನೆಗಳು ಸುಪ್ತಚೇತನದಲ್ಲಿ ಹರಿದಾಡುತ್ತಿರುತ್ತವೆ. ಅವು ಹುತ್ತದ ಅಂತರಾಳ ದಲ್ಲೆಲ್ಲೋ ಹುದುಗಿರುವ ಹಾವಿನಂತೆ, ಮನದಲ್ಲಿ ಅಡಗಿಕೊಂಡಿದ್ದು ಯಾವಾಗ ಲೊಮ್ಮೆ ಅವಕಾಶ ಸಿಕ್ಕಾಗ ಹೆಡೆ ಬಿಚ್ಚುವವು. ಆದ್ದರಿಂದ ಅವನ್ನು ಶುದ್ಧೀಕರಿಸಿ ದಾಗ ದೇವನೊಲಿವನು. ಹುತ್ತ ಕೆದಕಿ ಹಾವನ್ನು ಬಡಿವಂತೆ, ಅಂತರಾವಲೋಕನ ಮಾಡಿಕೊಂಡು ಕಲ್ಮಶವನ್ನು ತೊಡೆಯಬೇಕು.

ಆಮಿಷದ ಜಾಲ

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು.
ಕೊಂದಹರೆಂಬುದನರಿಯದೆ
ಬೆಂದವೊಡಲ ಹೊರೆಯ ಹೋಯಿತ್ತಲ್ಲದೆ !
ಅಂದಂದೆ ಹುಟ್ಟಿತ್ತು ಅಂದಂದೆ ಹೊಂದಿತ್ತು
ಕೊಂದವರುಳಿದರೇ, ಕೂಡಲ ಸಂಗಮದೇವಾ ?

ಅರ್ಥ : ಬಲಿಗೊಡಲು ಹರಸಿಕೊಂಡು, ಕುರಿಯನ್ನು ಕೊಂಡು, ಓರ್ವನು ಕರೆದೊಯ್ಯುವನು. ಅದನ್ನು ಸುಲಭವಾಗಿ ಕರೆದೊಯ್ಯಲು ಒಂದು ಆಮಿಷವನ್ನು ಒಡ್ಡುವನು. ಹಸಿರನ್ನು ಹೊತ್ತು ಹೊರಟರೆ ಕೆಲವೇ ಕ್ಷಣಗಳಲ್ಲಿ ಬಲಿಯಾಗಲಿರುವ ಕುರಿ ಆ ಹಸಿರನ್ನು ಜಗ್ಗಿ ಜಗ್ಗಿ ತಿನ್ನುತ್ತ ತಾನಾಗಿ ಮುಂದೆ ಸಾಗುವುದು. ಸಾವು ಕೆಲವೇ ಕ್ಷಣಗಳಲ್ಲಿ ಬರುವುದು ಎಂಬುದನ್ನರಿಯದೆ ದೇಹದ ತೃಪ್ತಿಯನ್ನಷ್ಟೇ ಮಾಡಿ ಕೊಳ್ಳುವುದರಲ್ಲಿ ಆಸಕ್ತವಾಗುವುದು. ಉದಿಸಿದ ಆಸೆಗಳನ್ನು ಆ ತಕ್ಷಣ ತೃಪ್ತಿ ಮಾಡಿ ಕೊಳ್ಳಲು ಬಯಸುವದು. ಅದು ಬಲಿಯಾಗುವುದು ನಿಜ, ಆದರೆ ಅದನ್ನು ಆಮಿಷ ಕ್ಕೀಡುಮಾಡಿ ಕೊಲ್ಲಿಸಿದವರು ಉಳಿವರೇನು ?

ವ್ಯಾಖ್ಯೆ : ಬಸವಣ್ಣನವರು ಇಲ್ಲಿ ಯಜ್ಞಯಾಗ ವಿರೋಧ, ಅಥವಾ ಉಗ್ರ ದೇವತೆಗೆ ಬಲಿಗೊಡುವ ಸಂಪ್ರದಾಯವನ್ನು ಖಂಡಿಸುವುದಕ್ಕಿಂತ ಹೆಚ್ಚಾಗಿ ಕುರಿಯ

ಅಜ್ಞಾನಕ್ಕೆ. ಬಲಿಗೊಡುವವನ ಧೂರ್ತತೆಗೆ ಮುಸಿನಗುತ್ತ ವಿಷಾದ ವ್ಯಕ್ತಪಡಿಸುತ್ತಿದ್ದಾರೆ. ಈ ವಚನದಲ್ಲಿ ಸಮಾಜ ವ್ಯವಸ್ಥೆಯನ್ನು ವಿಡಂಬಿಸುತ್ತಿದ್ದಾರೆ. ಓರ್ವನು ಬಲಿಗೊಡಲು ಹರಸಿಕೊಂಡೇ ಕುರಿಯನ್ನು ಕೊಳ್ಳುವಂತೆ, ಕೆಲವು ಧೂರ್ತರು ಮುಗ್ಧರನ್ನು ವಂಚನೆಯ ಜಾಲಕ್ಕೆ ಸಿಕ್ಕಿಸಲು ಪ್ರಯತ್ನಿಸುತ್ತಿರುತ್ತಾರೆ. ಪ್ರಾಮಾಣಿಕ ಅಧಿಕಾರಿಯೋ ವ್ಯಾಪಾರಿಯೋ ಇದ್ದಾನೆಂದಿಟ್ಟುಕೊಳ್ಳೋಣ. ಅವನನ್ನು ಅಡ್ಡದಾರಿ ಗಿಳಿಸಬಯಸಿ ಆಮಿಷ ತೋರುತ್ತಾರೆ_ ಕುರಿಯ ಮುಂದೆ ಹಸಿರನ್ನು ಹಿಡಿದಂತೆ, "ನೀನು ಹರಿಶ್ಚಂದ್ರನ ಮೊಮ್ಮಗನಾದರೆ, ಬಾಳಲು ಸಾಧ್ಯವೆ? ಈ ನೇರದಾರಿ ಬಿಟ್ಟು ಸ್ವಲ್ಪ ಅಡ್ಡದಾರಿಯಲ್ಲಿ ನಡೆ ಎಷ್ಟು ಬೇಗ ಶ್ರೀಮಂತನಾಗುವೆ ನೋಡು. ಆಗ ನಾಲ್ಕು ಮಂದಿಗೆ ಬೇಕಾದವನಾಗಿ ಉಪಕಾರ ಮಾಡುತ್ತ ಬಾಳಬಹುದಷ್ಟೇ. ನಿನ್ನ ಹೆಂಡತಿ–ಮಕ್ಕಳು ಸುಖಸರಸಿಯಲ್ಲಿ ಲೋಲಾಡುವರು ..." ಇತ್ಯಾದಿ ಆಮಿಷದ ಮಾತುಗಳನ್ನಾಡಿ ಈ ಪ್ರಾಮಾಣಿಕ 'ಕುರಿ'ಯನ್ನು ಮುಂದೆ ಸಾಗಿಸುವರು, ಅನಾಯಾಸವಾಗಿ. ಸಾವು ಸನಿಹದಲ್ಲಿದೆ ಎಂಬರಿವಿಲ್ಲದೆ ಕುರಿ ಎಲೆ ಮೆಲ್ಲುವುದರಲ್ಲೇ ಆಸಕ್ತವಾದಂತೆ, ಬಾಳಿನ ನಶ್ವರತೆಯನ್ನು, ಸಾವಿನ ಸಾಮೀಪ್ಯವನ್ನು, ಪಾಪದ ಕತ್ತಿ ತಲೆ ಮೇಲೆ ತೂಗಾಡುವುದನ್ನೂ ಅರಿಯದ ಮೂಢನು ವಾಮಪಥದಲ್ಲಿ ಸ್ವಯಂಪ್ರೇರಿತನಾಗಿ ಸಾಗತೊಡಗುವನು. ಮೊದಲು ಹಿಂಜರಿಯುತ್ತಿದ್ದವನು ಈಗ ನಿರಾಳವಾಗಿ ದಾರಿ ತುಳಿಯುವನು; ಆಸೆಯಿಂದ ಬೇವ ಒಡಲಿನ ತೃಪ್ತಿಯನ್ನೇ ಏಕೈಕ ಗುರಿಯಾಗಿಸಿಕೊಳ್ಳುವನು. ಹುಟ್ಟುವ ಆಸೆಗಳನ್ನೆಲ್ಲ ಅಂದಂದೇ ತೃಪ್ತಿಮಾಡಿಕೊಳ್ಳಲಿಚ್ಛಿಸುವನು. ಕಡೆಗೆ ಪಾಪಕ್ಕೆ ಆಹುತಿಯಾಗುವನು. ಅವನಷ್ಟೇ ಪತನಗೊಳ್ಳನು, ಅವನನ್ನು ಪ್ರಚೋದಿಸಿದ ಧೂರ್ತನಿಗೂ ಆ ಗತಿ ಬಂದೇ ತೀರುವುದು. ಆದ್ದರಿಂದ ಕೆಟ್ಟದು ಮಾಡಿದವನಿಗೆ ಅರ್ಧಪಾಲು ಮಾಡಿಸಿದವನಿಗೂ ಅರ್ಧವಾದ ಕಾರಣ ಮಾಡದಿರುವುದು ಒಳ್ಳಿತು. ಒಳ್ಳೆಯದನ್ನು ಮಾಡಿದವನಿಗೆ ಅರ್ಧಪುಣ್ಯ, ಮಾಡಿಸಿದವನಿಗೂ ಅರ್ಧಪುಣ್ಯವಾದ ಕಾರಣ ಮಾಡುವುದು, ಮಾಡಲು ಪ್ರೇರೇಪಿಸುವುದು ಅತ್ಯುತ್ತಮ,

ಸಿರಿಯೊಂದು ಗರ

ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು, ನೋಡಯ್ಯಾ!
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರು, ಕೂಡಲ ಸಂಗಮದೇವಾ.

ಘೋರಸರ್ಪ ಕಡಿದವರನ್ನು ಮಂತ್ರ ಹಾಕಿಯೋ, ಮದ್ದಿತ್ತೋ ಮಾತಾಡಿಸ

ಬಹುದು. ದೆವ್ವ ಹಿಡಿದವರನ್ನೂ ಮಂತ್ರಮಾಡಿ ಮಾತಾಡಿಸಬಹುದು. ಆದರೆ ಸಿರಿವಂತಿಕೆಯ ದೆವ್ವ ಹಿಡಿದವರನ್ನು ಮಾತನಾಡಿಸುವುದು ತುಂಬಾ ಕಷ್ಟಕರ. ಕೇವಲ ಬಡತನವೆಂಬ ಮಂತ್ರವಾದಿ ತನ್ನ ಕಾರ್ಯವನ್ನಾರಂಭಿಸಿದಾಗ ಮಾತ್ರ ಅವರು ಸರಿಯಾಗಿ ಮಾತನಾಡುವರು.

ವ್ಯಾಖ್ಯೆ : ಉಳ್ಳವರು, ಇಲ್ಲದವರು ಎಂಬ ಅಸಮತೆ, ಅಂತರವೇ ಮಾನವ ಸಮಾಜದ ವೈಪರೀತ್ಯಗಳ ಮೂಲ ಹೇತು. ಉಳ್ಳವರು ಎಂಬುದು ಹಣಕ್ಕೆ, ಬುದ್ಧಿಗೆ, ವಿದ್ಯೆಗೆ, ಬಲಕ್ಕೆ ಅಧಿಕಾರ–ಈ ಎಲ್ಲಕ್ಕೂ ಅನ್ವಯಿಸಬಹುದು. ಮುಖ್ಯವಾಗಿ ಧನವುಳ್ಳವರು ಇಲ್ಲದವರನ್ನು ಕಂಡು ಅಥವಾ ಇತರರನ್ನು ಕಂಡು ಹೇಗೆ ವರ್ತಿಸುವರು ? ಅಹಂಕಾರದಿಂದ ಬೀಗಿ ತಮ್ಮ ಸಮಾನರಾರೂ ಇಲ್ಲವೆಂದೇ ವರ್ತಿಸುವರು. ಹಾವು ಕಡಿದವರು ಎಚ್ಚರ ತಪ್ಪಿರುವರು. ಅಂಥವರನ್ನೂ ಹೇಗಾದರೂ ಮಾತನಾಡಿಸಬಹುದು. ದೆವ್ವ ಹಿಡಿದವರು ಅಥವಾ ಷಾಕ್ ಆದವರು ಚೀರಾಡುತ್ತಲೋ, ಸ್ತಂಭೀಭೂತರಾಗಿಯೋ ಇರಬಹುದು. ಅವರನ್ನು ಒಂದಲ್ಲ ಒಂದು ಬಗೆಯಿಂದ ನುಡಿಸಬಹುದು. ಸಿರಿವಂತಿಕೆಯ ಬಿಗುಮಾನದ ಭೂತ ಬಡಿದವರನ್ನು ನುಡಿಸುವುದು ದುಃಸಾಹಸದ ಮಾತು. ಅವರ ಉನ್ಮತ್ತತೆಗೆ ಓರ್ವನೇ ಮಂತ್ರವಾದಿ, ಬಡತನ. ಬಡತನದ ಮಂತ್ರವಾದಿ ಕಷ್ಟಕಾರ್ಪಣ್ಯಗಳ ಮಾಯಾದಂಡವನ್ನಾಡಿಸುತ್ತಲೇ ಸಿರಿವಂತರ ಉನ್ಮತ್ತತೇ ಉರಿಗೊಡ್ಡಿದ ಅರಗಿನಂತೆ ಕರಗಿ ಮಾತನಾಡುವರು.

ಮುಪ್ಪಿಂದೊಪ್ಪವಳಿಯದ ಮುನ್ನ

ನೆರೆ ಕೆನ್ನೆಗೆ, ತೆರೆ ಗಲ್ಲಕೆ ಶರೀರ ಗೂಡುವೋಗದ ಮುನ್ನ
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ
ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ
ಮುಪ್ಪಿಂದೊಪ್ಪವಳಿಯದ ಮುನ್ನ ಮೃತ್ಯು ಮುಟ್ಟದ ಮುನ್ನ
ಪೂಜಿಸು ನಮ್ಮ ಕೂಡಲ ಸಂಗಮ ದೇವನ.

ವ್ಯಾಖ್ಯೆ : ಈ ವಚನದಲ್ಲಿ ಮುಪ್ಪಿನ ಚಿತ್ರ ಸೊಗಸಾಗಿ ಬಂದಿದೆ. ಮಧ್ಯಮ ವಯಸ್ಸು ಕಳೆದು ವಾರ್ಧಿಕ್ಯ ಅಡರುತ್ತಿದ್ದಂತೆಯೇ ಗಡ್ಡದಲ್ಲಿ ಬಿಳಿ ಕೂದಲು ಸುಳಿಯತೊಡಗುತ್ತವೆ; ಗಲ್ಲವು ತೆರೆತೆರೆಯಾಗಿ ಇಳಿಯಲಾರಂಭಿಸುತ್ತದೆ, ಶರೀರ ಒಂದು ಗೂಡಿನಂತಾಗುತ್ತದೆ. ಮುಪ್ಪೆಂಬ ಕಳ್ಳನು ದೇಹದ ಸತ್ವವೆಂಬ ಸಂಪತ್ತನ್ನು ಲೂಟಿ ಮಾಡಿಬಿಡುವನು. ದರೋಡೆ ಮಾಡಿದ ಮನೆಯ ಬಾಗಿಲನ್ನು ಹಾರೊಡೆದು ಹೋಗುವಂತೆ ಬೊಚ್ಚು ಬಾಯಿಯನ್ನು ಮಾಡಿ ಹೋಗುವದು. ಮುಖ್ಯ ಪೀಠೋಪಕರಣ,

ಬೆಲೆಬಾಳುವ ಸಾಮಾನು ಹೋಗಿ ಮನೆ ಬರಿದಾಗಿ ಕಾಣುವಂತೆ ಹಲ್ಲಿಲ್ಲದ ಬೊಚ್ಚು ಬಾಯಿಯು ಲಕ್ಷಣ ತೋರುವನ ವಯಸ್ಸೆಂಬ ಮೂಟೆ ಹೇರಲ್ಪಟ್ಟಂತೆಲ್ಲ ಬೆನ್ನು ಬಾಗಲಾರಂಭಿಸುವುದು. ಈಗ ಅನ್ಯರ ಮೇಲೆ ಅವಲಂಬಿತನಾಗಿ ಹಂಗಾಗತೊಡಗುವನು. ಅವನು ಮೇಲೇಳುವಾಗ ಕಾಲಿನ ಅವಲಂಬನೆ, ಎದ್ದು ನಿಂತು ಮುನ್ನಡೆವಾಗ ಕೋಲಿನ ಅವಲಂಬನೆ. ತಾರುಣ್ಯದ ಒಪ್ಪವೆಲ್ಲ ಲೂಟಿಯಾಗಿ ಹೋಗಿ ಕುರೂಪ ಆವರಿಸಿಕೊಳ್ಳತೊಡಗುತ್ತದೆ. ಮುಪ್ಪಿನ ನೆರಳಾದ ಸಾವು ಸಮೀಪಿಸಲಾರಂಭಿಸುತ್ತದೆ. ಇವೆಲ್ಲ ಆಕ್ರಮಣ ಮಾಡಿ, ನಿಸ್ಸಹಾಯಕತೆಯ ವಶದಲ್ಲಿ ಬಂಧಿಯಾಗುವ ಮುನ್ನವೇ ಮೈಯಲ್ಲಿ ನೆಣವಿದ್ದಾಗ, ಮನವು ದೃಢವಿದ್ದಾಗ ದೇವನನ್ನು ಪೂಜಿಸಿ ಜೀವನದ ಸಾರ್ಥಕ್ಯ ಸಾಧಿಸಬೇಕು.

ಮಾಡಿ ನೀಡಿ ಲಿಂಗವ ಪೂಜಿಸಿಹೆನೆಂಬವರೂ ನೀವೆಲ್ಲ ಕೇಳಿರಣ್ಣ
ಹಾಗದ ಕೆರಹ ಹೊರಗೆ ಕಳೆದು
ದೇಗುಲಕ್ಕೆ ಹೋಗಿ ದೇವರಿಗೆ ನಮಸ್ಕಾರವ ಮಾಡುವನಂತೆ
ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ !
ಧನವ ನಿರಿಸದಿರಾ, ಇರಿಸಿದರೆ ಭವ ಬಪ್ಪುದು ತಪ್ಪದು !
ಕೂಡಲ ಸಂಗನ ಶರಣರಿಗೆ ಸವೆಸಲೇಬೇಕು.

ಅರ್ಥ : ಕೆಲವರು ಆಡಂಬರ ಮಾಡಿ, ದಾನ ನೀಡಿ ದೇವರನ್ನೊಲಿಸಲು ಯತ್ನಿಸುವರು. ಇವರ ಭಕ್ತಿ ಹೇಗೆಂದರೆ, ನಾಲ್ಕು ಕಾಸು ಬೆಲೆಬಾಳುವ ಮೆಟ್ಟುಗಳನ್ನು ಹಾಕಿಕೊಂಡು ಹೋಗಿ ದೇವಾಲಯದ ಹೊರಗೆ ಬಿಟ್ಟು, ಒಳಗೆ ದೇವರ ದರ್ಶನಕ್ಕೆ ಹೋದಾಗಲೂ ಅದರದೆ ಚಿಂತೆ ಮಾಡುವವರಂತೆ. ನಿಜವಾದ ಜಾಣನಾದರೆ ಅವನ್ನು ಮನೆಯಲ್ಲೇ ಬಿಟ್ಟುಹೋಗಿ, ನಿಶ್ಚಿಂತ ಮನದಿಂದ ದೇವನ ಧ್ಯಾನ ಮಾಡಬೇಕು. ಅಥವಾ ಶ್ರೇಷ್ಠ ಸದ್ಭಕ್ತನಾದರೆ ಅವುಗಳ ಚಿಂತೆ ತೊರೆದು ಧ್ಯಾನಾಸಕ್ತನಾಗಬೇಕು. ಹೋದರೆ ಹೋಗಲಿ, ಇದ್ದರೆ ಇರಲಿ. ಹೋದರೆ ಆ ದೇವನಿಗೆ ಅರ್ಪಿತ, ಇದ್ದರೆ ಈ ದೇವನಿಗೆ ಅರ್ಪಿತ ಎಂಬ ನಿರ್ಲಿಪ್ತ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಹಾಗೆ ಮಾಡದೆ ಅದೂ ಇಲ್ಲದೆ ಇದೂ ಇಲ್ಲದೆ ಹೊಯ್ದಾಡುವ ಈ ಇಮ್ಮನದ ಭಕ್ತಿ ನಿಷ್ಪ್ರಯೋಜಕ.

ಅದೇ ರೀತಿ ಕೆಲವರು ಮೌಢ್ಯತೆಯಿಂದ ಭಕ್ತಿ ಮಾಡುವರು; ಆಢ್ಯತೆಗಾಗಿ ನೀಡುವರು. ಯಾರೋ ಮನೆಯಲ್ಲಿ ಸತ್ಯನಾರಾಯಣ ವ್ರತವೋ, ವರದಾ ಶಂಕರ ವ್ರತವೋ ಮಾಡಿ ಅವರು ಕೀರ್ತಿಶಾಲಿಗಳಾಗೋದೆ ತಡ, ಅದರಲ್ಲಿ ಶ್ರದ್ಧೆ ಇರಲಿ ಬಿಡಲಿ ಇವರು ಅವರಿಗಿಂತ ಹಿಂದೆ ಬೀಳಬಾರದೆಂದು ವ್ರತ ಮಾಡುವರು. ನಾಲ್ಕು

ಜನ ಹೊಗಳಲೆಂದು ಅನ್ನ ನೀಡುವರು. ತನ್ನ ವೈಭವವನ್ನು ಅನ್ಯರ ಮುಂದೆ ಪ್ರದರ್ಶಿಸಲಿಕ್ಕೆ, ಕೀರ್ತಿವಾರ್ತೆಗಾಗಿ ದಾನಧರ್ಮದಲ್ಲಿ ತೊಡಗುವರು. ಅಗ್ಗದ ಕೆರಹಿನ ಮೇಲೆ ಅಳಿಮನದ ಭಕ್ತನ ಚಿತ್ತ ನಿಂತಂತೆ, ಈ ಆಡಂಬರದ ಭಕ್ತರ ಚಿತ್ತವೆಲ್ಲ ಕೀರ್ತಿವಾರ್ತೆ, ಪ್ರದರ್ಶನದ ಕಡೆಗೆ !

ಹಾಗಾದರೆ ಯಾವ ಭಾವನೆಯಿಂದ ಸತ್ಕಾರ್ಯ ಮಾಡಬೇಕು? ದಾಸೋಹ ಭಾವದಿಂದ. ದಾನ ಪದ್ಧತಿಯನ್ನು ಬಸವಣ್ಣನವರು ವಿರೋಧಿಸಿ ದಾಸೋಹ ಪದ್ಧತಿ ಪ್ರೋತ್ಸಾಹಿಸಿದರು. ಇವೆರಡರಲ್ಲಿ ವ್ಯತ್ಯಾಸವಿದೆ,

1. ದಾನ ನೀಡುವಾಗ ಕೊಡುವವ ಶ್ರೇಷ್ಠ, ಪಡೆಯುವವ ಕನಿಷ್ಠ ಎಂಬ ಭಾವವಿದೆ. ದಾಸೋಹದಲ್ಲಿ ಪಡೆಯುವವನೇ ಶ್ರೇಷ್ಠ. ಏಕೆಂದರೆ ಅವನು ಒಳ್ಳೆಯ ಕಾರ್ಯಕ್ಕೆ ಅವಕಾಶವನ್ನೇ ಕಲ್ಪಿಸಿಕೊಡದಿದ್ದರೆ ಇವನು ಯಾರಿಗೆ ನೀಡುತ್ತಿದ್ದ.

2. ದಾನದಲ್ಲಿ ಪಡೆಯುವವ ಭಿಕ್ಷುಕ, ದಾಸೋಹದಲ್ಲಿ ಪಡೆಯುವವ ಜಂಗಮ "ಜಂಗಮ"-ಜಾತಿವಾಚಕವಾಗಿ ಅಲ್ಲ. ಜಾತಿಯಿಂದ ಜಂಗಮನೆಂದು ತನ್ನ ಹೆಂಡತಿ ಮಕ್ಕಳ ಸಂರಕ್ಷಣೆಗಾಗಿ ಬೇಡಿದರೆ ಅವನೂ ಯಾಚಕನೇ ! ಇಲ್ಲಿ ಜಂಗಮನೆಂದರೆ ತ್ಯಾಗಿ, ನಿರಾಭಾರಿ, ಲೋಕ ಸೇವೆಗಾಗಿ ಟೊಂಕಕಟ್ಟಿ ನಿಂತವ. ಗಾಂಧೀಜಿ. ವಿವೇಕಾನಂದ, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಇವರು ಜಂಗಮರು. ಸಮಾಜದ ಪ್ರತಿನಿಧಿಗಳು. ಆದ್ದರಿಂದ ದಾನವು ಓರ್ವ ವ್ಯಕ್ತಿಯ ಅಲ್ಪ ತೃಪ್ತಿಗೆ. ದಾಸೋಹವು ಸಮಾಜದ ಸೇವೆಗಾಗಿ ಓರ್ವ ವ್ಯಕ್ತಿಯ ಮುಖಾಂತರ ಮಾಡುವ ಸಲ್ಲಿಕೆ.

3. ದಾನದಲ್ಲಿ, 'ಅವಶ್ಯಕತೆ ಇದೆ: ಅವನು ಹಸಿದಿದ್ದಾನೆ, ಅನ್ನ ನೀಡಬೇಕು. ನಗ್ನನಾಗಿದ್ದಾನೆ ಬಟ್ಟೆ ಕೊಡಬೇಕು' ಎಂಬ ಭಾವವಿದೆ. ದಾಸೋಹದಲ್ಲಿ ಕರ್ತವ್ಯ ಪ್ರಜ್ಞೆ ಇದೆ 'ಈ ಮಹಾಂತನಿಗೆ ಸಲ್ಲಿಸಿದರೆ ಸಮಷ್ಟಿಗೆ ಅದು ಉಪಯುಕ್ತವಾಗುವುದು. ಆದ್ದರಿಂದ ನನ್ನ ಕರ್ತವ್ಯವಿದು ಮಾಡಬೇಕು' ಎಂಬ ಭಾವವಿದೆ.

4. ದಾನವು ಶ್ರೀಮಂತಷಾಹಿ ಪದ್ಧತಿಗೆ ಪ್ರೋತ್ಸಾಹವೀಯುತ್ತದೆ. ಕೊಡುವವ ದಾನಿಯಾಗಿ ಪಡೆಯುವವ ಯಾಚಕನಾಗಿ, ಈ ಅಂತರ ನಿರಂತರವಾಗಿ ಉಳಿದಲ್ಲಿ ಸಮಾಜವಾದವಿದೆ. ಶ್ರೀ ಸಾಮಾನ್ಯನ ಉದ್ಧಾರಕ್ಕಾಗಿ ಸೇವಾ ಕೈಂಕರ್ಯ ತೊಟ್ಟ ತ್ಯಾಗಿ ದಾಸೋಹಭಾವದ ಮೂಲಕ ನೀಡಿದಾಗ, ಅದು ಸಮಾಜ ನಿರ್ಮಾಣಕ್ಕೆ ವಿನಿಯೋಗವಾಗಿ, ಅರ್ಥ ಸಂಪತ್ತು ಹಂಚಿ ಹರಿಯುತ್ತದೆ. ಈ ದಾಸೋಹನಿಧಿ, ಆ 'ಜಂಗಮ'ನನ್ನು ಹೆಚ್ಚೆಚ್ಚು ಕಾರ್ಯನಿರತವಾಗಲು ಪ್ರೋತ್ಸಾಹಿಸುತ್ತದೆ.

ಹೀಗೆ ದಾಸೋಹವು ರಾಷ್ಟ್ರೀಯ ಸಂಪತ್ತನ್ನು ಸರಿಯಾಗಿ ವಿತರಣೆ ಮಾಡುವ ವಿಧಾನ. ಇದನ್ನು ಸೂಚಿಸಿ ಸಿರಿವಂತರಿಗೆ ಹೇಳುತ್ತಾರೆ : "ಧನವನಿರಿಸದಿರಾ, ಇರಿಸಿದರೆ ಭವ ಬಪ್ಪುದು ತಪ್ಪದು. ಕೂ.ಸಂ. ಶರಣರಿಗೆ ಒಡನೆಯೋ ಸವೆಸುವುದು",

"ಅರ್ಥವು ಸಮಾಜ ಸಂರಕ್ಷಣೆಯ ಪವಿತ್ರ ಸಾಧನ. ಅದನ್ನು ಒಂದೆಡೆ ಜಡವಾಗಿಟ್ಟು ಪಾಪ ಮಾಡಬೇಡ. ಇದು ಉಳ್ಳವರು-ಇಲ್ಲದವರು ಎಂಬ ಅಸಮಾನತೆಗೆ ಕಾರಣವಾಗುವುದು. ಯಾರು ಬಹುಬಾಹುಗಳಿಂದ ಲೋಕ ಕಲ್ಯಾಣ ಮಾಡಲು ಸಿದ್ಧರಾಗಿರುವರೋ ಅವರಿಗಾಗಿ ಸವೆಸು. ಅದು ಸಮಾಜದ ಉತ್ಥಾನಕ್ಕೆ ಶೀಘ್ರವಾಗಿ ಸಹಾಯಕವಾಗುವುದು.

ಇಲ್ಲಿ ಸವಿಸು ಮತ್ತು ಸವಸು ಎಂಬ ಎರಡು ಪ್ರಯೋಗಗಳಿವೆ. ಎರಡೂ ಸರಿ. ಶರಣರಿಗೆ ಅಂದರೆ ತ್ಯಾಗಿಗಳಿಗೆ, ಸೇವಾಸನ್ನದ್ಧರಿಗೆ ಎಂದೂ, ಸಮಾಜದ ಅವಿಭಾಜ್ಯ ಅಂಗವಾದ ಮಾನವ ಸಮುದಾಯಕ್ಕೆಂದೂ ಅರ್ಥ ಮಾಡಬಹುದು. "ಸವಿಸು" ಎಂದರೆ ಸಲ್ಲಿಸೆಂದು ಅರ್ಥವಾದರೆ, ಸವೆಸು ಎಂದರೆ ಬಳಸು ಎಂದು ಅರ್ಥವಾಗಿ ಈ ದಾಸೋಹವು ನಿರಂತರವಾಗಿ ಸಾಗಲೇ ಬೇಕು ಎಂಬುದನ್ನು ಧ್ವನಿಸುತ್ತದೆ. ಕೆರೆಯಲ್ಲಿ ನೀರು ತುಂಬಿದಾಗ ಕೋಡಿ ಬಿಡಬೇಕು. ತೀರ ಹೆಚ್ಚಾದಾಗ ತೂಬು ಎತ್ತಬೇಕು. ಹಾಗೆ ಧನವು ಹೆಚ್ಚಾಗಿ ಬಂದಂತೆಲ್ಲ ತನ್ನ ಅವಶ್ಯವಿದ್ದಷ್ಟನ್ನು ಮಾತ್ರ ಇರಿಸಿಕೊಂಡು, ಹೆಚ್ಚಾದ್ದನ್ನು ನಿರಂತರವಾಗಿ ರಾಷ್ಟ್ರನಿರ್ಮಾಣಕ್ಕೆ ಸಲ್ಲಿಸಿಬಿಡಬೇಕು.

'ಏನಿ ಬಂದಿರಿ, ಹದುಳವಿದ್ದಿರೆ ?' ಎಂದರೆ
ನಿಮ್ಮ ಮೈಸಿರಿ ಹಾರಿಹೋಹುದೆ ?
'ಕುಳ್ಳಿರೆಂ'ದರೆ ನೆಲ ಕುಳಿಹೋಹುದೆ ?
ಒಡನೆ ನುಡಿದರೆ ಶಿರ-ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮ ದೇವನು ?

ಅರ್ಥ : "ಏನು ಬಂದಿರಿ, ಕ್ಷೇಮವಾಗಿರುವಿರಾ ?" ಎಂದು ಸೌಜನ್ಯದಿಂದ ಬಂದವರನ್ನು ಬರಮಾಡಿಕೊಂಡರೆ ದೇಹದ ಚೆಲುವು ಹಾರಿಹೋಗುತ್ತದೆಯೆ ? "ಕುಳಿತುಕೊಳ್ಳಿ" ಎಂದು ಆದರದಿಂದ ಆಸನ ನೀಡಿದರೆ ನೆಲ ತಗ್ಗಾಗುವುದೆ ? ತಕ್ಷಣ ಮಾತನಾಡಿದರೆ ತಲೆ-ಹೊಟ್ಟೆ ಬಿರಿದು ಹೋಳಾಗುವುದೆ ? ಆತಿಥ್ಯ ಮಾಡಲು, ಕೊಡಲು ಏನೂ ಇಲ್ಲದಿದ್ದರಷ್ಟೇ ಬಾಯಲ್ಲಿ ಒಂದು ಒಳ್ಳೆಯ ಮಾತು ಬೇಡವೆ ? ಇಷ್ಟು ಇಲ್ಲದಿದ್ದರೆ ದೇವನು ಶಿಕ್ಷಿಸದೆ ಬಿಟ್ಟಾನೆಯೆ ?.

ವ್ಯಾಖ್ಯೆ : ಈ ವಚನದಲ್ಲಿ ಸಾಮಾಜಿಕ ನೀತಿಗೆ ಸಂಬಂಧಿಸಿದ ನಡಾವಳಿಕೆ ಕಲಿಸುತ್ತಿದ್ದಾರೆ. ವರ್ಣ, ವರ್ಗ. ಜಾತಿ, ಅಂತಸ್ತುಗಳ ಭೇದ ತುಂಬಿ ತುಳುಕುವ ಈ ದೇಶದಲ್ಲಿ ತಮಗಿಂತ ಈ ಯಾವುದೇ ಕೆಳಗಿನ ಮಟ್ಟದವರು ಬಂದರೆ ತಕ್ಷಣ ಮಾತನಾಡದೆ, ಬರಮಾಡಿಕೊಳ್ಳದೆ ಆಢ್ಯತೆಯಿಂದ ಬೀಗಿ, ಬಹಳ ಹೊತ್ತು ಕಾಯಿಸಿ ನಂತರ ಠೀವಿ–ಬಿಗುಮಾನದಿಂದ ಕಣ್ಣೆತ್ತಿ ನೋಡಿ, 'ಏನಾಗಬೇಕಿತ್ತು' ? ಎಂದು ಠೇಂಕರಿಸುವ ಯಾರನ್ನೋ ಕಂಡು ಬಸವಣ್ಣನವರು ಈ ನಡೆಯನ್ನು ಕಲಿಸುತ್ತಿದ್ದಾರೆ. ಬಂದವರನ್ನು, ಆಗಮಿಸುತ್ತಲೇ ಮುಗುಳ್ನಕ್ಕು ಬರಮಾಡಿಕೊಂಡು "ಶರಣು, ಬನ್ನಿ, ಕ್ಷೇಮವಾಗಿದ್ದೀರಾ" ? ಎಂದು ನುಡಿದರೆ ಮೈಸಿರಿಯಾಗಲಿ, ಅಂದರೆ ಚೆಲುವಾಗಲೀ, ಮೈಮೇಲಿರುವ ಆಭರಣ ಸಂಪತ್ತಾಗಲಿ, ಅಥವಾ ಮನೆಯ ಐಸಿರಿಯಾಗಲಿ ಹಾರಿ ಹೋಗುವವೆ ? ಮನೆಯಲ್ಲಿ ವೈಭವ ಪೂರ್ಣ ಪೀಠೋಪಕರಣಗಳಿಲ್ಲದಿದ್ದರನಿತೇ ಹೋಗಲಿ ಚಾಪೆಯನ್ನಾದರೂ ಹಾಸಿ 'ಕುಳಿತುಕೊಳ್ಳಿ' ಎಂದರೆ ನೆಲ ತಗ್ಗಾಗುವುದೆ ? ಬಂದವರನ್ನು ತಕ್ಷಣದಲ್ಲೇ ಮಾತನಾಡಿಸಿದರೆ ಅಭಿಮಾನದ ಸಂಕೇತವಾದ ತಲೆಯಾಗಲಿ, ಶ್ರೀಮಂತಿಕೆಯ ಸಂಕೇತವಾದ ಹೊಟ್ಟೆಯಾಗಲಿ ಹೊಡೆಯುವುದೇ ? ಕೊಡಲಿಕ್ಕೆ ಏನೂ ಇಲ್ಲದಿದ್ದರಷ್ಟೇ, ಆಡಲಿಕ್ಕೆ ಒಂದು ಒಳ್ಳೆಯ ಮಾತೂ ಇಲ್ಲವೆ ? ಇಂಥ ಒಣ ಆಢ್ಯತೆ, ಹೆರರನ್ನು ತಿರಸ್ಕರಿಸುವ ಹಮ್ಮು ಇದ್ದವರಿಗೆ ದೇವರು ಶಿಕ್ಷಿಸದೆ ಬಿಡುವನೆ ? (ಸಶೇಷ)

ಬಸವ ಗಂಗೋತ್ರಿಯಲ್ಲಿ ಸೇವೆಗೈಯಲು ಕಾಯಕ ಯೋಗಿಗಳು ಬೇಕಾಗಿದ್ದಾರೆ

ಕೃಷಿ ಮತ್ತು ತೋಟಗಾರಿಕೆ : ಒಕ್ಕಲತನ (ಬೇಸಾಯ)ದಲ್ಲಿ ಆಸಕ್ತ, ಅನುಭವವಿರುವ ಮತ್ತು ದೇಹಪರಿಶ್ರಮ ಮಾಡುವ ಶಕ್ತಿ-ಶ್ರದ್ಧೆಯಿರುವ ಪ್ರಾಮಾಣಿಕ ಕೃಷಿ ಕಾರ್ಮಿಕರು ಬೇಕಾಗಿದ್ದಾರೆ.

ಹೈನುಗಾರಿಕೆ : ಆಕಳು (ಹಸು)ಗಳನ್ನು ಜೋಪಾನು ಮಾಡುವ ಹಾಲು ಕರೆಯುವ ಅನುಭವ-ಆಸಕ್ತಿ-ನಿಷ್ಠೆಗಳಿರುವ ಗೋವಳಿಗರು ಬೇಕಾಗಿದ್ದಾರೆ.

ಶ್ರದ್ಧೆಯಿಂದ ದೇಹ ಪರಿಶ್ರಮ ಮಾಡುವ ಕಾಯಕ ಜೀವಿಗಳಿಗೆ ಕೈತುಂಬ ಸಂಬಳ, ಹೊಟ್ಟೆತುಂಬ ಊಟ, ಪ್ರಶಾಂತವಾದ ವಸತಿ ಸೌಕರ್ಯಗಳನ್ನು ನೀಡುವ ಜತೆಗೆ ಪ್ರತಿ ನಿತ್ಯ ಪ್ರಾರ್ಥನೆ, ಪೂಜೆ, ಭಜನೆಗಳಿಗೆ ಅವಕಾಶವಿದೆ.'

ನಮ್ಮ ಸಂಸ್ಥೆಯ ಹಿತೈಷಿಗಳು ತಮಗೆ ಸರಿ ಕಂಡ ಕಾರ್ಮಿಕರನ್ನು ಶಿಫಾರಸು ಪತ್ರಕೊಟ್ಟು ಕಳಿಸಬೇಕಾಗಿ ವಿನಂತಿ.

ವ್ಯವಸ್ಥಾಪಕರು
ಬಸವ ಮಂಟಪ, ಬೆಂಗಳೂರು-10

ದೃಷ್ಟಾಂತ ಕಥೆ

ಉದಾರಿಯಾದವನಿಗೆ ದೇವನ ಕೊಡುಗೆ ಅಧಿಕ

—ತ್ರಿನೇತ್ರಿ

ಕೃಷ್ಣದೇವರಾಯನ ನೆಚ್ಚಿನ ಪ್ರಧಾನಿ ತಿಮ್ಮರಸ ಸದ್ಗುಣ ಸಂಪನ್ನ, ಉದಾರಿ. ಅವನ ವಿಶ್ವಾಸಕ್ಕೆ ಪಾತ್ರರಾದ ಇರ್ವರು ಊಳಿಗದವರಿದ್ದರು. ಇಬ್ಬರನ್ನೂ ಸಮಾನವಾಗಿ ನಡೆಸಿಕೊಳ್ಳುತ್ತಿದ್ದ ತಿಮ್ಮರಸ. ಅವರು ತತ್ವನಿಷ್ಠ, ಸತ್ಯಸಂಧರಾದ ಸೇವಕರಾಗಿದ್ದರು. ಪ್ರತಿವರ್ಷ ಇಪ್ಪತ್ತು ವರಹಗಳಂತೆ ಅವರ ಸಂಬಳವನ್ನು ಅಧಿಕ ಮಾಡುತ್ತಿದ್ದ.

ಒಂದು ವರ್ಷ ಸತ್ಯಪ್ಪನೆಂಬ ಸೇವಕನಿಗೆ ಯಥಾಪ್ರಕಾರ ೨೦ ವರಹಗಳನ್ನು ಅಧಿಕ ಮಾಡಿದ. ಶಾಂತಪ್ಪನೆಂಬ ಇನ್ನೋರ್ವನಿಗೆ ೪೦ ವರಹಗಳನ್ನು ಅಧಿಕಗೊಳಿಸಿದ. ವಿಶ್ವಾಸಿಕ ಸೇವಕ ಸತ್ಯಪ್ಪ ಸುಮ್ಮನೇ ಪಡೆದುಕೊಂಡ. ಶಾಂತಪ್ಪ ಮಾತ್ರ ಆಶ್ಚರ್ಯದಿಂದ ವಿಚಾರಿಸಿದ. "ಸ್ವಾಮಿ, ಇಬ್ಬರೂ ಸಮಾನ ವೃತ್ತಿಯವರು. ಇಬ್ಬರಿಗೂ ಒಂದೇ ರೀತಿ ವರ್ತಿಸುವಿರಿ. ಈ ಬಾರಿ ನನಗೇಕೆ ಜಾಸ್ತಿ...."

"ಶಾಂತಪ್ಪ, ನಿನ್ನೆ ಓರ್ವ ಭಿಕ್ಷುಕ ಸತ್ಯಪ್ಪನ ಮನೆಗೆ ಹೋದಾಗ ಅವನು ಹಸಿದವನಿಗೆ ತುತ್ತನ್ನವನ್ನೂ ಕೊಡದೆ ರಾತ್ರಿ ಹಾಗೇ ಕಳಿಸಿದ. ನೀನೋ ಅದೇ ಭಿಕ್ಷುಕ ಮನೆಗೆ ಬಂದಾಗ ಹೊಟ್ಟೆ ತುಂಬ ಊಟಕ್ಕಿಟ್ಟುದೇ ಅಲ್ಲದೆ ಅವನಿಗೆ ಬಟ್ಟೆ ಸಹ ಕೊಟ್ಟೆ. ಅವನಿಗೆ ಕೊಟ್ಟ ಸಂಬಳ ಅವನಿಗೆ ಅವನ ಹೆಂಡತಿ ಮಕ್ಕಳಿಗಷ್ಟೇ ಉಪಯುಕ್ತವಾದರೆ ನಿನಗೆ ಕೊಟ್ಟುದು ನಿನ್ನ ಪರಿವಾರಕ್ಕಷ್ಟೇ ಅಲ್ಲದೆ ಇನ್ನಿತರ ಬಡಬಗ್ಗರಿಗೆ ದೀನದಲಿತರಿಗೆ ಉಪಯೋಗವಾಗುತ್ತದೆ. ಆದ್ದರಿಂದ ಸತ್ಕಾರ್ಯ ಮಾಡುವ ನಿನಗೆ ಸಹಾಯಕವಾಗಲೆಂದು ಇಪ್ಪತ್ತುವರಹ ಜಾಸ್ತಿ ಕೊಟ್ಟೆ."

"ಭಿಕ್ಷುಕ ಬಂದು ಹೋದ ವಿಚಾರ ತಮಗೆ ಹೇಗೆ ತಿಳಿಯಿತು ಪ್ರಭು...,"

"ನಾನೇ ಭಿಕ್ಷುಕನಾಗಿ ಬಂದಿದ್ದೆ...." ತಿಮ್ಮರಸ ನುಡಿದ.

ಹಾಗೆಯೇ ಪ್ರಾಮಾಣಿಕ ಸತ್ಯಸಂಧ ಕರ್ತವ್ಯನಿಷ್ಠನಾದೋರ್ವ ಪರಹಿತ ಮಾಡದೆ ಬದುಕಿದರೆ ಅದು ಪರಿಮಿತ ಜೀವನ. ಕರ್ತವ್ಯನಿಷ್ಠೆ-ಪ್ರಾಮಾಣಿಕತೆಗಳೊಡನೆ ಪರಹಿತ ಔದಾರ್ಯ ಬಳಸಿಕೊಂಡರೆ ಅದು ವ್ಯಾಪಕ ಸೇವೆ. ಅಂಥವರಿಗೆ ಕೊಟ್ಟ ಧನ ಸತ್ಕಾರ್ಯಕ್ಕೆ ಸಲ್ಲುವುದೆಂದು ದೇವರು ಹೆಚ್ಚು ಹೆಚ್ಚು ಕೊಡುತ್ತಾನೆ. ★

ಬೋಳು ಬಸವನ ಬೊಂತೆ-೯

ಜೀವನ ದಾರಿದೀಪ

—ಪಿ. ಬಸವಣ್ಣ

ಆಸೆಯಾಮಿಷಗಳಿಗೆ ಹತ್ತಾರು ವರುಷಗಳ
ಮಾಸಗಟ್ಟಲೆ ವೃಥಾ ಪರನಿಂದೆಗೆ
ಹೇಸದಲೆ ಕಳೆವ ನೀ ಈಶನಂ ಧ್ಯಾನಿಸಲು
ಮೀಸಲಿಡು ಕೆಲನಿಮಿಷ—ಬೋಳುಬಸವ ॥ ೧ ॥

ಒಳಗೊಳಗೆ ನಡೆವ ರಣರಂಗಗಳ ತುಮುಲಗಳ
ತಳೆವ ಮದಕೋಪತಾಪತ್ರಯಗಳ
ಸುಳಿವ ಸುಂಟರಗಾಳಿ ಬಿರುಗಾಳಿಗಳ ಗೆಲ್ಲೆ
ಬಳಿಸೇರು ಗುರುವನ್ನು—ಬೋಳುಬಸವ ॥ ೨ ॥

ದಿನದಿನವು ಪರಜನರ ಬದುಕ ನೀ ಬೆದಕದಲೆ
ಮನಬಿಚ್ಚಿ ನೋಡು ನೀ ನಿನ್ನ ಬದುಕ
ಅನುನಯದಿ ದೋಷಗಳ ತಿದ್ದುತ್ತ ನಡೆದಾಗ
ಘನಪದವಿಯನು ಪಡೆವೆ—ಬೋಳುಬಸವ ॥ ೩ ॥

ಪರಬೊಮ್ಮ ಮಾಡಿಸುವ ನರಕುಲದ ನಾಟಕದಿ
ಧರಿಸುತಿಹ ಪಾತ್ರ ಹಿರಿದು ಕಿರಿದೇನು
ಸರಿಯೆಂದು ಸಹೃದಯರು ಮೆಚ್ಚುವಂದದಿ ನಟಿಸು
ಬರಿದೆ ಗೊಣಗದಿ ಮನದಿ—ಬೋಳುಬಸವ ॥ ೪ ॥

ಇಳೆಮಳೆಯ ಬೆಳೆಬಿತ್ತು ಹೊಲಮನೆಯ ಸಂಪತ್ತು
ಹೊಳೆತೊರೆಯು ಕಡಲೆಲ್ಲವವನ ಸೊತ್ತು
ತಿಳಿಯದೀ ಸತ್ಯವನು ನನ್ನ ಮನೆಮಠವೆಂದು
ಸುಳಿದು ಸುತ್ತುವೆಯೇಕೆ—ಬೋಳುಬಸವ ॥ ೫ ॥

ದಕ್ಷನ್ಯಾಯಾಧಿಪನೆ ಪಕ್ಷಪಾತವನೆಸಗೆ
ರಕ್ಷಕನೆ ಮರೆಹೊಕ್ಕವನ ಭಕ್ಷಿಸೆ
ಶಿಕ್ಷಕನೆ ಲಂಚಕ್ಕೆ ಕೈಯೊಡ್ಡಿ ಸೆರೆಗುಡಿಯೆ
ರಾಕ್ಷಸನ ಕೇಳ್ವುದೇಂ—ಬೋಳುಬಸವ ॥ ೬ ॥

ನಿನಗಿಂತಲಧಿಕರಂ ದ್ವೇಷಿಸದ ಗೌರವಿಸಿ
ನಿನಗೆ ಸಮವಾದವಗಸೂಯೆ ಪಡದೆ
ನಿನಗೆ ಕೀಳಾದವನುದಾಸೀನ ಗೈಯದೆಲೆ
ವಿನಯದಿಂ ನಡೆ ನೀನು—ಬೋಳುಬಸವ ॥ ೭ ॥

ಅತ್ತಿತ್ತ ಸುತ್ತುತ್ತ ಹೊತ್ತ ನೀ ಕಳೆಯದಿರು
ಹೊತ್ತು ಬೆಲೆಯುಳ್ಳದ್ದು ಮುತ್ತಿಗಿಂತ
ಮುತ್ತು ಕಳೆಕೊಂಡಾಗ ಹುಡುಕಲದು ಸಿಕ್ಕೀತು
ಹೊತ್ತು ಕಳೆದೊಡೆ ಸಿಗದು—ಬೋಳುಬಸವ ॥ ೮ ॥

ಇರಬೇಕು ಸಾಧಕಗೆ ಸುವಿಚಾರವಾಚಾರ
ಬರಡೆಂದು ಬಿಡಲಾಗದಾಚಾರವ
ಹೊಂಡೆ ಭತ್ತದಿ ಮೊಳಕೆ ಹೊಟ್ಟು ತಾನಿರಬೇಕು
ಬರಿಯಕ್ಕಿ ಮೊಳೆಯುವುದೆ—ಬೋಳುಬಸವ ॥ ೯ ॥

ಬರಿಧೈರ್ಯ ಬಾಹುಬಲ ಮೇಣ್ಮೇರುಸಾಹಸವು
ತರಲಾರವೈ ಜಯುವ ಮನುಜ ನಿನಗೆ
ನೆರವೀಯದಿರೆ ಪೂರ್ವಸುಕೃತ ಮೇಣ್ದೈವಬಲ
ದೊರೆಯಲಾಗದು ಸಿದ್ಧಿ —ಬೋಳುಬಸವ ॥ ೧೦ ॥

ತಾನಾವ ಧರ್ಮಕ್ಕೆ ತನುಮನಧನಂಗಳನು
ಸಾಸುರಾಗದೊಳೀಯೆ ಸಿದ್ಧನಿರ್ಪ
ಮಾನವಾಗ್ರಣಿಯನ್ನು ಎಡೆಬಿಡದೆ ಪೊರೆವುದೈ
ಕ್ಷೋಣಿಯೊಳಗಾಧರ್ಮ—ಬೋಳುಬಸವ ॥ ೧೧ ॥

ನೆರವಾಗು ಅನ್ಯರಿಗೆ ನಿನ್ನ ಕೈಲಾದಷ್ಟು
ಹರುಷಪಡು ನೀಗವರು ಹರುಷದಾಳೆ
ಪರಜನರ ಕಣ್ಣೀರು ಹರಿಯುವುದು ನಿಂತಾಗ
ಸುರಿಸಯ್ಯ ಸುಖಬಾಷ್ಪ—ಬೋಳುಬಸವ ॥ ೧೨ ॥

★ ★

ಬಸವ ಗಂಗೋತ್ರಿ

ಅತಿ ಮಾನಸಾವತರಣದ ನೆಲೆ

ಪ. ಪೂ. ಶ್ರೀ ಲಿಂಗಾನಂದ ಮಹಾಸ್ವಾಮಿಗಳವರಿಗೆ,

ಪರಮ ಪೂಜ್ಯರಲ್ಲಿ ಹಲವು ಶರಣು.

ತಾವು ಕಳಿಸಿದ ಕರಪತ್ರ, ಕಲ್ಯಾಣ ಕಿರಣ ತಲುಪಿದವು. ಅದರಲ್ಲಿಯ ಬೃಹತ್ ಯೋಜನೆಯ ವಿಷಯ ಓದಿದಾಗ ಅಚ್ಚರಿ - ಅಭಿಮಾನ - ಆನಂದಗಳನ್ನು ಏಕಕಾಲದಲ್ಲಿ ಅನುಭವಿಸಿದೆ. ಒಂದು ಅತಿಮಾನಸಾವತರಣದ ವನಶ್ರೀ-ನಿಲಯ-ನೆಲೆ ನಿರ್ಮಾಣಗೊಳ್ಳಲಿದೆ ಎಂಬ ಕಲ್ಪನೆಯೇ ನನ್ನ ಮನಸ್ಸಿಗೆ ತುಂಬ ಹರ್ಷ ನೀಡಿತು. ಕಲ್ಯಾಣ ವನದ ಈ ಅದ್ಭುತ ಕಲ್ಪನೆ ಅತಿ ಶೀಘ್ರದಲ್ಲಿಯೇ ನನಸಾಗುವುದೆಂದು ನಾನು ಭಾವಿಸಿದ್ದೇನೆ. ಅದು ನೂರಾರು ನಿರ್ಮಲ ಭಾವದ ಸಾಧಕರಿಗೆ ನೆಲೆಯಾದೀತು ; ಸಾವಿರಾರು ಜನರ ಜೀವನಕ್ಕೆ ನೆಮ್ಮದಿ ನೀಡೀತು. ತಮ್ಮ ಅನುಪಮ ಕರ್ತೃತ್ವ ಹಾಗೂ ಸಂಕಲ್ಪ ಶಕ್ತಿಯ ಪ್ರತೀಕವಾಗಿ ಈ ನೂತನ "ಬಸವ ಬೀಡು". ಈ ಸಾಹಸಕ್ಕಾಗಿ ಮನಸ್ಸು ಮಾಡಿದ್ದಕ್ಕಾಗಿ ತಮಗೆ ನೂರುನಮನ.

ದಿ. 16-10-1978. ತಮ್ಮ

ಬಿಜಾಪುರ. **ಸ್ವಾಮಿ ಸಿದ್ದೇಶ್ವರ**

ಈ ಶತಮಾನದ ಮಹಾಮನೆ

ಪೂಜ್ಯ ಮಾತಾಜಿಯವರ ಪಾದಪದ್ಮಂಗಳಲ್ಲಿ

ಬಸವಣ್ಣನ ಶಿರಸಾಷ್ಟಾಂಗ ಪ್ರಣಾಮಗಳು.

ಬಸವ ಗಂಗೋತ್ರಿಯ ಪ್ರಾರಂಭೋತ್ಸವವು ಬಸವಣ್ಣನವರ ಕೃಪೆಯಿಂದ ಬಹಳ ವಿಜೃಂಭಣೆಯಿಂದ, ಬಹು ಅಚ್ಚುಕಟ್ಟಾಗಿ ನಡೆದುದನ್ನು ಕಣ್ಣಾರೆ ಕಂಡು ಆನಂದಗೊಂಡೆ. ತಮ್ಮ ಈ ಮಹಾಸಾಹಸವು ಎಂತಹ ಕಡುವೈರಿಯನ್ನು ಸಹ ಮೆಚ್ಚಿಸುವಂತಹ ಸಾಹಸ. ಈ ತಮ್ಮ ಬೃಹದ್ಯೋಜನೆ ಬಹಳ ಬೇಗ ಕೈಗೂಡಿ ಬಸವ ಗಂಗೋತ್ರಿಯು ೨೦ನೆಯ ಶತಮಾನದ ಮಹಾಮನೆಯಾಗಲಿ ಎಂದು ಹಾರೈಸುತ್ತೇನೆ.

—ಪಿ. ಬಸವಣ್ಣ,
ಅಡ್ವೋಕೇಟ್, ಕೊಳ್ಳೇಗಾಲ.

ಸಹೃದಯರಿಗೆ ವಂದನೆಗಳು

ದಿ. 8-10-1978ರಂದು ಜರುಗಿದ "ಬಸವ ಗಂಗೋತ್ರಿ" ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಪ್ರಾರಂಭೋತ್ಸವಕ್ಕೆ ಯಶಸ್ಸು ಕೋರಿ, ಸಹೃದಯತೆಯಿಂದ ಅನೇಕ ಗೌರವಾನ್ವಿತ ವ್ಯಕ್ತಿಗಳು ಸಂದೇಶ ನೀಡಿದ್ದಾರೆ. ಪ್ರಮುಖ ಹೆಸರುಗಳನ್ನಿಲ್ಲಿ ಪ್ರಕಟಿಸಲಾಗಿದೆ.

ಶರಣರುಗಳಾದ

ಗೌರವಾನ್ವಿತ ಬಿ. ಡಿ. ಜತ್ತಿಯವರು, ಉಪಾಧ್ಯಕ್ಷರು, ನವದೆಹಲಿ.

ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ವಿಜೇತ, ಡಾ॥ ಕುವೆಂಪುರವರು, ಮೈಸೂರು.

ಕ್ರಾಂತಿಕಿರಣ, ಜ್ಞಾನಪೀಠ ಪ್ರಶಸ್ತಿ ವಿಜೇತ. ಡಾ॥ ಶಿವರಾಮ ಕಾರಂತರು, ಮೈಸೂರು.

ಕವಿಮಹೋದಯ, ಡಾ॥ ಜಿ. ಎಸ್. ಶಿವರುದ್ರಪ್ಪನವರು,
ಕನ್ನಡ ಅಧ್ಯಯನ ಪೀಠ, ಬೆಂಗಳೂರು.

ಹಿಂದಿ ಚಲನಚಿತ್ರ ನಟಸಾರ್ವಭೌಮ ಅಶೋಕ್ ಕುಮಾರ್, ಮುಂಬಯಿ.

ಅಶೋಕ್ ಕುಮಾರರ ಮಗ ಅನೂಪ್‌ಕುಮಾರ್, ಮುಂಬಯಿ.

ಚಲನಚಿತ್ರ ನಿರ್ದೇಶಕ ಎಸ್. ರಾಮನಾಥನ್, ಮದ್ರಾಸ್.

ಎನ್. ವಿ. ವಾಲೆ, ಅಶೋಕ್ ಕುಮಾರರ ವಕೀಲಿ ಸಲಹೆಗಾರರು, ಮುಂಬಯಿ.

ಎಂ. ಎಲ್. ಶ್ರೀನಿವಾಸ ಶ್ರೇಷ್ಠಿಗಳು. ಕಾಫಿ ಪ್ಲಾಂಟರ್, ಚಿಕ್ಕಮಗಳೂರು..

ಡಾ॥ ಎಸ್. ಬಿ. ಪರ್ವತಯ್ಯ, ಜಿಲ್ಲಾ ವೈದ್ಯಾಧಿಕಾರಿಗಳು, ಚಿಕ್ಕಮಗಳೂರು.

ಪರ್ವತಪ್ಪ ಕೋರವಾರ್, ದಕ್ಷಿಣ ಭಾರತ ವೀರಶೈವ
ಮಹಾಸಭಾ ಅಧ್ಯಕ್ಷರು, ಹೈದ್ರಾಬಾದು.

ಶಂಕರಶೆಟ್ಟಿ ಪಾಟೀಲ್, ಮಾಜಿ ಎಂ.ಎಲ್.ಎ.. ಕಮಲಾಪುರ.

ರುದ್ರಶೆಟ್ಟಿ ಪಾಟೀಲ್. ಮಹಾಗಾಂವ, ಗುಲ್ಬರ್ಗ ಜಿಲ್ಲಾ.

ಬಸವರಾಜ ತಂಬಾಕೆ, ಜೀವವಿಮಾ ವಿಸ್ತರಣಾಧಿಕಾರಿಗಳು, ಷಹಾಪುರ.

ಎಸ್. ಆರ್. ಗುಂಜಾಳ, ಉಪಗ್ರಂಥ ಭಂಡಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ.

ಶ್ರೀಮತಿ ನಾಗಮ್ಮ ಲಿಂಗಮರಿಯಪ್ಪ, ಶಿವಮೊಗ್ಗ.

ದು. ನಿಂ. ಬೆಳಗಲಿ, ಲೇಖಕರು, ಬನಹಟ್ಟಿ.

ಬಿ. ಪಿ, ಐಸಾಮಿಗೌಡ, ಅಧ್ಯಕ್ಷರು, ಜಿಲ್ಲಾ ವೀರಶೈವ ಸಂಘ.

ಟಿ. ಆರ್. ರುದ್ರೇಗೌಡ, ಅಡ್ವೋಕೇಟ್. ತಿಪಟೂರು.

ವಿ. ಚಂದ್ರಪ್ರಭಾ ತಮ್ಮಯ್ಯ ಮತ್ತು ಶರಣ ಬಳಗ, ಶಿವಮೊಗ್ಗ.

ಭರತರಾಜ ಶೆಟ್ಟಿ. ಶಿವಮೊಗ್ಗ.

ಶ್ರೀಮತಿ ಮತ್ತು ಶ್ರೀ ಡಾ॥ ಕೃಪಾಶಂಕರ್, ಬೆಂಗಳೂರು.

ಹಳಪೇಟಿ ಚಿಂತಾಮಣಿ, ಧಾರವಾಡ.

ವೈ. ಎಂ. ಕೇಂದ್ರಿ, ಸಬ್‌ರಿಜಿಸ್ಟ್ರಾರ್. ಹಾಸನ.

ಆರ್. ಬಿ. ಘೋಂಗಡೆ, ಕೆ.ಎಸ್.ಆರ್.ಟಿ.ಸಿ., ಹುಬ್ಬಳ್ಳಿ.

ಎಸ್. ಎಂ. ಗಂಜಿಗಟ್ಟಿ, (ರಿ) ಅಸಿಸ್ಟೆಂಟ್ ಕಮೀಷನರ್, ಧಾರವಾಡ.

ಇನ್ನಿತರ ನೂರಾರು ಶರಣರು ಶುಭಾಶಯ ಕೋರಿ ಪತ್ರ ಬರೆದಿದ್ದಾರೆ. ಸ್ಥಳಾಭಾವದ ಕಾರಣ ಪ್ರಕಟಿಸಿಲ್ಲ. ಎಲ್ಲರಿಗೂ ವಂದನೆಗಳು.


ಬಸವ ಗಂಗೋತ್ರಿ — ವ್ಯವಸ್ಥಾಪಕರು.

ಬಸವ ಗಂಗೋತ್ರಿ

ಸಂಸ್ಥೆಯ ನಿರ್ಮಾಣಕ್ಕೆ ಧನಸಹಾಯ ನೀಡಲಿರುವವರು

ಶರಣರುಗಳಾದ

1.	ಬಿ. ಎಂ. ರುದ್ರಶೆಟ್ಟಿ (ಅಮೃತ ಶಿಲಾಪುತ್ಥಳಿಗಾಗಿ)	10.001-00
2.	ಎಂ. ಸಿ. ಚಿಕ್ಕವೀರಯ್ಯ	1008-00
3.	ಎಂ. ವಿ. ಗುರುಬಸಪ್ಪಶೆಟ್ಟಿ	1008-00
4.	ಶ್ರೀಮತಿ ಮತ್ತು ಶ್ರೀ ಎಂ. ಎಸ್. ಜಂಗಿನಮಠ	1001-00
5.	ಗಾನಕೋಕಿಲೆ ಜಿ. ಚೆನ್ನಮ್ಮ	1001-00
6.	ವಿವೇಕಾನಂದ ಮನವಾಡೆ	1001-00
7.	ಹಂಪಯ್ಯ	1001-00
8.	ಶಿವಯ್ಯ	1001-00
9.	ಭರಮಣ್ಣ ಮಾಕನೂರು	1001-00
10.	ಮೇಜರ್ ಪ್ರಭಾಕರ್, ಸನ್‌ಡೀಪ್ ಎಂಟರ್‌ಪ್ರೈಸಸ್	5001-00
11.	ಎಸ್. ಬಸವರಾಜು, ಕೈಲಾಸ್ ಪ್ರಿಂಟರ್ಸ್	1008-00
12.	ಶಿವಮಹಾದೇವನ್	1001-00
13.	ಕೆ. ಬಿ. ಷಣ್ಮುಖಪ್ಪ	1008-00
14.	ಡಾ॥ ಬಿ. ವಿ. ಪಟೇಲ್	1008-00



ಹಿಂದಿನ ಸಂಚಿಕೆಯವರೆಗೆ—

(ಧರ್ಮಪ್ರಸಾರ, ವಿದೇಶ ಸಂದರ್ಶನದ ಮಣಿಹ ಹೊತ್ತು ಪೂಜ್ಯ ಮಾತೆಯವರು 1976ರ ಮೇ 14ರಂದು ತಾಯ್ನಾಡಿನಿಂದ ಆಂಗ್ಲನಾಡಿಗೆ ತೆರಳಿದ್ದರು. ಏಕಾಂಗಿನಿಯಾಗಿ ಅಪರಿಚಿತ ನಾಡಿಗೆ ಹೋದ ಅವರಿಗೆ ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾದಗೂ ಸ್ವಧೈರ್ಯದಿಂದ ಪರಿಹರಿಸಿಕೊಂಡು ಮುಂದೆ ಸಾಗಿದರು. ಈ ಲೇಖನ ಮಾಲಿಕೆಯಲ್ಲಿ ತಮ್ಮ ಅನುಭವಗಳನ್ನು ತತ್ತ್ವಜ್ಞಾನದೊಡನೆ ಮೇಳೈಸಿ ವಿವರಿಸುತಿದ್ದಾರೆ.)

ಧಾರಾವಾಹಿ–೧೩

ಜಗದ್ಗುರು ಮಾತಾಜಿ

ಆಕ್ಸ್‌ಫರ್ಡ್ ಸಂದರ್ಶನದ ನಂತರ ಕೇವಲ ಧರ್ಮಪ್ರಚಾರದಲ್ಲಿ ತಲ್ಲೀನವಾಗುವದೋ ಅಥವಾ ಹೇಗಾದರೂ ವಿದ್ಯಾಭ್ಯಾಸಕ್ಕೆ ತಲ್ಲೀನವಾಗುವುದೋ ಎಂಬ ಚಿಂತನೆಯಲ್ಲಿ ತೊಡಗಿದೆ. ಎರಡು ಮೂರು ವರುಷಗಳ ಕಾಲ ಮಾತೃದೇಶದಿಂದ ದೂರವಿದ್ದು ಸೇವೆಯ ಅವಶ್ಯಕತೆ ಇರುವ ನಾಡನ್ನೇ ಕಡೆಗಣಿಸಿ ವಿದೇಶದಲ್ಲಿ ವಿದ್ಯಾರ್ಥಿ ಜೀವನ ಸ್ವೀಕರಿಸಲು ಅಂತರಾತ್ಮ ಒಪ್ಪುತ್ತಿರಲಿಲ್ಲ. ಕಾಡಿನಲ್ಲಿ ಸೊಂಪಾದ ಹಸಿರಿನ ಮಧ್ಯೆ ಸ್ವಚ್ಛಂದವಾಗಿ ವಿಹರಿಸುವ ಜಿಂಕೆಯೊಂದನ್ನು ತಂದು ಮೃಗಾಲಯದಲ್ಲಿ ವಿಶಾಲವಾದ ಬೇಲಿಯನ್ನು ನಿರ್ಮಾಣ ಮಾಡಿ ಆಡಬಿಟ್ಟರೂ ಅದು ಕೊರಗುವಂತೆ ನನ್ನ ಮನಸ್ಥಿತಿ. ಭಾವಪ್ರಧಾನವಾದ ಅನುಭಾವ (Mystic) ಸಾಹಿತ್ಯವನ್ನು, ಕಾವ್ಯಮಯ ಆದರೆ ವೈಚಾರಿಕ ಸಾಹಿತ್ಯ ಕೃತಿಗಳನ್ನು ಓದುವುದರಲ್ಲಿ ನನ್ನ ಮನಸ್ಸು ಬಹು ಸುಲಭವಾಗಿ ತಲ್ಲೀನವಾಗಬಲ್ಲುದು. ಕೇವಲ ತರ್ಕಪ್ರಧಾನ, ಬೌದ್ಧಿಕ, ಶಬ್ದಜಾಲದ ಕೃತಿಗಳನ್ನು ಮೆಲ್ಲುವುದರಲ್ಲಿ ಅಷ್ಟಾಗಿ ತೊಡಗದು. ಅಭಿರುಚಿಗೆ ವಿರುದ್ಧವಾದ ಕೃತಿಗಳ ಅಭ್ಯಾಸದಲ್ಲಿ ಮನಸ್ಸನ್ನು ತೊಡಗಿಸಲಾರದಷ್ಟು ಅದು ಬಲಿತಿರುವುದರಿಂದ ಕೆಲವೊಮ್ಮೆ ಅಭಿರುಚಿಯನ್ನು ಬದಿಗೊತ್ತಿ ಓದಬೇಕಾಗುವ, ಪಿ.ಹೆಚ್.ಡಿ. ಪ್ರಬಂಧಕ್ಕಾಗಿ ಯತ್ನಿಸುವುದು ನಿಷ್ಪ್ರಯೋಜಕ. ಇನ್ನು ಪದವಿಯ ಅಭೀಪ್ಸೆ ಹೊತ್ತು

ಓದುತ್ತ ಹಣ, ಶಕ್ತಿ, ಕಾಲ-ಎಂಬ ತ್ರೈನಿಧಿಗಳನ್ನು ವ್ಯರ್ಥಗೊಳಿಸುವುದು ಬೇಡ ಎಂಬ ನಿರ್ಧಾರಕ್ಕೆ ಬಂದೆ. ರೇಷ್ಮೆ ಹುಳುವು ಒಂದು ಅವಧಿಯಲ್ಲಿ 'ಬಕಾಸುರ'ನಂತೆ ತಿನ್ನುವುದು: ಗಬಗಬ ತಿಂದು ಅನಂತರ ಕೆಲದಿನ ಮೌನದಾಳಿ. ಆಮೇಲೆ ಎಳೆಯನ್ನು ಬಿಡಲು ತೊಡಗುವುದು. ಹಾಗೆಯೇ ಕೆಲವು ವರ್ಷಗಳವರೆಗೆ ಮುಮುಕ್ಷು ಅಥವಾ ಸಾಧಕ ಜ್ಞಾನಾರ್ಜನೆಯನ್ನು ಅತ್ಯಧಿಕ ದಾಹದಿಂದ ಮಾಡಬೇಕು. ಅನಂತರ ತನ್ನಲ್ಲಿ ತಾನೇ ಚಿಂತನೆಗೆ ತೊಡಗಬೇಕು, ಕೆಲದಿನಗಳ ಬಳಿಕ ಸೇವಾಪ್ರವೃತ್ತನಾಗಬೇಕು. ಜ್ಞಾನಬೋಧೆ, ಸಮಾಜ ಜಾಗೃತಿ, ಸಾಹಿತ್ಯರಚನೆ, ಮಾನವೀಯ ಸೇವೆ-ಇಂಥವುಗಳಲ್ಲಿ ತೊಡಗಬೇಕು. ಅದು ಬಿಟ್ಟು, ಸಾಯುವನ್ನಕ್ಕ ಶ್ರವಣ ಮಾಡಿದರೆ ಕಾದುವುದಿನ್ನಾವಾಗ ? ಎಂಬಂತೆ, ಸಾಯುವತನಕ ಪಾಂಡಿತ್ಯವನ್ನೇ ಪಡೆಯುತ್ತ ಕುಳಿತರೆ ಅದನ್ನು ಕ್ರಿಯಾತ್ಮಕ ಸ್ವರೂಪಕ್ಕೆ ತರುವುದೆಂದು ? ಷಟಸ್ಥಲ ದರ್ಶನದಲ್ಲಿ ಅಂಗಸ್ಥಲ, ಲಿಂಗಸ್ಥಲ ಎಂಬ ಎರಡು ವಿಭಾಗಗಳು ಈ ಮಾನಸಿಕ ಸ್ಥಿತಿಯನ್ನು ಕುರಿತು ಹೇಳುತ್ತವೆ ಎಂದು ನನ್ನ ತಿಳುವಳಿಕೆ. ರೇಷ್ಮೆ ಹುಳುವಿನ ಬದುಕನ್ನೇ ತೆಗೆದುಕೊಂಡರೆ ಅದರ ಆರಂಭ ಮೊಟ್ಟೆಯೊಡೆದು ಹುಳುವು ಬಂದಾಗ. ಅದು ಸತತವಾಗಿ ತಿಂದು ಬೆಳೆಯುವುದು. ನಂತರ ಕೆಲದಿನ 'ಧ್ಯಾನೋನ್ಮುಖಿ'ವಾಗಿ ಎಳೆಬಿಡತೊಡಗುವುದು. ಅಲ್ಲಿಂದ ಹೊರಬರುವಾಗ ಪತಂಗವಾಗಿ ಬಂದು, ತಾನು ನಂತರ ಸಂಸಾರಗೈದು, ಮೊಟ್ಟೆ ಇಟ್ಟು ಸಾಯುವುದು. ಈ ಬದುಕನ್ನು ಸಾಧಕನ ಜೀವನಕ್ಕೆ ಹೋಲಿಸುವಾ. ಅಜ್ಞಾನದ ಕವಚ ಭೇದಿಸಿಕೊಂಡು ಜಿಜ್ಞಾಸುವಾಗಿ ಬರುವನು. ಶಾಸ್ತ್ರಾಧ್ಯಯನ - ಬೋಧೆಗಳ ಮೂಲಕ ಜ್ಞಾನಪ್ರಸಾದವನ್ನು ಪಡೆದು, ತನ್ನದೇ ಆದ ಆತ್ಮಚಿಂತನೆಯಲ್ಲಿ ತೊಡಗಿ, ಸಂದೇಶವೆಂಬ ಗೂಡನ್ನು ರಚಿಸಿ, ದೈವಾನುಭವದ ಸಂಗಮವನ್ನೂ ಹೊಂದಿ, ಶಿಷ್ಯರು, ಸಾಧಕರೆಂಬ ಮರಿಗಳನ್ನು ಲೋಕಕ್ಕಿತ್ತು ತಾನು ಲಿಂಗೈಕ್ಯನಾಗುವದು. ಬಸವ ಸಿದ್ಧಾಂತದ ಪ್ರಕಾರ ಸನ್ಯಾಸಿ - ವಿರಕ್ತ ಸೇವೆಯನ್ನು ಮಾಡಬೇಕು. ಅಂಗಸ್ಥಲದಲ್ಲಿ ತನ್ನ ಡೊಂಕನ್ನು ತಿದ್ದಿಕೊಂಡು, ಪರಮಾನುಭವ ಪಡೆದು ಸಿದ್ಧಪುರುಷನಾಗುವನು. ನಂತರ ನಿರ್ಲಿಪ್ತವಾಗಿ ಲಿಂಗಸ್ಥಲದಲ್ಲಿ ಸೇವೆಯಲ್ಲಿ ಸಮಾಜ ನಿರ್ಮಾಣ ಕಾರ್ಯದಲ್ಲಿ ತಲ್ಲೀನವಾಗುವನು. "ಗಳಿಸಿಕೊಂಡ ಜ್ಞಾನ-ಆತ್ಮಬಲಗಳ ಶಕ್ತಿಯ ಮೇಲೆ ಇನ್ನು ಸಮಾಜ ಸೇವೆಯಲ್ಲಿ ತಲ್ಲೀನವಾದರಾಯಿತು ; ವಿದ್ಯಾಭ್ಯಾಸದ 'ಗಳಿಕೆ'ಯ ಕಾಲಕ್ಕೆ ಮಂಗಲ ಹಾಡೋಣ" ಎಂದು ನಿರ್ಧರಿಸಿದಾಗ ಹೊಯ್ದಾಡುತ್ತಿದ್ದ ಮನಸ್ಸು ಗಟ್ಟಿಗೊಂಡಿತು ; ಮುಲುಗಾಡುವುದನ್ನು ಬಿಟ್ಟು ಕಾರ್ಯಕ್ಕೆ ಸನ್ನದ್ಧವಾಯಿತು.

ಕೆಲವು ಧರ್ಮಪ್ರಸಾರಕ ಸಂಸ್ಥೆಗಳು, ವಸ್ತು ಸಂಗ್ರಹಾಲಯ, ಕಲಾಶಾಲೆ— ಈ ಎಲ್ಲವನ್ನೂ ಕೂಲಂಕಷವಾಗಿ ನೋಡುತ್ತಿದ್ದೆ. ಸರ್ಕಾರದ ವೃದ್ಧಾಲಯ, ಕೆಲವು

ಸೇವಾ ಸಂಸ್ಥೆಗಳು ನಡೆಸುತ್ತಿದ್ದ ವೃದ್ಧಾಲಯ, ಅನಾಥಾಲಯದಂತಹ ಸೇವಾ ಕೇಂದ್ರಗಳು, ಮುಂತಾದುವನ್ನು ಗಮನಿಸುತ್ತ, 'ನಮ್ಮಲ್ಲಿ ಇಂಥ ಸಮಾಜದ ನಿರ್ಮಾಣ ಎಂದಾದೀತು ? ಎಂದು ಚಿಂತಿಸುತ್ತಿದ್ದೆ. ವಾರಾಂತ್ಯಗಳಲ್ಲಿ ಅಲ್ಲಲ್ಲಿ ಪ್ರವಚನ ಮಾಡುತ್ತ, ಉಳಿದ ದಿನಗಳಲ್ಲಿ ಸತತವಾಗಿ ಅನೇಕ ಸಂಸ್ಥೆಗಳನ್ನು ಸಂದರ್ಶಿಸ ಲಾರಂಭಿಸಿದೆ.

ಅಗಸ್ಟ ೧೧ ರಂದು ಚಾಡ್‌ವೆಲ್ ಹೀತ್‌ನಲ್ಲಿರುವ ಸನಾತನ ಧರ್ಮ ಮಿಷನ್ ಮತ್ತು ವರ್ಲ್ಡ್ ಸ್ಪಿರಿಚುಯಲ್ ಸೊಸೈಟಿಯ ಆಶ್ರಯದಲ್ಲಿ "ಸತ್ಸಂಗ"ಕ್ಕೆ ಹೋದೆ. ಅಂದು ಇದ್ದಕ್ಕಿದ್ದಂತೆಯೇ ಪ್ರವಚನ. ಪ್ರಸಾದಾನಂತರ ಆ ಸಂಸ್ಥೆಯವರು ಒಂದು ವಿಷಯವನ್ನು ಪ್ರಸ್ತಾಪಿಸಿದರು. "ನಮ್ಮ ಬಹುಪಾಲು ಜನ ಎಷ್ಟೋ ದಶಕಗಳ ಹಿಂದೆ ಭಾರತದಿಂದ ದಕ್ಷಿಣ ಆಫ್ರಿಕ, ಕೆನ್ಯಾ, ಉಗಾಂಡಾಗಳ ಕಡೆ ಹೋಗಿ ನೆಲೆಸಿ, ಈಗ ನರರೂಪಿ ರಕ್ಕಸ ಈದಿ ಅಮೀನನ ಕ್ರೂರಹಸ್ತದ ಹಿಡಿತದಿಂದ ಪಾರಾಗಲೆಳಸಿ ಬ್ರಿಟನ್ನಿಗೆ ಬಂದವರು. ನಮಗೆ ಸಂತ-ಮಹಾಂತರ ದರ್ಶನವೆಂದರೆ ಬಹಳ ಆನಂದ ದಾಯಕ. ಈಗ ತಾವು ಬಂದಿರುವದಂತೂ ನಮಗೆ ಅಪೂರ್ವ ಸೌಭಾಗ್ಯ. ನಮ್ಮ ಹಿಂದುಗಳು ಬಹಳಷ್ಟು ಅಲ್ಲಲ್ಲೆ ಇದ್ದಾರೆ. ನಿಮ್ಮಲ್ಲಿಂದ ಯಾರಾದರೂ ಪ್ರವಚನ ಕಾರರನ್ನು ಕರೆಸಿರಿ. ವಸತಿ ಪ್ರಸಾದಗಳ ವ್ಯವಸ್ಥೆಯನ್ನು ಮಾಡುತ್ತೇವೆ. ಕಾಣಿಕೆ ಸಹ ನೀಡುತ್ತೇವೆ. ಅನೇಕ ಕಡೆ ಇಂಥ ಕಾರ್ಯಕ್ರಮ ಏರ್ಪಡಿಸಿ, ಧರ್ಮಜಾಗೃತಿ ಮಾಡೋಣ." ಅವರ ಉತ್ಕಟತೆ ಕಂಡು ಆಲೋಚನೆಗೆ ತೊಡಗಿದೆ : "ಯಾರಾದರೆ ಸರಿ ? ಶಿಷ್ಯವೃಂದ ಸಾಕಷ್ಟಿದೆ. ಆದರೆ ಅವರು ಈ ನಾಡಿನ ಶ್ರೋತೃಗಳಿಗೆ ತೃಪ್ತಿ ಯಾಗುವ ಮಟ್ಟದಲ್ಲಿ ಬೋಧಿಸಬಲ್ಲರೆ ?"

ಪೂಜಾ-ಪ್ರಸಾದಾನಂತರ ಎಲ್ಲರೂ ಚರ್ಚಿಸುವಾಗ ಚಮನ್ ಲಾಲ್ ಮಾರ್ವಾ ಮಾತಿಗೆ ತೊಡಗಿದರು. ಅವರು ಸನಾತನ ಧರ್ಮ ಮಿಷನ್ ಸಂಸ್ಥಾಪಕರು : ಬಹಳ ಸಾತ್ವಿಕಜೀವ. ಮುಂದೆ ಸನ್ಯಾಸ ತೆಗೆದುಕೊಳ್ಳಬೇಕೆಂಬ ಅಪೇಕ್ಷೆಯಿಂದ ಏಕಾಂಗಿ ಯಾಗಿ, ಅವಿವಾಹಿತರಾಗಿ ಉಳಿದಿರುವ ವ್ಯಕ್ತಿ. ಎತ್ತರವಾದ ಭವ್ಯಕಾಯ ; ಧರ್ಮ ದಲ್ಲಿ ಶ್ರದ್ಧೆ. ಸಾಧುಸಂತರಲ್ಲಿ ಅಪಾರ ಅಭಿಮಾನ ತಾಳಿರುವ ವ್ಯಕ್ತಿ. ಅಲ್ಪಸ್ವಲ್ಪ ಜವಾಬ್ದಾರಿ, ತಾಯಿ ತಂದೆಯವರ ಋಣ ತೀರಿಸಲು ನೌಕರಿ ಮಾಡುತ್ತಿದ್ದು. ಆ ಹೊರೆ ಇಳಿಯುತ್ತಲೇ ಸನ್ಯಾಸ ಸ್ವೀಕರಿಸಿ ತಮ್ಮ ಆಸ್ತಿ-ಪಾಸ್ತಿಯನ್ನೆಲ್ಲ ಧರ್ಮ ಪ್ರಸಾರಕ್ಕೆ ಮೀಸಲಿಡಬಯಸಿದ್ದ ತ್ಯಾಗಿಯವರು. ತಮ್ಮ ಸಂಸ್ಥೆ ಜ್ಞಾನದ ಕೇಂದ್ರ ವಾಗಬೇಕು : ಅಲ್ಲಿಗೆ ಉತ್ತಮ ಪ್ರವಚನಕಾರರು ಬೇಕು ಎಂದು ಹಂಬಲಿಸುತ್ತಿದ್ದವರು. ನನ್ನ ದಿನಚರಿಯಲ್ಲಿ ಬಸವಣ್ಣನವರು, ಅಕ್ಕಮಹಾದೇವಿ, ಮತ್ತು ಪೂಜ್ಯ ಗುರೂಜಿ

ಯವರ ಭಾವಚಿತ್ರ ಅಂಟಿಸಿದ್ದೆ. ಅದನ್ನು ಕಂಡು ಕೇಳಿದರು : "ಪೂಜ್ಯ ಗುರೂಜಿ ಯವರು ಕೇವಲ ತಪಸ್ವಿಗಳೋ ಅಥವಾ ಪ್ರವಚನಕಾರರೊ ?". "ಅತ್ಯುತ್ತಮ ಪ್ರವಚನ ಪಟುಗಳು. ಅವರ ವಾಗ್ಝರಿ ನಿರರ್ಗಳ ಜಲಧಾರೆಯಂತೆ, ಚೇತೋಹಾರಿ". ನಾನು ನುಡಿದೆ. "ಈ ವಿಷಯ ತಮ್ಮಲ್ಲಿ ಬಹಳ ದಿನಗಳಿಂದ ಪ್ರಸ್ತಾಪಿಸಬಯಸಿದ್ದೆ. ಪೂಜ್ಯ ಗುರೂಜಿಯವರ ಭಾವಚಿತ್ರ ಕಂಡು ನನ್ನ ಮೈಮನಗಳು ಪುಳಕಿತಗೊಂಡಿದ್ದವು. ಅವರ ಭವ್ಯ ಆಕಾರವನ್ನು ನೋಡು ನೋಡುತ್ತ ಸ್ವಾಮಿ ವಿವೇಕಾನಂದರು ಪ್ರತ್ಯಕ್ಷ ಗೊಂಡಂತೆನಿಸಿತು. ಕೆಲವು ಸ್ವಾಮಿಗಳು. ಸಮುದ್ರಯಾನ ಮಾಡಬಾರದು; ವಿದೇಶ ಪ್ರವಾಸದಿಂದ ಮಡಿವಂತಿಕೆ ಹೋಗುವದು ಎಂದೆಲ್ಲ ನಂಬಿರುತ್ತಾರೆ. ಇವರು. ಅಂಥವರಲ್ಲದಿದ್ದರೆ, ಪ್ರಗತಿಪರ ವಿಚಾರಧಾರೆಯವರಿದ್ದರೆ ಗುರೂಜಿಯವರೇ ಇಲ್ಲಿಗೆ ಬರುವುದೊಳ್ಳಿತು. ಒಮ್ಮೆ ಅವರನ್ನು ಕಣ್ತುಂಬ ನೋಡಬೇಕು ಎನ್ನಿಸಿದೆ. ಇಲ್ಲಿಯ ಅವರ ಖರ್ಚು-ವೆಚ್ಚಗಳೆಲ್ಲ ನಮ್ಮ ಸಂಸ್ಥೆಯವು. ನನ್ನ ಮನೆಯಲ್ಲಿ ಒಂದೇ ಒಂದು ಕೋಣೆ ನನಗೆ ಇರಿಸಿಕೊಂಡು ಉಳಿದುದೆಲ್ಲ ಅವರಿಗೆ ಕೊಡುವೆ. ಕೆಲವಾರು ವರ್ಷಗಳ ನಂತರ ನನ್ನ ಆಸ್ತಿಯನ್ನೆಲ್ಲ ಟ್ರಸ್ಟ್ ಮಾಡಿಬಿಟ್ಟು, ತಮ್ಮ ಕೈಗೆ ಒಪ್ಪಿಸುವೆ. ಗುರೂಜಿಯವರಿಗೆ ನಮ್ಮ ಪರವಾಗಿ ಪತ್ರ ಬರೆಯಿರಿ."

ಗಂಭೀರ ಆಲೋಚನೆಯಲ್ಲಿ ತೊಡಗಿದೆ. 'ಗುರೂಜಿಯವರಿಗೆ ವಿದೇಶ ಪ್ರವಾಸ ವಂತೂ ಇಷ್ಟವೆ ? ಜ್ಞಾನದ ಕಕ್ಷೆ ಹಿರಿದು ಮಾಡುವ ಪ್ರವಾಸ ಯಾವ ಜ್ಞಾನಾ ಕಾಂಕ್ಷಿಗಳಿಗೆ ಇಷ್ಟವಾಗದು. ಆದರೆ ಇಷ್ಟು ಬೇಗ ಬರಲು ಇಚ್ಛಿಸರು' ಎಂದು ಗೊತ್ತಿತ್ತು. ನನ್ನ ಪ್ರವಾಸಿ ವೀಸಾ ಮುಗಿಯುವ ಒಂದು ತಿಂಗಳು ಮೊದಲು ಬಂದರೆ ಸಾಕು; ದೇಶವನ್ನು ನೋಡಬಹುದು. ಮೊದಲೇ ಆದರೆ ಅಲ್ಲಿಯ ಸಂಸ್ಥೆ ಗಳನ್ನು ನೋಡಿಕೊಳ್ಳುವವರು ಯಾರು ?

"ನಿಮ್ಮ ಅಭೀಪ್ಸೆ ವ್ಯಕ್ತಪಡಿಸಿ ನೀವೇ ಪತ್ರ ಬರೆಯಿರಿ. ನಿಮ್ಮ ಮಿಷನ್ ಗುರೂಜಿಯವರ ಬರವನ್ನು ಕಾಯುತ್ತಿದೆ ಎಂಬುದನ್ನು ಮನದಟ್ಟು ಮಾಡಿಕೊಡಿರಿ...." ಎಂದೆ. ಸನಾತನ ಧರ್ಮ ಮಿಷನ್ ಮತ್ತು ಜಾಗತಿಕ ಅಧ್ಯಾತ್ಮ ಸಂಸ್ಥೆಯ ಅಧ್ಯಾತ್ಮ ಜೀವಿಗಳು ಹಂಬಲ ತುಂಬಿದ ಭಾವದಿಂದ ಗುರೂಜಿಯವರನ್ನು ಆಮಂತ್ರಿಸುತ್ತಿದ್ದರೂ ಆ ಆಮಂತ್ರಣ ನನ್ನ ಮೂಲಕ ಬರದೆ ಅವರಿಂದಲೇ ನೇರವಾಗಿ ಬಂದರೆ ಒಳ್ಳಿತಲ್ಲವೆ ? ಧರ್ಮಪ್ರಸಾರದ ಮಣಿಹ ಹೊತ್ತು ವಿದೇಶಕ್ಕೆ ಹೋದರೂ, ಅಲ್ಲಿ ಎದುರಾಗುವ ಎಡರನ್ನೆದುರಿಸಿ ಕಳಕಳಿಯಿಂದ ಕಾರ್ಯಪ್ರವೃತ್ತವಾದರೂ ಕೆಡುನುಡಿಯಾಡುವ ಲಂಗುಲಗಾಮಿಲ್ಲದ ಬಾಯಿಗಳು, ವಿವೇಕ-ವಿಚಾರಗಳಿಲ್ಲದ ಲೇಖನಿಗಳಿಗೇನು ಕೊರತೆಯೆ ನಮ್ಮ ನಾಡಿನಲ್ಲಿ ? ನಮ್ಮ ಕೆಲವು ಪ್ರಭೃತಿಗಳ ಪ್ರವೃತ್ತಿ-ಚಾಳಿ ನೋಡಿಯೇ ಚನ್ನಬಸವಣ್ಣನವರು ಹೀಗೆ ಹೇಳಿರಬೇಕು :

ಊರೊಳಗಿದ್ದರೆ ಉಪಾಧಿಕನೆಂಬರು
ಅಡವಿಯೊಳಗಿದ್ದರೆ ಮೃಗನೆಂಬುರು.
ಹೆಣ್ಣ ಬಿಟ್ಟರೆ ನಪುಂಸಕನೆಂಬರು
ಹೊನ್ನ ಬಿಟ್ಟರೆ ದರಿದ್ರನೆಂಬರು
ಪುಣ್ಯವ ಬಿಟ್ಟರೆ ಪೂರ್ವಕರ್ಮಿ ಎಂಬರು
ಮಾತನಾಡದಿದ್ದರೆ ಮೂಕನೆಂಬರು
ಮಾತನಾಡಿದರೆ ಜ್ಞಾನಿಗೇಕಯ್ಯಾ ಮಾತೆಂಬರು
ನಿಜವನಾಡಿದರೆ ನಿಷ್ಠುರಿ ಎಂಬರು
ಸಮತೆಯ ನುಡಿದರೆ ಅಂಜುವನೆಂಬರು
ಇದು ಕಾರಣ ಕೂಡಲ ಚನ್ನ ಸಂಗಮದೇವಾ
ನಿಮ್ಮ ಶರಣ ಲೋಕದಿಚ್ಛೆಯ ನಡೆಯ, ಲೋಕದಿಚ್ಛೆಯ ನುಡಿಯ.

'ಈ ಲೋಕ ವ್ಯವಹಾರದ ಗೊಂದಲವೇ ಬೇಡ, ತಾವಾರಿಗೂ ಕೆಡುಕು ಮಾಡಬಾರದು; ತಮ್ಮ ಆತ್ಮೋದ್ಧಾರದಲ್ಲಿ ತಲ್ಲೀನರಾಗಬೇಕು. ಸಮಾಜಕ್ಕೆ ಹೊರೆಯಾಗುವುದು ಬೇಡ' ಎಂದು ಗೆಡ್ಡೆ ಗೆಣಸು ತಿನ್ನುತ್ತ ಓರ್ವತಾಪಸಿ ತನ್ನ ಪಾಡಿಗೆ ತಾನಿರಬಯಸಿದರೆ ಆರಂಭವಾಗುವವು ಮಾತುಗಳು. "ಅಯ್ಯೋ, ಮೃಗ ಬದುಕಿದಂತೆ ಒಂಟಿಯಾಗಿ ಬದುಕುತ್ತಿದೆ." ಇದಕ್ಕೆ ಬೇಸರಗೊಂಡು ಊರೊಳಕ್ಕೆ ಓರ್ವ ಸನ್ಯಾಸಿ ಬಂದು ಒಂದು ಪ್ರಾರ್ಥನಾ ಮಂದಿರವನ್ನೋ, ವಿದ್ಯಾಲಯವನ್ನೋ ಕಟ್ಟಿ ನಾಲ್ಕು ಜನರಿಗೆ ಧರ್ಮ, ವಿದ್ಯೆ ಕಲಿಸತೊಡಗಿದರೆ "ಎಂಥಾ ಉಪಾಧಿ ಕಟ್ಟಿಕೊಂಡೈತೆ, ಇದಕ್ಕೆ ಯಾಕೆ ಬೇಕು ಈ ಜಂಜಾಟ. ಮಕ್ಕಳಿಲ್ಲ ಮರಿಯಿಲ್ಲ ಹಗಲಿರುಳೂ ದುಡಿವನು". ನಿಷ್ಕಾಮ ವಂಥ ಸನ್ಯಾಸಿಯುದು ನಿರ್ಲಿಪ್ತ ಸೇವೆಯೋ ಉಪಾಧಿಯೋ ಎಂಬ ವ್ಯತ್ಯಾಸ ಸಹ ತಿಳಿಯರು ಕೆಲವು ಜನ. "ಹಣ ತುಂಬಾ ಕೆಟ್ಟುದ್ದು ಅದರ ಗೊಡವೆಯೇ ಬೇಡ, ಅದು ಹಾವಿಗಿಂತಲೂ ಅಪಾಯಕಾರಿ" ಎಂದು ದೂರವಿದ್ದರೆ "ದರಿದ್ರ ಮನುಷ್ಯ, ಹೇಗೆ ಹಣವನ್ನು ಬಳಸುವದೋ ಗೊತ್ತಿಲ್ಲ", ಎನ್ನುವರು. 'ಹಣವೊಂದು ಪವಿತ್ರ ಸಾಧನ. ಅದು ಮಾಯೆಯಲ್ಲ. ಅದನ್ನು ನಿರ್ಲಿಪ್ತವಾಗಿ ಸ್ವೀಕರಿಸಿ ಸಮಾಜ-ರಾಷ್ಟ್ರಗಳ ನಿರ್ಮಾಣಕ್ಕೆ ಉಪಯೋಗಿಸಬೇಕು" ಎಂದು ಪಡೆದುಕೊಂಡರೆ 'ಎಂಥಾ ಆಸೆ ಬರುಕನಪ್ಪಾ ! ಸನ್ಯಾಸಿಯಂತೆ, ನಮಗಿಂತಲೂ ದುರಾಸೆ'. ಒಂದೇ ಮಠ, ಒಂದೇ ಊರು, ಅಲ್ಲಿಯೇ ಸೀಮಿತನಾಗಿದ್ದರೆ, 'ಧರ್ಮಪ್ರಸಾರ ಮಾಡಲ್ಲ; ನಿಂತ ನೀರಿನಂತೆ, ಗೂಬೆಯಂತೆ ಕುಳಿತಲ್ಲೇ ಕೂಡುತ್ತಾನೆ. ನಾಡಿನಲ್ಲೆಲ್ಲ ಸಂಚರಿಸಿ ಜನಜಾಗೃತಿ ಮಾಡಬಾರದೆ '?' ಎಂದು ಟೀಕಿಸುವರು. ಜನರಲ್ಲಿ ಜಾಗೃತಿ ಮೂಡಿಸುವದು ಏಕೈಕ ಕರ್ತವ್ಯವೆಂದು ಹರಿವ ನದಿಯಂತೆ ಸದಾ ಸಂಚಾರ ಮಾಡುತ್ತ ಹೊರಟರೆ 'ಅ

ಊರಿನಿಂದ ಈ ಊರಿಗೆ ಓಡಿಹೋದ. 'ನಿಂತಲ್ಲಿ ನಿಲ್ಲಲ್ಲ' ಎನ್ನುವುದು. ಯಾವ ದುಡಿಮೆ-ಕರ್ತವ್ಯಗಳಿಗಾಗಿ ಸನ್ಯಾಸಿಯನ್ನು ಕೀರ್ತಿವಿಶೇಷಿತನನ್ನಾಗಿ ಮಾಡಬೇಕೋ ಅದನ್ನು ಹಿಡಿದೇ ನಿಂದಿಸುವುದು ಎಂಥಾ ವಿಲಕ್ಷಣ ! ಈ ಲೋಕದಾಟವನ್ನು ನೋಡಿದರೇ ವಿಚಿತ್ರವೆನ್ನಿಸದಿರದು. ಯಾವುದನ್ನೂ ಸರಿಯಾಗಿ ಅರಿತುಕೊಳ್ಳುವ ಸಹನೆ, ಸೌಜನ್ಯ ಬಹುಪಾಲು ಜನಕ್ಕೆ ಇರದು.

ಚಮನ್‌ಲಾಲ್ ಮಾರ್ವಾರು ಪೂಜ್ಯ ಗುರೂಜಿಯವರಿಗೆ ತಾಪೇ ನೇರವಾಗಿ ಪತ್ರ ಬರೆದರು : ಆಮಂತ್ರಿಸಿದರು. ಗುರೂಜಿಯವರಿಂದ ಒಪ್ಪಿಗೆ ಬರುತ್ತಿದ್ದಂತೆಯೇ ತಾವೇ ಸ್ಪಾನ್ಸರ್ ಮಾಡಿ, ತಮ್ಮ ಸಂಸ್ಥೆಯಿಂದ ಒಂದು ವಿಮಾನದ ಟಿಕೆಟ್ಟನ್ನೂ ಖರೀದಿಸಿದರು. ಅವುಗಳನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಕಳಿಸಿದ ಬಳಿಕ ಸ್ವೀಕರಿಸಿದ ಗುರೂಜಿಯವರು ಬರುವ ದಿನಾಂಕವನ್ನು ಪತ್ರ ಮುಖೇನ ತಿಳಿಸಿದರು.

ಸೆಪ್ಟೆಂಬರ್ 9ನೆಯ ತಾರೀಖಿಗೆ ಪೂಜ್ಯ ಗುರೂಜಿಯವರು ಬರುವದು ಖಚಿತವಾಯಿತು. ನಮ್ಮೆಲ್ಲರಿಗೆ ಸಂತಸವಾಯಿತು. ಸೆಪ್ಟೆಂಬರ್ 19, 20 ಮತ್ತು 21ಕ್ಕೆ ಭಾರತೀಯ ಧರ್ಮಗಳ ಮೇಲೆ ವಿಚಾರಗೋಷ್ಠಿ ಇದ್ದುದರಿಂದ ಅದರಲ್ಲಿ ಮುಖ್ಯ ಅತಿಥಿಯಾಗಿ ನಾನು ಆಮಂತ್ರಿಸಲ್ಪಟ್ಟುದರಿಂದ, ಅಷ್ಟರಲ್ಲಿ ಗುರೂಜಿಯವರು ದಯಮಾಡಿಸಿದರೆ ವಿಖ್ಯಾತ ಆಂಗ್ಲ ಪಂಡಿತ, ಪ್ರಾಧ್ಯಾಪಕರನ್ನು ಕಂಡಂತಾಗುವುದೇ ಅಲ್ಲದೆ ನನ್ನ ಉಪನ್ಯಾಸ ಕಾರ್ಯಕ್ರಮವನ್ನೂ ಪ್ರತ್ಯಕ್ಷವಾಗಿ ವೀಕ್ಷಿಸಿದಂತಾಗುವುದೆಂಬ ನನ್ನ ಅಪೇಕ್ಷೆ ಈಡೇರಲಿತ್ತು.

ಈ ಮಧ್ಯೆ ಆಗಸ್ಟ್ 24ರಂದು ಅಲೆನ್ ಬಾಬ್ಬಿಂಗ್‌ಟನ್‌ರವರ ಅಲಿಯನ್ ಯೋಗ ಕೇಂದ್ರದಲ್ಲಿ "ಶಿವಯೋಗ"ವನ್ನು ಕುರಿತು ಉಪನ್ಯಾಸ ಮಾಡಿದೆ. ಮಹಾಯೋಗಿ, ಆದಿಯೋಗಾಚಾರ್ಯ ಶಿವನಿಂದ ಆತ್ಮಾನುಸಂಧಾನದ ಒಂದು ಯೋಗ ಪಥ ಪ್ರಾರಂಭವಾಗಿ ಶೈವಸಿದ್ಧಾಂತದಲ್ಲಿ ಒಂದು ಸ್ವರೂಪ ಪಡೆದುದನ್ನು ವಿವರಿಸಿ, ಬಸವಣ್ಣನವರೇ ಆದ್ಯರಾಗಿ ಇಷ್ಟಲಿಂಗವು ಕೇಂದ್ರಬಿಂದುವಾಗಿ ತ್ರಾಟಕ ಯೋಗವನ್ನೆ ಜೀವಾಳವಾಗಿರಿಸಿಕೊಂಡು ಆಚರಣೆಗಿಳಿದ ಶಿವಯೋಗದ ಬಗ್ಗೆ ಮಾತನಾಡಿದೆ. ಶ್ರೀ ಅರವಿಂದರ Inteqral ಯೋಗದ ಕಲ್ಪನೆ 12ನೆಯ ಶತಮಾನದಲ್ಲೇ ಕ್ರಿಯಾರೂಪಕ್ಕಿಳಿದುದನ್ನು ವಿವರಿಸಿದೆ. ಭಾರತೀಯ ದರ್ಶನ ಶಾಸ್ತ್ರಗಳು ಉಲ್ಲೇಖಿಸುವ ಕರ್ಮಯೋಗ, ಹಠಯೋಗ, ಜ್ಞಾನಯೋಗ, ಭಕ್ತಿಯೋಗ ಮತ್ತು ಧ್ಯಾನಯೋಗಗಳಿಂದ ಪೂರ್ಣ ಭಿನ್ನ ಮತ್ತು ಸ್ವತಂತ್ರವಾಗಿ ವಿರಾಜಿಸುತ್ತ, ಅವುಗಳಲ್ಲಿನ ಒಂದೊಂದು ವೈಶಿಷ್ಟ್ಯಪೂರ್ಣ ಅಂಶಗಳನ್ನು ಪಡೆದು ಸಮನ್ವಯತೆ ಸಾಧಿಸಿ, ಮತ್ತೆ ಕೆಲವು ವಿಶೇಷಾಂಶಗಳನ್ನು ಹೊಂದಿ ಸಮಗ್ರವಾದ ಶಿವಯೋಗದ ಬಗ್ಗೆ ವ್ಯಾಪಕ ಪರಿಚಯ

ಮಾಡಿಕೊಟ್ಟೆ. ಹೇಗೆ ಅದು ಸರ್ವಾಂಗೀಣ ಉನ್ನತಿ, ಉದಾತ್ತೀಕರಣ, ಸರ್ವಾಂಗ ಲಿಂಗತ್ವಗಳ ಸಾಧನೆಯಲ್ಲಿ ಸಹಕಾರಿಯಾಗುವದೆಂಬುದನ್ನು ವಿವರಿಸಿದೆ. ಆಂಗ್ಲ ಶ್ರೋತೃಗಳೇ ಪ್ರಧಾನವಾದ ಆ ಸಭೆಯು ಇಷ್ಟಲಿಂಗ ವಿಜ್ಞಾನದ ಬಗ್ಗೆ ಭಾಷಣವನ್ನು ವಿಶೇಷ ಆಸ್ಥೆಯಿಂದ ಆಲಿಸಿತು. ನಂತರ ಸುದೀರ್ಘ ಚರ್ಚೆಯಾಯಿತು. ಶಿವಯೋಗ, ಕುಂಡಲಿನಿಯೋಗಗಳನ್ನು ಕುರಿತು ಪ್ರಶ್ನಿಸಿದಾಗ ಅಕ್ಕಮಹಾದೇವಿಯ ವಚನಗಳ ಉಲ್ಲೇಖದೊಡನೆ ಶಿವಯೋಗವು ಕುಂಡಲಿನೀ ಶಕ್ತಿಯನ್ನೂ ಹೇಗೆ ಜಾಗೃತಿಸಬಲ್ಲದೆಂಬ ಬಗ್ಗೆ ಮಾತನಾಡಿದೆ.

ಕುಂಡಲಿಯ ಸರ್ಪನು ತುಂಡ ಮೇಲಕೆ ತೆಗೆಯೆ
ಮಂಡಲವು ಮೂರು ಬೆಳಗಾಗಿ ಉರಿಯುವ. ಅ
ಖಂಡ ಜ್ಯೋತಿಯೊಳು ಬಯಲಾದೆ ॥
ಮೊರೆವ ನಾದವ ಕೇಳಿ ಉರಿವ ಜ್ಯೋತಿಯು ನೋಡಿ
ಸುರಿದ ಅಮೃತವ ಸವಿದುಂಡ ಕಾರಣದಿ
ತೊರೆದೆನು ಜನನ ಮರಣಗಳ ॥

ಅತ್ಯಂತ ಜಾಗರೂಕತೆಯಿಂದ ಭಾಷಣವನ್ನಾಲಿಸಿ, ಪ್ರಶ್ನೆ ಕೇಳಿ ಉತ್ತರದಿಂದ ಸಮಾಧಾನವಾದಾಗ ಸಂತೃಪ್ತಿ ಹೊಂದುತ್ತಿದ್ದ ಆ ಶ್ರೋತೃಗಳ ವರ್ತನೆ. ಪ್ರೌಢಿಮೆ ಬಹಳ ಆನಂದ ನೀಡುತ್ತಿತ್ತು.

8ನೇ ದಿನಾಂಕದಂದು ಡಾ॥ ದೇವಕುಮಾರರು ಚೆಷೈರ್ ಜಿಲ್ಲೆಯ ಚೀಡಲ್ ನಗರದಿಂದ ಬಂದರು. 9ನೇ ತಾರೀಖು ಭಾರತದಿಂದ ಆಗಮಿಸಲಿರುವ ಪೂಜ್ಯ ಗುರೂಜಿಯವರಿಗೆ ಭಕ್ತಿಪೂರ್ವಕ ಆಹ್ವಾನ ನೀಡಿ, ಕೆಲವು ದಿವಸಗಳ ಕಾಲವಾದರೂ ಆತಿಥ್ಯ ಪಡೆಯಲು ಬರಬೇಕು ಎಂದು ಬಿನ್ನೈಸಿದರು. ಸ್ವಯಂಪಾಕದ ಜವಾಬ್ದಾರಿ ನಾನು ಹೊತ್ತಿದ್ದರಿಂದ ತಮ್ಮ ಮನೆಯಿಂದ ಹೇರಳವಾಗಿ ದಿನಬಳಕೆಯ ಸಾಮಾನನ್ನು, ಭಾರತೀಯ ಪಾಕಕ್ಕೆ ಬೇಕಾದ ದಿನಸುಗಳನ್ನು ತಂದಿತ್ತು, ಆಮಂತ್ರಿಸಿ ಹೋದರು.

ಸೆಪ್ಟೆಂಬರ್ 9ನೇ ದಿನಾಂಕ ಸನಿಹಕ್ಕೆ ಸಾರುತ್ತಿತ್ತು. ಆತಿಥೇಯ ಸಂಸ್ಥೆಗಳ ಸದ್ಭಕ್ತರಿಗೆ ರೆಕ್ಕೆ-ಪುಕ್ಕ ಮೂಡತೊಡಗಿದ್ದವು. ಉತ್ಸಾಹ ಗರಿಗೆದರಿ ನಿಂತಿತ್ತು. ಸಂಭ್ರಮ-ಸಂತಸಗಳಿಂದ ಗುರೂಜಿಯವರ ಸ್ವಾಗತಕ್ಕೆ ಸಿದ್ಧತೆ ಮಾಡಿಕೊಳ್ಳ ತೊಡಗಿದರು.

ಅಲ್ಲಿಯ ಸದ್ಭಕ್ತರಿಗೆ ಸಂಭ್ರಮವೋ ಸಂಭ್ರಮ. ಸ್ವಾಗತಕ್ಕೆ ಸಿದ್ಧತೆ ಮಾಡಿ ಕೊಂಡರು. ಹೀಥ್ರೂ ವಿಮಾನ ನಿಲ್ದಾಣಕ್ಕೆ ನಾಲ್ಕಾರು ಕಾರುಗಳಲ್ಲಿ ಹೊರಡಲು

ಸಿದ್ಧರಾದರು. "ಹೇಗಿದ್ದರೂ ಗುರೂಜಿಯವರು ನೇರವಾಗಿ ಇಲ್ಲಿಗೇ ದಯಮಾಡಿಸುವ ರಲ್ಲ. ಇಷ್ಟೆಲ್ಲ ಜನರು ನಾಲ್ಕಾರು ವಾಹನಗಳಲ್ಲಿ ಹೋಗುವದೇಕೆ ?" "ಅದೆಂತು ಸಾಧ್ಯ. ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಬೇಡವೆ ? ಇಲ್ಲಿಗೆ ಬರುವತನಕ ಕಾಯಲು ನಮಗಾಗದು...." ಡಾ॥ ಶಿವಕುಮಾರರ ಆಗ್ರಹಪೂರ್ಣ ಆತುರ. ಕಾತುರಗಳು ವರ್ಣನಾತೀತ.

ಭಾರತದಿಂದ ಬರುತ್ತಿದ್ದಂತೆಯೇ ಯಾರ ಮನೆಯಲ್ಲಿ ಆತಿಥ್ಯ ? ತೀವ್ರವಾದ ವಾದವಿವಾದ. "ನಮ್ಮದು ಮಿಷನ್, ಆಮಂತ್ರಣ ನೀಡಿದವನು ನಾನು. ಮೊದಲು ನಮ್ಮಲ್ಲಿ...." ಚಮನ್‌ಲಾಲರ ಒತ್ತಾಯ. "ನೀವು ಏಕಾಂಗಿ, ಬ್ರಹ್ಮಚಾರಿ. ಉಪ ಚಾರ ಮಾಡಲು ಅನುಕೂಲವಿಲ್ಲ...." ಶಿವಕುಮಾರರ ಅಭಿಪ್ರಾಯ. ಅವರ ಉತ್ಕಟ ಭಕ್ತಿ ಕಂಡು ನನ್ನ ಹೃದಯ ತುಂಬುತ್ತಿತ್ತು.

ಕುಲವಿಲ್ಲ ಯೋಗಿಗಂ ಛಲವಿಲ್ಲ ಜ್ಞಾನಿಗಂ
ತೊಲೆ ಕಂಭವಿಲ್ಲ ಗಗನಕ್ಕೆ ಸ್ವರ್ಗದಲಿ
ಹೊಲೆಗೇರಿಯಿಲ್ಲ ಸರ್ವಜ್ಞ ॥
ಊರೆಲ್ಲ ನಂಟರು ಕೇರಿಯೆಲ್ಲವು ಬಳಗ
ಧಾರುಣಿಯೆ ಇನ್ನು ಪರದೈವವಾಗಿರಲು
ಯಾರನ್ನು ಬಿಡಲೋ ಸರ್ವಜ್ಞ ॥

ಬೆಟ್ಟದ ಬುಡದ ಕೊಳ್ಳದಲ್ಲಿ ನಿಂತು ನೋಡಿದಾಗ ಸುತ್ತಲಿನ ಪರಿಸರ ತುಂಬಾ ಮಿತವಾಗಿ ಕಾಣುವುದು. ಮೆಟ್ಟಲುಗಳನ್ನು ಏರುತ್ತ ಹೋದಂತೆ ಹೆಚ್ಚು ಹೆಚ್ಚು ಕಾಣ ಬಂದರೆ, ಗಿರಿಶೃಂಗದಲ್ಲಿ ನಿಂತು ನೋಡಿದಾಗ ಇನ್ನೂ ವಿಶಾಲವಾದ ವಲಯ ದೃಗ್ಗೋ ಚರವಾಗುವುದು. ಹೆಲಿಕ್ಯಾಪ್ಟರ್ ಅಥವಾ ವಿಮಾನದಲ್ಲಿ ಕುಳಿತು ನೋಡಿದಾಗ ವಿಸ್ತಾರ ಹಿರಿದಾಗುವುದು. ಅದೇ ರೀತಿ ಮನುಷ್ಯ ಮಾನಸಿಕವಾಗಿ ಮೇಲೇರುತ್ತ ಹೋದಂತೆ ಜಾತಿ, ಮತ, ಪಂಥ, ಭಾಷೆ, ವೇಷ, ದೇಶ ಎಲ್ಲವೂ ಕಲಸಿ ಹೋಗಿ ವಿಶ್ವಮಾನವ ನಾಗುವನು, ಎಲ್ಲರೂ ತನ್ನವರೆಂಬ ಭಾವ ಬಲಿವುದು. ಉತ್ತರ ಕರ್ನಾಟಕದ ಸಭ್ಯ ನೊಬ್ಬ ರಾಜಧಾನಿಗೆ ಬಂದಾಗ ಇನ್ನೋರ್ವ ತನ್ನ ತಾಲ್ಲೋಕು ಅಥವಾ ಜಿಲ್ಲೆಯ ವ್ಯಕ್ತಿಯ ಭೇಟಿಯಾದರೆ ಅವನಿಗೆ ಏನೋ ಸಂಭ್ರಮ. ತನ್ನವನೊಬ್ಬ ದೊರೆತ ಸಂತಸ. ಅನ್ಯ ರಾಜ್ಯಕ್ಕೆ ಹೋದಾಗ ಓರ್ವ ಕನ್ನಡಿಗ ಸಿಕ್ಕರೂ ಸಾಕು : ಆಗಲೇ ಸ್ನೇಹದ ಬೆಸುಗೆ. ಅದೇ ವಿದೇಶಕ್ಕೆ ಹೋದಾಗ 'ಭಾರತೀಯ' ಎಂದರೆ ಸಾಕು. ಅವನು ಯಾವುದೇ ಜಾತಿ, ವೇಷ, ಭಾಷೆಯವನಿದ್ದರೂ ಆತ್ಮೀಯತೆ ಬಂಧಿಸುವುದು. ಉತ್ತರ ಭಾರತದ ಈ ಸಜ್ಜನರ ಭಕ್ತಿ ಆನಂದದಾಯಕ ಪ್ರಸಂಗವಾಗಿತ್ತು.

ಇನ್ನೊಂದು ವಿಷಯವೆಂದರೆ ಇವರೆಲ್ಲ ವೈಚಾರಿಕ ಭಕ್ತರು. ಅತ್ಯಂತ ಶ್ರೇಷ್ಠ ಹುಟ್ಟಿದ ಬುದ್ಧಿ ಜೀವಿಗಳು. ವಿದೇಶಕ್ಕೆ ವಿದ್ಯಾರ್ಥಿ ಅಥವಾ ಉದ್ಯೋಗಾರ್ಥಿಗಳಾಗಿ ಹೋದವರು ನಮ್ಮ ನಾಡಿನ ಬುದ್ಧಿಶಾಲಿಗಳು ತಾನೆ ? ಆದರಿಂದಾಗಿ ಬಹಳ ಮಟ್ಟಿಗೆ ಅವರದ್ದು ಅರ್ಥಸಹಿತ ವೈಚಾರಿಕ ಭಕ್ತಿಯೇ ವಿನಾ ನಮ್ಮವರಂತೆ ವೈಭವಾತ್ಮಕ ಮೂಢ ಭಕ್ತಿಯಲ್ಲ. ಬಹುಪಾಲು ನಮ್ಮ ನೆಲದ ಭಕ್ತವೃಂದ ನಿರೀಕ್ಷಿಸುವುದು ವೈಭವದ ಪಲ್ಲಕ್ಕಿ, ಫಳಫಳಿಸುವ ವಜ್ರಮುಕುಟ, ಥಳಥಳಿಸುವ ಪಟ್ಟೆಪೀತಾಂಬರ. ಪಾಶ್ಚಿಮಾತ್ಯ ಬುದ್ಧಿಜೀವಿಗಳು ಮತ್ತು ಆ ಪರಿಸರದಿಂದ ಸಂಸ್ಕಾರಿತರಾದ ಬುದ್ಧಿ ಜೀವಿಗಳು ಬಯಸುವುದು ಸರಳತನ. ಧರ್ಮಪ್ರಸಾರದ ಕಳಕಳಿ, ಜ್ಞಾನಮುಕುಟ, ಉನ್ನತ ಆದರ್ಶ-ಸೇವಾಕಾಂಕ್ಷೆಗಳನ್ನು. ಕೇವಲ ಗಡಗಡ ಗುಡುಗುಡು ಎನ್ನುವ ಒಣದಾದ ಮೋಡಗಳು ಭಾರತದ ಭಕ್ತರಿಗೆ ಬೇಕಾಗಿದ್ದಾರೆ. ನೀರವ ನಿರಾಡಂಬರವಾಗಿ ಜ್ಞಾನ ವನ್ನೆರೆಯುವ ವರ್ಷಾಕಾಲದ ಪರಿಪಕ್ವ ಮೋಡಗಳು ಅವರಿಗೆ ಬೇಕು. (ಸಶೇಷ)



ವಿಶ್ವಕಲ್ಯಾಣ ಮಿಷನ್‌ನ ಛೇರ್ಮನ್ ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳು ಅಶೋಕ್ ಕುಮಾರ್‌ರವರೊಡನೆ ಅಪ್ಪಾಲೋಚನೆಯಲ್ಲಿ

ಓಂ ಬಸವ

ಬಸವ ಗಂಗೋತ್ರಿಯು ಉದ್ಘಾಟನಾ ಸಮಾರಂಭ

ಸಜೀವ ಸಾಧಕರ ಪ್ರಯೋಗ ಕ್ಷೇತ್ರವಾಗುವ, ಅನುಭಾವಿಗಳ ಸಂಗಮವಾಗುವ ಸಾಹಿತಿಗಳ ಸರಸಿಯಾಗುವ, ತತ್ತ್ವಜ್ಞಾನಿಗಳ ನೆಲೆಯಾಗುವ, ಮಾನವೀಯ ಸೇವೆ — ತ್ಯಾಗಗಳ ಎಡೆಯಾಗುವ, ಮುಮುಕ್ಷುಗಳ ಸಾಧನಾ ಮಂದಿರವಾಗುವ ಸಂಸ್ಥೆಯೊಂದರ ಸ್ಥಾಪನೆ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳವರ ಹಾಗೂ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಬಹುದಿನಗಳ ಕನಸು, ಇದೀಗ ನನಸಾಗುವ ಸುಸಮಯ ಒದಗಿತ್ತು.

ದಿನಾಂಕ ೮-೧೦-೭೮ರಂದು ಪೂಜ್ಯದ್ವಯರ ಬೃಹತ್ ಯೋಜನೆಯ ಕನಸು ಸಾಂಕೇತಿಕವಾಗಿ ರೂಪುಗೊಂಡಿತು. ಅಂದು ಬೆಳಿಗ್ಗೆ ೧೦ ಗಂಟೆಯ ವೇಳೆಗೆ "ಬಸವ ಗಂಗೋತ್ರಿ" ಫಲಕ ಮೇಲೆತ್ತಿ ನಿಂತು, ತಾ ಹೊತ್ತ ಕಾವಿ ಧ್ವಜವನ್ನು ಹಾರಾಡಿಸಿತು. ಸತ್ತ ಸಂಪ್ರದಾಯದ ಕಟ್ಟಳೆಯನ್ನು ಮುರಿದು, ಸತ್ ಸಂಪ್ರದಾಯದ ದಿಟ್ಟ ಹೆಜ್ಜೆ ಯನ್ನಿಡುವಂತೆ, ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಸುಂದರವಾದ ಗೇಟಿನ ಕೀಲಿ ಯನ್ನು ತೆರೆದ ನಂತರ, ಶರಣ ಸಮುದಾಯ ಟೇಪನ್ನು ಬಿಚ್ಚಿತು. ಅವುಗಳಿಗೆ ತೂಗು ಹಾಕಿದ್ದ ಪುಷ್ಪಜೋಳಿಗೆ ಜಾರಿ ಬಿದ್ದು ಹೂವನ್ನು ಚೆಲ್ಲಿದವು. ನಂತರ ನೇತ್ರದಾನಿಗಳಾದ ಡಾ॥ ಎಂ. ಸಿ. ಮೋದಿಯವರಿಂದ "ಪ್ರಾರ್ಥನಾ ಮಂದಿರ"ದ ಉದ್ಘಾಟನೆ ನೆರವೇರಿತು. ಧರ್ಮದಾಸೋಹಿಗಳಾದ ಶರಣ ಎ. ಎಂ. ಬಸವೇಗೌಡರು 'ಬಸವ ಗುರುಕುಲ' ಶಂಕು ಸ್ಥಾಪನೆ ಮಾಡಿದರು. ಗ್ರಾಮೀಣ ಅಭಿರುದ್ಧಿ ಸಚಿವರಾದ ಶರಣ ಕೆ. ಪ್ರಭಾಕರ್ ರವರು 'ನಾಗಲಾಂಬಿಕಾ ಅತಿಥಿ ಗೃಹ' ಉದ್ಘಾಟನೆ ಮಾಡಿದರು. 'ಸರ್ವಜ್ಞ ವೃದ್ಧಾಲಯ'ವನ್ನು ಕೆ.ಪಿ.ಸಿ.ಸಿ. ಕಾರ್ಯದರ್ಶಿಗಳಾದ ಶರಣ ಡಿ. ಎಂ. ಸಿದ್ಧಯ್ಯ ನವರು ನೆರವೇರಿಸಿದರು. 'ಚನ್ನಬಸವ ಗ್ರಂಥಾಲಯ' ಉದ್ಘಾಟನೆಯನ್ನು ಶರಣ ಎಂ. ಪಿ, ಈಶ್ವರಪ್ಪನವರು ನೆರವೇರಿಸಿದರು. ನಿವೃತ್ತ ಉಪಕುಲಪತಿಗಳಾದ ಡಾ॥ ಜವರೇಗೌಡರು 'ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ'ವನ್ನು ಉದ್ಘಾಟಿಸಿದರು. 'ಗಂಗಾಂಬಿಕಾ ಪ್ರಸಾದ ನಿಲಯ'ವನ್ನು ಡಾ॥ ಲಲಿತಾ ಗುರುಬಸವಯ್ಯನವರು ಉದ್ಘಾಟಿಸಿದರು. ಕೊನೆಯದಾಗಿ, ಧಾರ್ಮಿಕ ನೇತಾರರಾದ ಶರಣ ಎನ್. ಎಸ್. ಮುಗಿಗೆಪ್ಪನವರು 'ಹೇಮರೆಡ್ಡಿ ಮಲ್ಲಮ್ಮ' ಗೋಶಾಲೆಯ ಉದ್ಘಾಟನೆ ನೆರವೇರಿಸಿದರು.


ಶರಣ ಮಹನೀಯರಿಂದ ಉದ್ಘಾಟನಾ ಸಮಾರಂಭ ಸಾಂಕೇತಿಕವಾಗಿ ಜರುಗಿದ

ನಂತರ, ಉದ್ಘಾಟಕರಾದ ಅತಿಥಿಗಳಿಂದ ಭಾಷಣ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮ ಸಾಮೂಹಿಕ ಪ್ರಾರ್ಥನೆಯಿಂದ ಪ್ರಾರಂಭವಾಯ್ತು. ಅತಿಥಿಗಳ, ಶರಣ ಬಂಧುಗಳೆಲ್ಲರ ಸ್ವಾಗತವನ್ನು ಶಾಸಕರಾದ ಹೆಚ್. ಗಂಗಾಧರನ್ ನೆರವೇರಿಸಿದರು. ಡಾ॥ ಎಂ. ಸಿ. ಮೋದಿಯವರು ಮತ್ತು ಈಶ್ವರಪ್ಪನವರು ಸಂಸ್ಥೆಯ ಚಟುವಟಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಸಂಸ್ಥೆ ಹೊಂದಿರುವ ಧ್ಯೇಯಾದರ್ಶಗಳು ಆದಷ್ಟು ಬೇಗ ಕ್ರಿಯಾರೂಪಕ್ಕೆ ಬರಲೆಂದು ಹಾರೈಸಿದರು. ಶರಣರಾದ ಕೆ. ಪ್ರಭಾಕರ್‌ರವರು ವಿಶ್ವ ಕಲ್ಯಾಣ ಮಿಷನ್ ಹಮ್ಮಿಕೊಂಡಿರುವ ಬೃಹತ್ ಯೋಜನೆಗಳ ಬಗ್ಗೆ, ಸತ್ತ ಸಂಪ್ರದಾಯಗಳ ಎದುರು ತನ್ನದೇ ಆದ ಒಳ್ಳೆಯ ಮಾರ್ಗದಲ್ಲಿ ಸಮಾಜವನ್ನು ತಿದ್ದಲೆತ್ನಿಸುತ್ತಿರುವ ರೀತಿಯ ಬಗ್ಗೆ ತುಂಬಾ ಅಭಿಮಾನದ ಮಾತುಗಳನ್ನು ಆಡಿದರು. ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ ಉದ್ಘಾಟಿಸಿದ ಡಾ॥ ಜವರೇಗೌಡರು, ಧರ್ಮ ಪ್ರಚಾರಕರ ಕೊರತೆಯಿಂದ ಧರ್ಮದ ತಿರುಳು ಜನ ಮನಕ್ಕೆ ಮುಟ್ಟುತ್ತಿಲ್ಲ. ಉತ್ತಮವಾದ ತತ್ತ್ವ ಹೊಂದಿರುವ ಈ ಬಸವ ಧರ್ಮವನ್ನು ಪ್ರಚಾರ ಮಾಡುವ ಜನಗಳು ಈ ಬಸವ ಗಂಗೋತ್ರಿಯಿಂದ ಸಾಕಷ್ಟು ಹೊರಬಂದು, ಸಮಾಜವನ್ನು ತಿದ್ದಲಿ ಎಂದು ಹಾರೈಸಿದರು. ಧಾರ್ಮಿಕ ನೇತಾರರಾದ ಶರಣ ಎನ್. ಎಸ್. ಮುರಿಗೆಪ್ಪನವರು ಪೂ. ಮಾತಾಜಿಯವರು ಮತ್ತು ಪೂ. ಸ್ವಾಮೀಜಿಯವರು ಮಾಡಲು ಹೊರಟಿರುವ ಸಾಹಸಮಯವಾದ ಕಾರ್ಯಕ್ಕೆ ಚಿಕ್ಕಮಗಳೂರು ಜನತೆಯ ಪರವಾಗಿ ಕೃತಜ್ಞತೆ ಅರ್ಪಿಸಿ, ಪೂಜ್ಯರು ಹೊತ್ತಿರುವ ಮಣಿಹದ ಪೂರೈಕೆಗೆ ತಾವು ತನು-ಮನ-ಧನವನ್ನು ಅರ್ಪಿಸಿ ದುಡಿವುದಾಗಿ ಆಶ್ವಾಸನೆ ನೀಡಿದರು.

ಕಾರ್ಯಕ್ರಮದ ನೇತೃತ್ವ ವಹಿಸಿಕೊಂಡಿದ್ದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು 'ಬಸವ ಗಂಗೋತ್ರಿ'ಯಲ್ಲಿ ಮುಂದೆ ಮಾಡಲಿರುವ ಯೋಜನೆಯನ್ನು ತಿಳಿಸಿ, ಈ ಯೋಜನೆಗೆ ಜನಗಳೆಲ್ಲರ ಸಹಾಯ-ಸಹಕಾರ ಅತ್ಯಗತ್ಯವೆಂದು ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶರಣ ಐ. ಎಂ. ಮಗದಮ್‌ರವರು ಚಿಕ್ಕದಾಗಿ ಹಾಗೂ ಚೊಕ್ಕವಾಗಿ ವಿಶ್ವಕಲ್ಯಾಣ ಮಿಷನ್ನಿನ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಗಂಗೋತ್ರಿಯ ಯೋಜನೆಗಳು ಕಾರ್ಯರೂಪುಗೊಳ್ಳಲು ತಾವೂ ಆದಷ್ಟು ಸಹಕರಿಸುವುದಾಗಿ ಹೇಳಿದರು. ಆಶೀರ್ವಚನವೀಯುತ್ತಾ ಪೂಜ್ಯ ಲಿಂಗಾನಂದ ಸ್ವಾಮಿಗಳು ಬಸವಣ್ಣನ ಕೈಯ ಗೊಂಬೆಗಳು ನಾವು, ಅವನಾಡಿಸಿದಂತೆ ಆಡುತ್ತಿರುವೆವು. ಆತನ ತತ್ತ್ವ ಪ್ರಚಾರವನ್ನು ನಮ್ಮ ಮೂಲಕ ಮಾಡಿಸಿಕೊಳ್ಳುತ್ತಿದ್ದಾನೆ ಎಂದು ಹೇಳಿದರು. ಪೂಜ್ಯರ ಆಶೀರ್ವಚನದ ನಂತರ ಅಥಿತಿಗಳೆಲ್ಲರಿಗೆ ಎಸ್. ಮಹಾದೇವಪ್ಪನವರಿಂದ ಮಾಲಾರ್ಪಣೆಯಾಯ್ತು. ಶರಣ ಕೆ. ಬಿ. ಷಣ್ಮುಖಪ್ಪನವರಿಂದ ಶರಣು ಸಮರ್ಪಣೆಯಾದ ನಂತರ, ಮಂಗಲಾದೊಡನೆ ಕಾರ್ಯಕ್ರಮ ಮುಕ್ತಾಯವಾಯ್ತು. ಗೋ. ರು. ಚನ್ನಬಸಪ್ಪನವರು ಕಾರ್ಯಕ್ರಮದ ಸೂತ್ರಧಾರರಾಗಿದ್ದರು.

ಬೆಂಗಳೂರಿನಿಂದ ಸುಮಾರು ಸಾವಿರಾರು ಜನ ಗಂಗೋತ್ರಿಯಲ್ಲಿ ನಡೆಯಲಿರುವ ಕಾರ್ಯಕ್ರಮ ನೋಡಲು ಉತ್ಸುಕರಾಗಿ ಹೋಗಿದ್ದರು. ಅವರಿಗೆಲ್ಲಾ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಕುಂಬಳಗೋಡಿನ ಜನಗಳಿಗೂ ಸೇರಿ ಸಾವಿರಾರು ಜನರ ಪ್ರಸಾದದ ವಿತರಣೆಯ ನಂತರ ಅಂದಿನ ಸಮಾರಂಭ ಮಂಗಲವಾಯ್ತು.

ವರದಿ : ಶಿವರಾಮು ಚಂದ್ರಕಂಠಿ



ಬಸವ ಮಂಟಪದಲ್ಲಿ ಮಂಗಲಾಚರಣೆಯ ನಂತರ ಅಶೋಕ್ ಕುಮಾರ್‌ರವರು ಅತ್ಯಂತ ಭಕ್ತಿಯಿಂದ ವಿಭೂತಿ ಇಟ್ಟುಕೊಳ್ಳುತ್ತಿರುವುದು.


ದಿ. ೮-೧೦-೧೯೭೮ರಂದು ಜರುಗಿದ

"ಬಸವ ಗಂಗೋತ್ರಿ"


ಕೇಂದ್ರದ ಪ್ರಾರಂಭೋತ್ಸವ




ಸಂಪ್ರದಾಯದ ಬಂಧನದಲ್ಲಿರುವ
ಸಮಾಜದ ಬಿಡುಗಡೆಯ ಪ್ರಯತ್ನದ ಸಂಕೇತ
ಬಸವ ಗಂಗೋತ್ರಿಯ ದ್ವಾರವನ್ನು ತೆಗೆಯುತ್ತಿರುವ
ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು.




ಬಸವ ಗಂಗೋತ್ರಿಯ ಮಹಾದ್ವಾರ

































ಹೇಮರೆಡ್ಡಿ ಮಲ್ಲಮ್ಮ ಗೋಶಾಲೆಯ ಆರಂಭ
ಶ್ರೀ ಎಸ್. ಎಸ್. ಮುರಿಗೆಪ್ಪ ಅವರಿಂದ
ಹಸು ನೀಲಾಂಬಿಕೆಯ ಆಗಮನ, ಕರು ಮುಕ್ತಾಯಕ್ಕನೊಡನೆ



೫೬ನೇ ಪುಟದಲ್ಲಿನ ಚಿತ್ರಗಳ ವಿವರ

ಸಾಮಾಜಿಕ ಸಮಸ್ಯೆಗಳ ಗಂಟು ಬಿಚ್ಚಿ ಹೊಸ ಪರಿಸರಕ್ಕೆ ಪ್ರವೇಶ

ಬಸವ ಗಂಗೋತ್ರಿಯ ಉದ್ಘಾಟನೆ ಶರಣ ಸಮುದಾಯದಿಂದ.

"ಎಲ್ಲರಿಗೂ ಸಮಬಾಳು, ಎಲ್ಲರಿಗೆ ಸಮಪಾಲು"

ಕೆಳಗಿನ ಚಿತ್ರ : 'ಬಸವ ಮಂಟಪ' ಪ್ರಾರ್ಥನಾ ಮಂದಿರ ಉದ್ಘಾಟಿಸಿದ ಡಾ॥ ಎಂ. ಸಿ. ಮೋದಿ ಅವರಿಂದ ಮಾನವೀಯ ಮೌಲ್ಯಗಳ ಸಂದೇಶ

೫೭ನೇ ಪುಟದಲ್ಲಿನ ಚಿತ್ರಗಳ ವಿವರ

ಮೇಲಿನ ಚಿತ್ರ : 'ಸರ್ವಜ್ಞ ವೃದ್ಧಾಲಯ ಆರಂಭ' ಸಂಪ್ರದಾಯದ ಕೋಟೆಗಳ ಮೇಲೆ ಧಾಳಿಯಿಡಲು ಕರೆ ನೀಡಿದ ಶ್ರೀ ಡಿ. ಎಂ. ಸಿದ್ದಯ್ಯನವರಿಂದ.

ಕೆಳಗಿನ ಚಿತ್ರ : 'ಚನ್ನಬಸವ ಗ್ರಂಥಾಲಯ' ಉದ್ಘಾಟಿಸಿದ ಶ್ರೀ ಎಂ.ಪಿ. ಈಶ್ವರಪ್ಪ.

೫೮ನೇ ಪುಟದಲ್ಲಿನ ಚಿತ್ರಗಳ ವಿವರ

ಮೇಲಿನ ಚಿತ್ರ : ಡಾ॥ ದೇ. ಜವರೇಗೌಡರಿಂದ ಆರಂಭ, ಆಧ್ಯಾತ್ಮ ಚಿಂತನೆಯ ತಾಣ ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ

ಕೆಳಗಿನ ಚಿತ್ರ : ಶ್ರೀ ಎ. ಎಂ. ಬಸವೇಗೌಡರಿಂದ ವಸತಿ ಸಹಿತ ವಿದ್ಯಾಲಯಕ್ಕೆ ಶಂಕುಸ್ಥಾಪನೆ.

೫೯ನೇ ಪುಟದಲ್ಲಿನ ಚಿತ್ರಗಳ ವಿವರ

ಮೇಲಿನ ಚಿತ್ರ : ಸಭಿಕರಿಗೆ ಸ್ವಾಗತ—ಶ್ರೀ ಹೆಚ್, ಗಂಗಾಧರನ್, ಶಾಸಕರವರಿಂದ. ಧರ್ಮ ಕ್ರಾಂತಿಯ ದೀಪ ಹಚ್ಚಿ, ದುಡಿವರಿಗಿಲ್ಲಿ ಸ್ವಾಗತ.

ಕೆಳಗಿನ ಚಿತ್ರ : ಕಾರ್ಯಕ್ರಮ ನಿರ್ವಹಣೆ ಗೊ. ರು. ಚನ್ನಬಸಪ್ಪನವರಿಂದ "ಬಿಟ್ಟು ಬಾ ಒಣ ಮಡಿಯ ಬಟ್ಟೆಯನ್ನು, ಮುಟ್ಟು ಬಾ ಈ ಮಣ್ಣಿ ಹುಡಿಯ ನೆಲವನ್ನು" ಎಂದು ಗುರುವರ್ಗಕ್ಕೆ ಕರೆ.

೬೦ನೇ ಪುಟದಲ್ಲಿನ ಚಿತ್ರಗಳ ವಿವರ

ಮೇಲಿನ ಚಿತ್ರ : ನಾಗಲಾಂಬಿಕಾ ಅತಿಥಿಗೃಹ ಉದ್ಘಾಟನೆ—ಶ್ರೀ ಸಚಿವ ಪ್ರಭಾಕರ್


ಕೆಳಗಿನ ಚಿತ್ರ : ದಾನಿಗಳೂ, ಸಮಾರಂಭದ ಅತಿಥಿಗಳೂ ಆದ ಎ.ಎಂ. ಬಸವೇಗೌಡರಿಗೆ ಮಾಲಾರ್ಪಣೆ ಶ್ರೀ ಎಸ್. ಮಹಾದೇವಪ್ಪನವರಿಂದ.


೬೧ನೇ ಪುಟದಲ್ಲಿನ ಚಿತ್ರಗಳ ವಿವರ

ಮೇಲಿನ ಚಿತ್ರ : ಅಧ್ಯಕ್ಷ ಭಾಷಣ ನಿವೃತ್ತ ಪ್ರಧಾನ ಇಂಜಿನಿಯರ್ ಶ್ರೀ ಐ. ಎಂ. ಮುಗದುಮ್‌ರಿಂದ,


ಕೆಳಗಿನ ಚಿತ್ರ : ಶರಣು ಸಮರ್ಪಣೆ ಶ್ರೀ ಕೆ. ಬಿ. ಷಣ್ಮುಖಪ್ಪನವರಿಂದ.

೬೨ನೇ ಪುಟದ ಚಿತ್ರ : ಬಸವ ಗಂಗೋತ್ರಿಯಲ್ಲಿ ನಿಸರ್ಗದ ನೊಸಲಧಾರೆ ನಿತ್ಯ ಚೇತನದ ಸಂದೇಶ ಹೊತ್ತು, ಹರಿಯುತ್ತಿರುವ 'ಬಸವ ಗಂಗಾ' ವಾಹಿನಿ





ಜಮೀನಿನ ಹಣವನ್ನು ಆಶೀರ್ವಾದಪೂರ್ವಕವಾಗಿ ಪೂಜ್ಯ ಮಾತಾಜಿಯವರಿಂದ



Correspond to :   Phone : 82335

BASAVA MANTAPA

No. 24, Chord Road, 2nd Block, Rajajinagar
Bangalore - 560010